‘ಮಾದಿಗ ಸಮುದಾಯದ ಒಂದು ಅಧ್ಯಯನ’

(ಕೊಪ್ಪಳ ಪಟ್ಟಣ ಅನುಲಕ್ಷಿಸಿ)

ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ
ಸಂಶೋಧನ ಕಿರುಪ್ರಬಂಧ

ಸಂಶೋಧಕ
ನಿಂಗಪ್ಪ ಎಂ. ದೊಡ್ಡಮನಿ

ಮಾರ್ಗದರ್ಶಕರು
ಪ್ರೊ. ಮಂಜುನಾಥ ಬೇವಿನಕಟ್ಟಿ
ಪ್ರಾಧ್ಯಾಪಕರು
ಜಾನಪದ ಅಧ್ಯಯನ ವಿಭಾಗ

ಜಾನಪದ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬
೨೦೦೬-೦೭

176

'ಮಾದಿಗ ಸಮುದಾಯದ ಒಂದು ಅಧ್ಯಯನ'

(ಕೊಪ್ಪಳ ಪಟ್ಟಣ ಅನುಲಕ್ಷಿಸಿ)

ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ

ಸಂಶೋಧನ ಕಿರುಪ್ರಬಂಧ

ಸಂಶೋಧಕ

ನಿಂಗಪ್ಪ ಎಂ.ದೊಡ್ಡಮನಿ

ಮಾರ್ಗದರ್ಶಕರು

ಪ್ರೊ. ಮಂಜುನಾಥ ಬೇವಿನಕಟ್ಟಿ

ಪ್ರಾಧ್ಯಾಪಕರು

ಜಾನಪದ ಅಧ್ಯಯನ ವಿಭಾಗ

ಜಾನಪದ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ- ೫೮೩೨೭೬

೨೦೦೬-೦೭

ಪ್ರಮಾಣ ಪತ್ರ

"ಮಾದಿಗ ಸಮುದಾಯದ ಒಂದು ಅಧ್ಯಯನ" (ಕೊಪ್ಪಳ ಪಟ್ಟಣ ಅನುಲಕ್ಷಿಸಿ) ಎಂಬ ಶೀರ್ಷಿಕೆಯ ಕಿರುಪ್ರಬಂಧವನ್ನು ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಜಾನಪದ ಅಧ್ಯಯನ ವಿಭಾಗಕ್ಕೆ ಅರ್ಪಿಸಲು ಡಾ. ಮಂಜುನಾಥ ಬೇವಿನಕಟ್ಟಿ, ಪ್ರಾಧ್ಯಾಪಕರು, ಜಾನಪದ ಅಧ್ಯಯನ ವಿಭಾಗ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಈ ಕಿರು ಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣಿಕರಿಸುತ್ತೇನೆ.

ದಿನಾಂಕ : ೧೦-೦೮-೨೦೦೭

ಸ್ಥಳ : ವಿದ್ಯಾರಣ್ಯ

(ನಿಂಗಪ್ಪ ಎಂ. ದೊಡ್ಡಮನಿ)
ಎಂ.ಫಿಲ್.ಸಂಶೋಧನಾ ವಿದ್ಯಾರ್ಥಿ
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ.
ವಿದ್ಯಾರಣ್ಯ-೫೮೩೨೭೬

ದೃಢೀಕರಣ ಪತ್ರ

"ಮಾದಿಗ ಸಮುದಾಯದ ಒಂದು ಅಧ್ಯಯನ" (ಕೊಪ್ಪಳ ಪಟ್ಟಣ ಅನುಲಕ್ಷಿಸಿ) ಎಂಬ ಶೀರ್ಷಕೆಯ ಕಿರುಪ್ರಬಂಧವನ್ನು **ಶ್ರೀ ನಿಂಗಪ್ಪ ಎಂ. ದೊಡ್ಡಮನಿ,** ಇವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಕಿರುಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : ೧೦-೦೮-೨೦೦೭

ಸ್ಥಳ : ವಿದ್ಯಾರಣ್ಯ

(ಪ್ರೊ. ಮಂಜುನಾಥ ಬೇವಿನಕಟ್ಟಿ)
ಮಾರ್ಗದರ್ಶಕರು
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ.
ವಿದ್ಯಾರಣ್ಯ-೫೮೩ ೨೭೬

ಅರಿಕೆ

ಪ್ರಾಚೀನ ಕಾಲದಿಂದಲೂ ಅನೇಕ ರೀತಿಯ ಶೋಷಣೆಗಳನ್ನು, ಸಂಕಷ್ಟಗಳನ್ನು ಎದುರಿಸುತ್ತಲೇ ಬಂದಿರುವ ದಲಿತ ಸಮಾಜ ಅದರಲ್ಲೂ ಮಾದಿಗ ಸಮುದಾಯದಲ್ಲಿ ಹುಟ್ಟಿದ ನಾನು ಈ ಸಮುದಾಯದ ಬಗೆಗೆ ಅಧ್ಯಯನ ಮಾಡಬೇಕೆಂಬ ತೀವ್ರವಾದ ಆಸಕ್ತಿ ಮೊದಲಿನಿಂದಲೂ ಇತ್ತು. ಅದಕ್ಕೆ ಪೂರಕ ಎನ್ನುವಂತೆ ನಮ್ಮ ನೆಚ್ಚಿನ ಗುರುಗಳಾದ ಡಾ. ಮಂಜುನಾಥ ಬೇವಿನಕಟ್ಟಿ ಅವರು ಈ ನನ್ನ ಅಭಿಲಾಷೆಯನ್ನು ಕಂಡು ಮಾದಿಗ ಸಮುದಾಯದ ಬಗೆಗೆ ಅಧ್ಯಯನಮಾಡಲು ಪ್ರೇರೇಪಿಸಿದ್ದು ಈ ಕಿರುಪ್ರಬಂಧ ಸಿದ್ಧತೆಗೆ ಕಾರಣವಾಯಿತು.

ಕನ್ನಡ ವಿಶ್ವವಿದ್ಯಾಲಯದಲ್ಲಿ ಅಧ್ಯಯನಕ್ಕೆ ಅವಕಾಶ ಕಲ್ಪಿಸಿಕೊಟ್ಟ ಮಾನ್ಯ ಕುಲಪತಿಗಳಾದ ಡಾ. ಬಿ.ಎ. ವಿವೇಕ ರೈ ಹಾಗೂ ಡಾ. ಕೆ.ವಿ. ನಾರಾಯಣ ಅವರುಗಳಿಗೆ, ಮಾನ್ಯ ಕುಲಸಚಿವರಾದ ಶ್ರೀ ಶಂಕರ ಹಾಗೂ ಅಧ್ಯಯನಾಂಗದ ನಿರ್ದೇಶಕರಾದ ಡಾ. ಟಿ.ಆರ್. ಚಂದ್ರಶೇಖರ್ ಹಾಗೂ ಡಾ. ಪಾಂಡುರಂಗ ಬಾಬು ಅವರಿಗೆ ತುಂಬುಹೃದಯದ ಕೃತಜ್ಞತೆಗಳು.

ನನಗೆ ಮಾದಿಗ ಸಮುದಾಯದ ಬಗ್ಗೆ ಆಸಕ್ತಿ ಮೂಡಿಸಿ ನನ್ನ ಬರಹವನ್ನು ತಿದ್ದಿ ಸೂಕ್ತ ಸಲಹೆಗಳನ್ನು ನೀಡಿ ಮಾರ್ಗದರ್ಶನ ಮಾಡಿದ ಡಾ. ಮಂಜುನಾಥ ಬೇವಿನಕಟ್ಟಿ ಅವರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳು. ನಮ್ಮ ವಿಭಾಗದ ಅಧ್ಯಾಪಕರುಗಳಾದ ಡಾ. ಸ.ಚಿ. ರಮೇಶ, ಡಾ. ಹೆಬ್ಬಾಲೆ ಕೆ. ನಾಗೇಶ, ಡಾ. ಮೊಗಳ್ಳಿ ಗಣೇಶ, ಡಾ. ಸಿ.ಟಿ. ಗುರುಪ್ರಸಾದ, ಡಾ. ಹರಿಶ್ಚಂದ್ರ ದಿಗ್ಗಂಗಿಕರ್ ಅವರಿಗೆ ಕೃತಜ್ಞತೆಗಳು.

ನನ್ನ ವಿದ್ಯಾಭ್ಯಾಸ ಮುಂದುವರೆಯಲು ಕಾರಣೀಭೂತರಾದ ತಾಯಿ ಶ್ರೀಮತಿ. ಲಕ್ಷ್ಮವ್ವ ದೊಡ್ಡಮನಿ, ಒಡಹುಟ್ಟಿದ ಅಣ್ಣ ರಾಜಶೇಖರ ದೊಡ್ಡಮನಿ ಹಾಗೂ ಗತಿಸಿದ ತಂದೆ ಮಹಾದೇವಪ್ಪ ದೊಡ್ಡಮನಿ ಹಾಗೂ ನನ್ನ ಕುಟುಂಬದ ಎಲ್ಲರಿಗೂ ವಿಶೇಷ ಗೌರವ ಸಲ್ಲಿಸುತ್ತೇನೆ.

ಸದಾ ನನ್ನ ಹಿತವನ್ನು ಬಯಸುವ ಆತ್ಮೀಯರಾದ ರಾಮು ಕೆ. ಕಿರಣ್ ಮುದ್ಲಾಪುರ, ಡಿ. ಓಬಯ್ಯ, ಜಗದೀಶ, ಎ.ಡಿ. ಬಸವರಾಜ, ಹನುಮಂತರಾಯ ದೊಡ್ಡಮನಿ, ಹೋಳಿ ಬಸವರಾಜ, ತಾರಾಮತಿ, ಕೃಷ್ಣವೇಣಿ ಆರ್. ಮಲ್ಲಿಕಾರ್ಜುನ ಹೊಸಮನಿ, ಗವಿಸಿದ್ಧಪ್ಪ ದೊಡ್ಡಮನಿ, ಸಾಧಿಕ್‌ಅಲಿ, ಹರೀಶ್ ಎಚ್.ಎಸ್., ಎಚ್.ವಿ. ರಾಜಾಭಕ್ಷಿ ಹಾಗೂ ನನ್ನ ಕ್ಷೇತ್ರಕಾರ್ಯದಲ್ಲಿ ಸಹಕರಿಸಿದ ಸಮಸ್ತ ಮಾದಿಗ ಸಮುದಾಯದವರಿಗೆ.

ಸಂಶೋಧನೆಗೆ ಪೂರಕವಾದ ಪುಸ್ತಕಗಳನ್ನು ಒದಗಿಸಿದ ಗ್ರಂಥಾಲಯದ ಸಿಬ್ಬಂದಿಯವರಿಗೆ ಮತ್ತು ನನ್ನ ಕಿರುಪ್ರಬಂಧವನ್ನು ಅಂದವಾಗಿ ಡಿ.ಟಿ.ಪಿ ಮಾಡಿದ ಇಂಟೈಡ್ ಗ್ರಾಫಿಕ್ಸ್‌ನ ಪ್ರಕಾಶ ಎಲ್. ಅವರಿಗೆ, ಅಚ್ಚುಕಟ್ಟಾಗಿ ಬೈಂಡ್ ಮಾಡಿದ ಕ್ರಿಯೇಟರ್ಸ್‌ರವರುಗಳಿಗೆ ಹಾಗೂ ಪ್ರತ್ಯಕ್ಷವಾಗಿ ಪರೋಕ್ಷವಾಗಿ ಸಹಕರಿಸಿದ ಹಲವು ವ್ಯಕ್ತಿ ಹಾಗೂ ಶಕ್ತಿಗಳಿಗೆ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ನಿಂಗಪ್ಪ ದೊಡ್ಡಮನಿ

ಪರಿವಿಡಿ

ಅಧ್ಯಾಯ : 1

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಪ್ರಸ್ತಾವನೆ :

ಭಾರತೀಯ ಸಮಾಜವು ಸಂಪ್ರದಾಯಸ್ಥ ಹಿಂದೂ ಸಮಾಜವಾಗಿರುವುದರಿಂದ ಇಲ್ಲಿ ಚತುವರ್ಣಗಳಿಗೆ ಹೆಚ್ಚಿನ ಮಹತ್ವ ನೀಡಿದೆ. ಭಾರತೀಯ ಸಮಾಜವು ಶೂದ್ರರನ್ನು ಅದರಲ್ಲೂ ದಲಿತರನ್ನು ದ್ವಿತೀಯ ದರ್ಜೆಯ ಪ್ರಜೆಗಳೆಂದು ಪರಿಗಣಿಸುವುದರ ಜೊತೆಗೆ ದಲಿತರನ್ನು ಶೋಷಣೆಗೆ ಒಳಪಡಿಸಿದೆ. ಭಾರತೀಯ ಸಮಾಜವು ದಲಿತರ ಮೇಲೆ ಹಲವಾರು ನಿರ್ಬಂಧಗಳನ್ನು ವಿಧಿಸಿದೆ. ಸಾಮಾಜಿಕ ಚೌಕಟ್ಟಿನ ಮಧ್ಯದಲ್ಲಿಯೇ ತಮ್ಮ ಜೀವನವನ್ನು ನಿರ್ವಹಿಸುವಂತೆ ನಿರ್ಬಂಧಗಳನ್ನು ಹೇರಿದೆ. ಪ್ರಾಚೀನ ಕಾಲದಿಂದ ಹಿಡಿದು ಆಧುನಿಕ ಕಾಲದವರೆಗೂ ದಲಿತರು ಒಂದಲ್ಲ ಒಂದು ರೀತಿಯಲ್ಲಿ ಶೋಷಣೆಗಳನ್ನು ಎದುರಿಸುತ್ತಿದ್ದಾರೆ. ಸಮಾಜವು ಮೇಲ್ಜಾತಿಯವರಿಗೆ ಪ್ರಾಚೀನ ಕಾಲದಿಂದಲೂ ಶಿಕ್ಷಣ ಕಲಿಯುವ ಅವಕಾಶಗಳನ್ನು ಒದಗಿಸಿತ್ತು. ಆದರೆ ಕೆಳಜಾತಿಯವರಿಗೆ (ಶೂದ್ರ ದಲಿತರಿಗೆ) ಶಿಕ್ಷಣ ಕಲಿಯುವ ಅವಕಾಶಗಳಿಂದ ವಂಚಿತರಾಗುವಂತೆ ವ್ಯವಸ್ಥೆಯನ್ನು ರೂಪಿಸಿಕೊಂಡಿತ್ತು. ಈ ಸಾಮಾಜಿಕ ವ್ಯವಸ್ಥೆಗಳ ಮೂಲಕ ಗತಕಾಲದ ಜೊತೆಗೆ ವರ್ತಮಾನವನ್ನು ಸಮೀಕರಿಸಿ ಭವಿಷ್ಯವನ್ನು ನಿರ್ಧರಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಭಾರತೀಯ ದಲಿತರು ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಯಾವ ರೀತಿ ಹಿಂದುಳಿದಿದ್ದಾರೆ ಎಂಬುವುದನ್ನು ಕುರಿತು ಅಧ್ಯಯನ ಮಾಡುವುದು ಅವಶ್ಯಕವಾಗಿದೆ. ಇಂತಹ ಸಂದರ್ಭದಲ್ಲಿ ಹೈದರಾಬಾದ-ಕರ್ನಾಟಕದಲ್ಲಿ ಅತ್ಯಂತ ಹಿಂದುಳಿದ ಪ್ರದೇಶವಾದ ಕೊಪ್ಪಳದ ಮಾದಿಗ ಸಮುದಾಯದ ಸಾಮಾಜಿಕ ಸ್ಥಾನಮಾನಗಳೇನು? ಅವರ ಜೀವನ ಕ್ರಮಗಳೇನು? ಅವರು ಎದುರಿಸುತ್ತಿರುವ ಸಮಸ್ಯೆಗಳನ್ನು ಕುರಿತು ಅಧ್ಯಯನ ಮಾಡುವುದು ಅವಶ್ಯಕವಾಗಿದೆ. ಆಧುನಿಕ ವ್ಯವಸ್ಥೆಯಲ್ಲಿ ದಲಿತರ ಸ್ಥಾನ-ಮಾನಗಳಲ್ಲಿ ಬದಲಾವಣೆಗಳು ಉಂಟಾಗಿಲ್ಲ. ಇಂದಿಗೂ ಸಹ ಮಾದಿಗ ಸಮುದಾಯವರು ಒಂದು ಸೀಮಿತ ಚೌಕಟ್ಟಿನೊಳಗೆ ಜೀವನ ನಿರ್ವಹಿಸುತ್ತಿದ್ದಾರೆ.

ಅಧ್ಯಯನದ ಉದ್ದೇಶ :

ಪ್ರಾಚೀನ ಕಾಲದಿಂದಲೂ ಭಾರತದ ಸಮಾಜದಲ್ಲಿ ಬದುಕಲು ಪರದಾಡುತ್ತಿರುವ ದಲಿತರು ಇಂದು ಸ್ವಲ್ಪ ಸುಧಾರಣೆ ಮಟ್ಟದಲ್ಲಿದ್ದಾರೆ ಎಂಬುದನ್ನು ನೋಡಬಹುದು. ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಇಂದಿಗೂ ನಮ್ಮ ಏಣಿ-ಶ್ರೇಣೀಕೃತ ವ್ಯವಸ್ಥೆಯಲ್ಲಿ ದಲಿತರು ಅತ್ಯಂತ ಕೆಳಸ್ಥರದಲ್ಲಿದ್ದಾರೆ. ಕಳೆದ ೫೦ ವರ್ಷಗಳ ಅವಧಿಯಲ್ಲಿ ಅವರ ಬದುಕು ಉತ್ತಮವಾಗಿಲ್ಲವೆಂದು ಹೇಳಲು ಸಾಧ್ಯವಿಲ್ಲ. ಆದರೆ ಅವರ ಸ್ಥಿತಿಗತಿಗಳು ಉಳಿದೆಲ್ಲ ತಳಸಮುದಾಯಗಳಿಗಿಂತ ಕೆಳಮಟ್ಟದಲ್ಲಿ ಮುಂದುವರೆದಿವೆ. ತಮ್ಮನ್ನು ತಾವು ಪರಿಭಾವಿಸಿಕೊಂಡಿರುವ ಪರಿಸರದಲ್ಲಿ ತೀವ್ರ ಬದಲಾವಣೆಗಳಾಗಿವೆ. ಒಂದು ಕಾಲಕ್ಕೆ ದಲಿತರು ತಮ್ಮ ಸ್ಥಾನ-ಮಾನಗಳನ್ನು ಒಪ್ಪಿಕೊಂಡಿದ್ದ ಸ್ಥಿತಿ ಇತ್ತು. ಆದರೆ ಇಂದು ಈ ದೃಷ್ಟಿಕೋನ ಬದಲಾಗಿದೆ. ತಾವು ಸಮಾಜದಲ್ಲಿ ಕೆಳಸ್ಥರದಲ್ಲಿ ಯಾಕಿದ್ದೇವೆ ಎಂಬುವುದರ ಕಾರಣ ಅವರಿಗೆ ಅರ್ಥವಾಗಿ ಇಂದು ಅವರು ತಮ್ಮ ಮಾನವ ಹಕ್ಕುಗಳಿಗಾಗಿ ಒತ್ತಾಯಿಸುತ್ತಿದ್ದಾರೆ. ಇಂದು ಇವರು ಎದುರಿಸುತ್ತಿರುವ ಬಹುಮುಖ್ಯ ಸವಾಲೆಂದರೆ ಬಡತನ, ತಾರತಮ್ಯ, ಶೋಷಣೆ, ಅನಿಷ್ಠಕಾರಿ ಆಚರಣೆಗಳು ಮುಂತಾದ ಸಮಸ್ಯೆಗಳು ಸಂಪೂರ್ಣವಾಗಿ ಬದಲಾಗಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಒಂದು ಸಮುದಾಯದ ಸಾಂಸ್ಕೃತಿಕ ಅಧ್ಯಯನ ಅಗತ್ಯವಾಗಿ ಮಾಡಬೇಕಾಗಿದೆ.

ಸಮುದಾಯದ ಸಂಸ್ಕೃತಿ ಅಧ್ಯಯನ ಎಂದ ತಕ್ಷಣ ಆ ಸಮುದಾಯದ ಸಾಂಸ್ಕೃತಿಕ ವಿವರಗಳನ್ನು ಗ್ರಹಿಸುವುದರ ಜೊತೆಗೆ ಅದರಾಚೆಗೂ ಒಂದು ಸಮುದಾಯದ ಸಂಸ್ಕೃತಿಯನ್ನು ಅಧ್ಯಯನ ಮಾಡಿದಾಗ ಹೊಸ ಬಗೆಯ ಅನುಭವವನ್ನು ನೀಡುತ್ತದೆ. ಅಂದರೆ ಅದರ ಇತಿಹಾಸ ಆ ಸಮುದಾಯ ನಡೆದುಬಂದ ದಾರಿ ಈ ಸಮಾಜದಲ್ಲಿ ಅನುಭವಿಸುತ್ತಿರುವ ನೋವು ನಲಿವುಗಳನ್ನು ಪ್ರತ್ಯೇಕವಾಗಿ ವಿರೋಧಿಸದೇ ಇದ್ದರೂ ಪರೋಕ್ಷವಾಗಿಯಾದರೂ ಸಮುದಾಯ ತನ್ನ ಆಂತರಿಕ ಭಾವನೆಗಳನ್ನು ಹೊರಹಾಕುತ್ತಿರುತ್ತದೆ. ಆದರೆ ಇದನ್ನು ಅರ್ಥಮಾಡಿಕೊಳ್ಳಬೇಕಾದರೆ ಆ ಸಮುದಾಯದ ಜೊತೆಯಲ್ಲಿ ಬೆರೆತಾಗ, ಅದನ್ನು ಕುರಿತು ದೀರ್ಘವಾಗಿ ಸಂಶೋಧನೆ ನಡೆಸಿದಾಗ ಮಾತ್ರ ಒಂದು ಸಮುದಾಯದ ಸಂಸ್ಕೃತಿಯನ್ನು ಅದರ ನೆಲೆ ಬೆಲೆಯನ್ನು ಗುರುತಿಸಲು ಸಾಧ್ಯವಾಗುತ್ತದೆ. ಆಧುನಿಕ ಬಣ್ಣದ ಬದುಕನ್ನು ಬೆರಗುಗಣ್ಣಿನಿಂದ ನೋಡುತ್ತಾ ಜಿಲ್ಲೆಯ ಪಟ್ಟಣ ಎನ್ನುವ ಪ್ರದೇಶದಲ್ಲಿ ಪ್ರತ್ಯೇಕವಾದ 'ಕೇರಿ' ಎನ್ನುವ ಪುಟ್ಟ ಲೋಕದಲ್ಲಿ ಬದುಕುತ್ತಲೇ, ಲೋಕವನ್ನು ಗ್ರಹಿಸುವ, ಗ್ರಹಿಕೆಯನ್ನು ಪ್ರಧಾನವಾಗಿ ಸಮುದಾಯದ ಪ್ರಸ್ತುತ ಸ್ಥಿತಿಗತಿಯನ್ನು ನಿರ್ವಚಿಸಬೇಕಾದ ತುರ್ತು ಈ ಅಧ್ಯಯನಕ್ಕಿದೆ. ಒಂದು ಸಮುದಾಯವನ್ನು ಅಧ್ಯಯನ ಮಾಡುವ ನೆಲೆಯಲ್ಲಿ ಸಮುದಾಯದ ಒಳಗೆ ಇರುವ ಸಂಘರ್ಷಗಳನ್ನು ದಾಖಲಿಸದೇ ಮರೆಯುತ್ತಿದ್ದೇವೆ. ಹೆಚ್ಚಾಗಿ ಇನ್ನೊಂದು ಸಮುದಾಯವನ್ನು ಎದುರಿಗಿಟ್ಟುಕೊಂಡು ಒಂದು ಸಮುದಾಯದ ಸಾಂಸ್ಕೃತಿಕ ವಿವರಗಳನ್ನು

ಇತರರಿಗಿಂತ ಭಿನ್ನ ಎಂದು ತೋರಿಸುವ ಪ್ರಸ್ತುತ ಕೊಪ್ಪಳ ಜಿಲ್ಲೆಯ ಪಟ್ಟಣ ಪ್ರದೇಶದಲ್ಲಿ ವಾಸಿಸುತ್ತಿರುವ ಮಾದಿಗ ಸಮುದಾಯ ಆಧುನಿಕತೆಯ ಜೊತೆಗೆ ಹೇಗೆ ಮುಖಾಮುಖಿಯಾಗುತ್ತದೆ ಎಂಬುವುದು ಈ ಆಧ್ಯಯನದ ಪ್ರಮುಖ ಉದ್ದೇಶವಾಗಿದೆ.

ವ್ಯಾಪ್ತಿ :

ಪ್ರಸ್ತುತ ಈ ಅಧ್ಯಯನದ ವ್ಯಾಪ್ತಿಯನ್ನು ಕೊಪ್ಪಳ ಜಿಲ್ಲೆಗೆ ಮಾತ್ರ ಸೀಮಿತಗೊಳಿಸಿಕೊಂಡು ಅದರಲ್ಲಿ ಕೊಪ್ಪಳ ಪಟ್ಟಣ ಪ್ರದೇಶದಲ್ಲಿ ವಾಸಿಸುತ್ತಿರುವ ಮಾದಿಗ ಸಮುದಾಯದವನ್ನು ಮಾತ್ರ ಈ ಅಧ್ಯಯನಕ್ಕೆ ಬಳಸಿಕೊಂಡಿದ್ದೇನೆ. ಇಂದಿಗೂ ಕೂಡಾ ಈ ಪಟ್ಟಣ ಪ್ರದೇಶದಲ್ಲಿ ವಾಸಿಸುವ ಮಾದಿಗ ಸಮುದಾಯದವರು ಗ್ರಾಮೀಣರಂತೆ ಜೀವನ ನಡೆಸುತ್ತಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ಈ ಸಮುದಾಯದವರೆಂದರೆ ಅಸ್ಪೃಶ್ಯರು, ಮುಟ್ಟಿಸಿಕೊಳ್ಳಲಾರದವರು ಎಂದು ಗೂಬೆ ಕೂರಿಸುವ ರೀತಿಯಲ್ಲಿ ನೋಡಿಕೊಳ್ಳುತ್ತಾರೆ. ಅದರಂತೆ ಪಟ್ಟಣ ಪ್ರದೇಶದಲ್ಲಿ ಕೂಡಾ ಅದೇ ಸ್ಥಿತಿ ಇದೆ. ಹೆಸರಿಗೆ ಪಟ್ಟಣ ಪ್ರದೇಶವಾದರೂ ಸಹ ಸಂಪ್ರದಾಯ ಅಥವಾ ಪರಂಪರೆ ಮಾತ್ರ ಹಳ್ಳಿಯ ಸ್ಥಿತಿಯಲ್ಲಿದೆ. ಇಂದು ಆಧುನಿಕವಾಗಿ ವಿಜ್ಞಾನ, ತಂತ್ರಜ್ಞಾನದಿಂದ ಮುಂದುವರೆದಿದ್ದರೂ ಸಹ ಈ ಸಮುದಾಯದವರಿಗೆ ಸರಿಯಾಗಿ ಶಿಕ್ಷಣವಿಲ್ಲ. ಆರ್ಥಿಕವಾಗಿ, ರಾಜಕೀಯವಾಗಿ, ಸಾಮಾಜಿಕವಾಗಿ ಹಿಂದುಳಿದಿದ್ದಾರೆ. ಮತ್ತು ಸರಕಾರದ ವತಿಯಿಂದ ಮೂಲಭೂತ ಸೌಕರ್ಯ, ಸೌಲಭ್ಯಗಳು ಕೂಡಾ ಸಿಗುತ್ತಿಲ್ಲ. ಬಂದಂತ ಸೌಲಭ್ಯಗಳು ಮೇಲ್ವರ್ಗದವರ ಪಾಲಾಗುತ್ತಿವೆ. ಅದನ್ನು ಯಾರು ಕೂಡಾ ಪ್ರಶ್ನಿಸುವಂತಿಲ್ಲ. ಇಂಥಹ ಸಂದಿಗ್ಧ ಪರಿಸ್ಥಿತಿಯಲ್ಲಿ ಅನೇಕ ಸಮಸ್ಯೆಗಳ ಸುಳಿಯಲ್ಲಿ ತೊಳಲಾಡುತ್ತಿರುವುದರಿಂದ ಈ ಪ್ರದೇಶವನ್ನು ನನ್ನ ಅಧ್ಯಯನದ ವ್ಯಾಪ್ತಿಗೆ ಆಯ್ಕೆ ಮಾಡಿಕೊಂಡಿದ್ದೇನೆ.

ಇದುವರೆಗೆ ನಡೆದ ಅಧ್ಯಯನ :

ಇದುವರೆಗೆ ನಡೆದ ಅಧ್ಯಯನಗಳ ಹಿನ್ನೆಲೆಯಲ್ಲಿ ದಲಿತರನ್ನು ಕುರಿತು ಸಂಶೋಧನೆಗಳು ನಡೆದಿದ್ದರೂ ಸಹ ಅವು ಕೇವಲ ಪ್ರಬಂಧ, ಕಾದಂಬರಿ, ನಿಯತಕಾಲಿಕೆಗಳ ಮೂಲಕ ದಲಿತರನ್ನು ಕುರಿತಾಗಿ ಅವರ ಸ್ಥಾನ-ಮಾನ, ಸಮಸ್ಯೆಗಳು, ಅದರ ಪರಿಣಾಮಗಳು, ಪರಿಹಾರೋಪಾಯಗಳ ಬಗೆಗೆ ವಿಮರ್ಶಾತ್ಮಕ ವಿಶ್ಲೇಷಿಸಿದರೂ ಕೂಡಾ ಅದರ ಅರಿವನ್ನು ಕೆಲವೇ ಶಿಕ್ಷಿತ ದಲಿತರು ಪಡೆದುಕೊಂಡಿದ್ದಾರೆ.

ಬದಲಾಗುತ್ತಿರುವ ಆಧುನಿಕ ಜಗತ್ತಿನಲ್ಲಿ ಅದರಲ್ಲೂ ಹೈದರಾಬಾದ-ಕರ್ನಾಟಕಕ್ಕೆ ಸೇರಿದಂತೆ ಕೊಪ್ಪಳದ ಮಾದಿಗ ಸಮುದಾಯವನ್ನು ಕುರಿತು ಅಧ್ಯಯನ ಮಾಡುವುದು ಅವಶ್ಯಕವಾಗಿದೆ. ದಲಿತರನ್ನು ಕುರಿತು ಅಧ್ಯಯನಗಳು ನಡೆದಿದ್ದರೂ ಕೂಡಾ ವೈಜ್ಞಾನಿಕವಾಗಿ ಅಧ್ಯಯನ ಮಾಡುವುದು ಅವಶ್ಯಕವಾಗಿದೆ. ಮಾದಿಗ ಸಮುದಾಯವನ್ನು ಕುರಿತಾಗಿ ಹಾಗೂ ಆ ಸಮುದಾಯದ ಸಮಸ್ಯೆ, ಸವಾಲುಗಳನ್ನು ಕರಿತು ಅಧ್ಯಯನ ಮಾಡುವುದು ಅವಶ್ಯಕವಾಗಿದೆ.

ಅಧ್ಯಯನದ ವಿನ್ಯಾಸ ಮತ್ತು ವಿಧಾನ :

ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ ಅಧ್ಯಯನಗಳು ನಡೆದಿಲ್ಲ. ಆದರೆ ದಲಿತರ ಬಗ್ಗೆ ಅಧ್ಯಯನಗಳು ನಡೆದಿವೆ. ಈ ಹಿನ್ನೆಲೆಯಲ್ಲಿ ಮಾದಿಗ ಸಮುದಾಯದವರನ್ನು ಕುರಿತಂತೆ ಆಳವಾದ ಮತ್ತು ವೈಜ್ಞಾನಿಕವಾದ ಅಧ್ಯಯನ ಮಾಡಬೇಕಾಗಿದೆ.

ಪ್ರಶ್ನಾವಳಿ :

ಈ ಅಧ್ಯಯನಕ್ಕೆ ಸಂಬಂಧಿಸಿದಂತೆ ಸೂಕ್ತ ಪ್ರಶ್ನಾವಳಿಯನ್ನು ಸಿದ್ಧಪಡಿಸಿ ಆ ಮೂಲಕ ಮಾದಿಗ ಸಮುದಾಯದವರನ್ನು ಮೌಖಿಕವಾಗಿ ಸಂದರ್ಶಿಸಿ ಮಾಹಿತಿ ಸಂಗ್ರಹಿಸಿ ವಿಶ್ಲೇಷಿಸುವುದರಿಂದ ಮಾದಿಗ ಸಮುದಾಯದವರ ನಿಜ ಚಿತ್ರಣವನ್ನು ತಿಳಿದುಕೊಳ್ಳಲು ಸಾಧ್ಯವಾಯಿತು.

ಅವಲೋಕನ ವಿಧಾನ :

ಕ್ಷೇತ್ರಕಾರ್ಯದಲ್ಲಿ ಮಾದಿಗ ಸಮುದಾಯದವರನ್ನು ಅವಲೋಕಿಸುವುದರ ಮೂಲಕ ಅವರ ಸ್ಥಿತಿಗತಿಗಳನ್ನು ತಿಳಿದುಕೊಳ್ಳಲಾಯಿತು.

ಸಂದರ್ಶನದ ವಿಧಾನ :

ಮಾದಿಗ ಸಮುದಾಯದವರ ಜೀವನದ ವಿವರಗಳನ್ನು ಸಂಗ್ರಹಿಸಲು ಆ ಸಮುದಾಯದವರನ್ನು ಸಂದರ್ಶಿಸಲಾಯಿತು. ಮಾದಿಗ ಸಮುದಾಯದವರ ಕುರಿತು ವಿಮರ್ಶಾತ್ಮಕವಾಗಿ ಅಧ್ಯಯನಮಾಡಿ ವಿಶ್ಲೇಷಣೆಗೆ ಒಳಡಿಸಲಾಗಿದೆ.

ಅಧ್ಯಯನದ ಪ್ರಾಮುಖ್ಯತೆ :

ಮಾದಿಗ ಸಮುದಾಯದವರ ಕೀಳರಿಮೆ, ಮುಜುಗರ, ಹಿಂಜರಿಕೆ, ಭಯ ಮುಂತಾದವುಗಳನ್ನು ಹೋಗಲಾಡಿಸಿ ಈ ಸಮುದಾಯದವರಿಗೆ ಶೈಕ್ಷಣಿಕ, ಆರ್ಥಿಕ, ಸಾಮಾಜಿಕ, ರಾಜಕೀಯ, ಹಾಗೂ ಸಾಂಸ್ಕೃತಿಕ ಹಾಗೂ ಇನ್ನಿತರ ಅಂಶಗಳ ಮಹತ್ವದ ಅರಿವನ್ನು ಮೂಡಿಸುವ ನಿಟ್ಟಿನಲ್ಲಿ ಈ ಅಧ್ಯಯನಗಳು ಪ್ರೇರಣೆಯಾಗುವುದೆಂದು ನಂಬಲಾಗಿದೆ. ಪ್ರಾಚೀನ ಕಾಲದಿಂದಲೂ ಮಾನವರಿಂದ ಮಾನವರಿಗೆ ಶೋಷಣೆ ನಡೆಯುತ್ತಲೇ ಬಂದಿವೆ. ಈ ಶೋಷಣೆಯನ್ನು ಹೋಗಲಾಡಿಸಲು ರಚನಾತ್ಮಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಅಗತ್ಯತೆ ಇದೆ. ಈ ನೆಲೆಯಲ್ಲಿ ಈ ಸಮುದಾಯದಲ್ಲಿ ವೈಚಾರಿಕತೆಯು ಬೆಳೆಯುವಂತೆ ಮಾಡುವುದರ ಮೂಲಕ ಸ್ವಾಭಿಮಾನ ಮತ್ತು ಸ್ವಂತಿಕೆ ಬೆಳೆಸಿಕೊಳ್ಳುವಂತೆ ಅರಿವು ಮೂಡಿಸುವುದು ಅಗತ್ಯವಾಗಿದೆ.

ಮಾದಿಗ ಸಮುದಾಯದವರು ತಮ್ಮ ಅಸ್ತಿತ್ವಕ್ಕಾಗಿ ಅನೇಕ ಹೋರಾಟಗಳನ್ನು ಮಾಡುತ್ತಾ ಬಂದಿದ್ದಾರೆ. ಆದರೆ ಸಾಮಾಜಿಕ ವ್ಯವಸ್ಥೆಯ ಏಣಿ–ಶ್ರೇಣಿಯಲ್ಲಿ ಮಾದಿಗ ಸಮುದಾಯದ ಬೆಳವಣಿಗೆಯ ಗುರಿ–ಉದ್ದೇಶಗಳಿಗೆ ವಿರುದ್ಧವಾದ ಸಂಘರ್ಷಗಳು ಎದುರಾಗಿರುವುದು ಗೋಚರಿಸುತ್ತದೆ. ಜಾತಿಯ ಮನೋಭಾವಗಳು ಪ್ರಾಚೀನ ಕಾಲದಿಂದ ಪ್ರಸ್ತುತ ಕಾಲದವರೆಗೆ ಬಿಡಿಸಲಾರದ ನಂಟಾಗಿರುವುದು ಸಮುದಾಯದ ಅಧ್ಯಯನಗಳಿಂದ ತಿಳಿದಿದ್ದರೂ ಮಾದಿಗ ಸಮುದಾಯದ ಸಮಸ್ಯೆಗಳು ದಿನದಿಂದ ದಿನಕ್ಕೆ ಉಲ್ಬಣಗೊಂಡಿವೆ. ಈ ಹಿನ್ನೆಲೆಯಲ್ಲಿ ಮಾದಿಗ ಸಮುದಾಯವು ಎಲ್ಲಾ ಶೋಷಣೆ, ಸಾಮಾಜಿಕ ಕೀಳರಿಮೆ, ಧಾರ್ಮಿಕ ಕೀಳರಿಮೆಗೆ ಒಳಗಾಗಿದ್ದಾರೆ. ಆದ್ದರಿಂದ ಈ ರೀತಿ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳಬೇಕಾದರೆ ಮಾದಿಗರು ಶಿಕ್ಷಣವನ್ನು ಪಡೆಯಬೇಕು. ಆರ್ಥಿಕವಾಗಿ ಬೌದ್ಧಿಕವಾಗಿ ಈ ಸಮುದಾಯ ಸದೃಢವಾಗಬೇಕಾದರೆ ಶಿಕ್ಷಣ ಈ ಪರಿವರ್ತನೆಯ ಸಾಮಾಜಿಕ ವ್ಯವಸ್ಥೆಯಲ್ಲಿ ಅವಶ್ಯಕವಾಗಿದೆ. ಆಗಾಗಿ ಶಿಕ್ಷಣದ ಕವಲುದಾರಿಯಲ್ಲಿರುವ ಈ ಸಮುದಾಯ ಸಾಂಸ್ಕೃತಿವಾಗಿ ಶ್ರೀಮಂತಿಕೆ ಸಾಕಷ್ಟು ಇದ್ದರೂ ಕೂಡಾ ಸಾಮುದಾಯಕ ಸ್ಥಿತಿಗತಿ ಕೆಳಸ್ತರದಲ್ಲಿರುವುದನ್ನು ನೋಡಲಾಗಿದೆ. ಸಂಪ್ರದಾಯ ಬದ್ಧ ಸಮಾಜದಲ್ಲಿ ಅತ್ಯಂತ ಕೆಳಸ್ತರದಲ್ಲಿರುವ ಈ ಸಮುದಾಯ ಸಮಾನತೆಯ ಬದುಕನ್ನು ರೂಪಿಸಿಕೊಳ್ಳಬೇಕಾಗುತ್ತದೆ. ಅಲ್ಲದೆ ಈ ಸಮುದಾಯ ಸರ್ಕಾರದ ವತಿಯಿಂದ ಅನೇಕ ಯೋಜನೆಗಳು ಹಾಗೂ ಕಾರ್ಯಕ್ರಮಗಳು ಇದ್ದರೂ ಸಹ ಆ ಯೋಜನೆಗಳನ್ನು ಪಡೆಯುವಲ್ಲಿ ಮಾದಿಗ ಹಾಗೂ ಇತರ ದಲಿತ ಸಮುದಾಯದವರು ವಿಫಲರಾಗಲು ಪ್ರೇರಕ ಅಂಶಗಳು ಯಾವುವು ಎಂಬುವುದನ್ನು ಮನದಟ್ಟು ಮಾಡಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಯಾವುದೇ ಕೆಳಸ್ಥರದ ಸಮುದಾಯಗಳನ್ನು ಅಧ್ಯಯನ ಮಾಡುವುದು ಎಷ್ಟು ಮುಖ್ಯವೋ ಅಷ್ಟೇ ಪ್ರಾಮುಖ್ಯತೆಯಲ್ಲಿ ಕೊಪ್ಪಳದ (ಕೊಪ್ಪಳ ಪಟ್ಟಣವನ್ನು ಅನುಲಕ್ಷಿಸಿ) ಮಾದಿಗ ಸಮುದಾಯವನ್ನು ಅಧ್ಯಯನ ಮಾಡುವುದು ಪ್ರಸ್ತುತ ಸಾಮಾಜಿಕ ಕಾಲಘಟ್ಟದಲ್ಲಿ ಶ್ರೇಷ್ಠ ಮಟ್ಟದ್ದಾಗಿದೆ.

* * *

ಅಧ್ಯಾಯ : 2

ಮಾದಿಗರು ಎಂದರೆ ಯಾರು

೨.೧ ಮಾದಿಗ ಪದನಿಷ್ಪತ್ತಿ

ನಮ್ಮ ಸಂಸ್ಕೃತಿಯ ವ್ಯವಸ್ಥೆ ಸಮಾಜದಲ್ಲಿ ವಿಭಿನ್ನ ವೈಶಿಷ್ಟತೆಯಿಂದ ಕೂಡಿರುವಂತದ್ದು. ನಂಬಿಕೆಗಳ ಆಗರದಲ್ಲಿ ಜೀವಿಸುತ್ತಿರುವ ಸಮುದಾಯಗಳ ಜನರು ತಮ್ಮದೇ ಆದ ಸಂಪ್ರದಾಯವನ್ನು ಹೊಂದಿದ್ದಾರೆ. ಇದಕ್ಕೆ ಮೂಲ ಪ್ರೇರಣೆ, ಸಾಮಾಜಿಕ ಆಚರಣೆಗಳು. ಇವು ಪ್ರಾಚೀನ ಕಾಲದಿಂದಲೂ ಅವರಿಗೆ ಬಳುವಳಿಯಾಗಿ ಬಂದಿರುವಂತದ್ದು. ಅದನ್ನು ಅವರು ಪೂಜ್ಯನೀಯ ಸಂಸ್ಕಾರದಲ್ಲಿ ಆಚರಿಸಿಕೊಂಡು ಬಂದಿದ್ದಾರೆ. ಒಂದು ಸಮುದಾಯವನ್ನು ಗುರುತಿಸಬೇಕಾದರೆ ಅದರ ಸಮಸ್ತ ಸಂಸ್ಕೃತಿಯನ್ನು ಅವಲೋಕನ ಮಾಡಬೇಕಾಗುತ್ತದೆ. ಅಂತಹ ವಿಶಿಷ್ಟ ಸಂಸ್ಕೃತಿಗೆ ಸಂಪ್ರದಾಯಕ್ಕೆ ಸೇರಿದ ಸಮುದಾಯಗಳು ಸಾವಿರಾರು. ಅಂತಹ ಸಮುದಾಯದಲ್ಲಿ ಮಾದಿಗ ಸಮುದಾಯ ಒಂದು

ಸಮಾಜದ ಅತ್ಯಂತ ಕೆಳಸ್ತರದಲ್ಲಿರುವ ದಲಿತ ಜನಪದ ವೃಂದಗಳಲ್ಲಿ 'ಮಾದಿಗರು' ಒಬ್ಬರು. ಉತ್ತರ ಕರ್ನಾಟಕದಾದ್ಯಂತ ಸಾಮಾನ್ಯವಾಗಿ 'ಮಾದಿಗರು' ಎಂಬ ಒಂದೇ ಹೆಸರಿನಿಂದ ಕರೆಯುತ್ತಿದ್ದರೂ, ಪ್ರಾದೇಶಿಕವಾಗಿ ಬೇರೆ ಬೇರೆ ಹೆಸರುಗಳಿಂದ ಕರೆಯುವುದು ಕಂಡುಬರುತ್ತದೆ.

ಮಾದಿಗ ಎಂಬುದು 'ಮಾದ' ಮತ್ತು 'ಇಗ' ಎಂಬ ಎರಡು ಶಬ್ದಗಳಿಂದ ರೂಪಿತವಾಗಿದೆ. ಮಾದ ಎಂಬ ಕನ್ನಡ ಪದದ ಅರ್ಥ 'ಅಸ್ಪೃಶ್ಯ' 'ಹರಿಜನ' ಎಂದಾಗುತ್ತದೆ. ಇದಕ್ಕೆ 'ಇಗ' ಎಂಬ ತದ್ಭವ ಪ್ರತ್ಯಯಸೇರಿ 'ಮಾದಿಗ' ಎಂದಾಗಿದೆ. ಇವರನ್ನು 'ಮಾದರ್' 'ಮಾದಾರ' 'ಮಾತಂಗ' 'ಮಾರಿಗ' 'ಎಡಗೈಯವರು' ಎಂಬ ಮುಂತಾದ ಹೆಸರುಗಳಿಂದ ಕರೆಯುವ ವಾಡಿಕೆ ಇದೆ.

ಈ ಪದವು ಜಾತಿಸೂಚಕ, ವೃತ್ತಿಸೂಚಕ, ತದ್ಭವಗಳ ಬೈಗುಳ ವಾಚವಾಗಿಯು ಬಳಕೆಯಾಗುತ್ತ ಬಂದಿರುವುದನ್ನು ಕಾಣಬಹುದು. ಕೊಲುವವನೇ ಮಾದಿಗ, ಹೊಲಸು ತಿಂಬುವವನೇ ಹೊಲೆಯ. ಎಂಬಲ್ಲಿ ಒಂದು ಜೀವಿಯನ್ನು ಕೊಲ್ಲುವವರೆಲ್ಲರೂ 'ಮಾದಿಗರು' ಎಂಬರ್ಥದಲ್ಲಿ ಬಳಕೆಯಾಗಿದೆ.

ಉತ್ತರ ಕರ್ನಾಟಕದಲ್ಲಿ ಮಾದಿಗರನ್ನು ಬೇರೆ ಬೇರೆ ಹೆಸರುಗಳಿಂದ ಕರೆಯುವ ಪದ್ಧತಿ ಕಂಡುಬರುತ್ತದೆ. ಬಿಜಾಪುರ, ಬೆಳಗಾಂವ, ಧಾರವಾಡ, ಗದಗ, ರಾಯಚೂರು, ಕೊಪ್ಪಳ, ಗುಲ್ಬರ್ಗಾ ಜಿಲ್ಲೆಗಳ ಬಹುಪಾಲು ಭಾಗದಲ್ಲಿ 'ಮಾದಿಗರು' 'ಮಾದರು' ಎಂದು ಕರೆದರೂ ಬೆಳಗಾಂವ ಬಿಜಾಪುರ ಜಿಲ್ಲೆಯ ಗಡಿಭಾಗದಲ್ಲಿ ಇವರನ್ನು ಹೊಲೆಯರೆಂದು ಕರೆಯುವುದು ಕಂಡುಬರುತ್ತದೆ. ಹಾಗೆಯೇ ಶರಣ ಮಾದಾರ ಹರಳಯ್ಯನನ್ನು ಹೊಲೆಯರ ಹರಳಯ್ಯ ಎಂದು ಕರೆಯುತ್ತಿರುವುದು ಅಲ್ಲಲ್ಲಿ ಕಂಡುಬರುತ್ತಿದೆ. ದಕ್ಷಿಣ ಕರ್ನಾಟಕದ ಭಾಗದಲ್ಲಿ ಹಾಗೂ ಬಳ್ಳಾರಿ ಜಿಲ್ಲೆಯ ಹೊಸಪೇಟೆ, ಕಂಪ್ಲಿ, ಸಿರಗುಪ್ಪ ಮುಂತಾದ ಕಡೆಗಳಲ್ಲಾ 'ಆದಿದ್ರಾವಿಡ (ಎ.ಕೆ.)' ಎಂದು ಕರೆಯುತ್ತಾರೆ. ಮಹಾರಾಷ್ಟ್ರ ಹಾಗೂ ಹೈದರಾಬಾದ ಪ್ರದೇಶದಲ್ಲಿ ಭಾಷಾ ಪ್ರಭಾವದಿಂದ ಮಾದಿಗರನ್ನು ಮಾಂಗರು ಎಂದು ಕರೆಯುತ್ತಾರೆ. 'ಮಾಂಗರು' ಎಂಬ ಪದವು 'ಮಾತಂಗ' ಎಂಬುದರಿಂದ ಬಂದಂತೆ ತೋರುತ್ತಿದೆ. ಮಾತಂಗ ಎಂಬುವುದು ಸಂಸ್ಕೃತ ಪದ 'ಕಿರಾತ' ಎಂಬ ಪದಕ್ಕೆ ಅನ್ವಯಿಸುತ್ತಿದೆ. ಹೇಗೆಂದರೆ, ಪರ್ವತಾರೋಹಿ, ಅನಾಗರಿಕ, ಕೀಳುಜಾತಿಯವ ಎಂದರ್ಥವಾಗುತ್ತಿದೆ. ಅಲೆಮಾರಿ ಜನಾಂಗದ ಮಾತಂಗದಿಂದ ನಿರ್ಲಕ್ಷಿಸಲ್ಪಟ್ಟ ಜನಾಂಗ ಈ ಮಾದಿಗರಾಗಿರಬೇಕು. ಅಲೆಮಾರಿಗಳಾದ ಮಾತಂಗರನ್ನು 'ಕಿರಾತರು' ಎಂದು ಕರೆಯಲಾಗಿದೆ. ಇವರೇ ಮಹಾರಾಷ್ಟ್ರದ 'ಮಾಂಗ' ರೊಂದಿಗೆ ಸಂಬಂಧ ಹೊಂದಿದವರು. ಮಾದಿಗ ಹೊಲೆಯರನ್ನು ತೆಲುಗಿನ 'ನಲ್ಲಾಜನಯು' ರಂತೆ 'ಕಪ್ಪುಜನರು' ಎಂದೂ ಕರೆಯಲಾಗುತ್ತಿದೆ.

"ಭೂತೇಶಗೆರುಗುವನು ಜಾತಿ ಮಾದಿಗನಲ್ಲಿ
ಜಾತಿಯಲಿ ಹುಟ್ಟಿ ಶಿವನಿಗೆ ಶರಣೆನ್ನ
ದಾತ ಮಾದಗನು ಸರ್ವಜ್ಞ"

ಜಾತಿಯಿಂದ ಹುಟ್ಟಿದವನಷ್ಟೇ ಮಾದಿಗನಲ್ಲ. ಅನ್ಯಜಾತಿಯಲ್ಲಿ ಹುಟ್ಟಿಯೂ ಶಿವನಿಗೆ ನಮಿಸದಿರುವವನು ಮಾದಿಗನಾಗುತ್ತಾನೆ. ಎಂದು ಸರ್ವಜ್ಞ ಹೇಳುತ್ತಾನೆ. ಸಾಮಾಜಿಕವಾಗಿ ಅವಹೇಳನಕ್ಕೆ ಗುರಿಯಾದ ಇವರನ್ನು ಶರಣರು 'ಅಯ್ಯ' 'ಅಪ್ಪ' 'ಅಮ್ಮ' ಎಂದು ಸಂಭೋಧಿಸಿದರು. ಅವರೇ 'ಮಾದರ ಚನ್ನಯ್ಯ', 'ಮಾದಾರ ಹರಳಯ್ಯ,' 'ಸೂಳೆಸಂಕವ್ವ' ಮುಂತಾದವರು.

ಒಟ್ಟಾರೆ ಉತ್ತರ ಕರ್ನಾಟಕದಲ್ಲಿ ಮಾದಿಗರನ್ನು 'ಎಡಗೈಯವರು' 'ಆದಿಜಾಂಬವರು' 'ಮಾತಂಗರು' 'ಪದ್ಮಜಾತಿಯವರು' 'ಮಾಂಗರು' 'ಕಿರಾತಕರು' 'ಚಂಪಾಲರು' 'ಅರಿತ್ಯಾಜರು' 'ಹೊಲೆಯರು' ಎಂದು ಪ್ರಾದೇಶಿಕವಾಗಿ ಬೇರೆ ಬೇರೆ ಹೆಸರುಗಳಿಂದ ಕರೆದರೂ ಮಾದಿಗ ಎಂಬುದು ತುಂಬಾ ಪ್ರಾಚೀನವಾದ ಹೆಸರಾಗಿದೆ ಎಂದು ತಿಳಿದುಬರುತ್ತದೆ.

೨.೨ ಮಾದಿಗ ಸಮುದಾಯದ ಹಿನ್ನೆಲೆ :

ಮಾದಿಗ ಸಮುದಾಯದ ಹಿನ್ನೆಲೆ ಬಗ್ಗೆ ಅಧ್ಯಯನ ಮಾಡುವ ಸಂದರ್ಭದಲ್ಲಿ ಮಾದಿಗರು ಯಾರು? ಎಲ್ಲಿಂದ? ಯಾವಾಗ? ಹೇಗೆ ಬಂದರು ಎಂಬಿತ್ಯಾದಿಗಳ ಬಗೆಗೆ ಖಚಿತವಾದ ಆಧಾರಗಳು ಲಭ್ಯವಾಗುವದಿಲ್ಲ. ಇವರೂ ಕೂಡಾ ಹೊಲೆಯರಂತೆ ಇದೇ ನಾಡಿನವರಾಗಿರಬೇಕು. ಆದರೆ ಅವರಾಡುವ ಭಾಷೆಯನ್ನಾಧರಿಸಿ ಆಂಧ್ರದಿಂದ, ಮಹಾರಾಷ್ಟ್ರದಿಂದ ಬಂದವರೆಂದು ಹೇಳುವುದು ಅಷ್ಟೊಂದು ಸಮಂಜಸವಾದುದಲ್ಲ ಮಾದಿಗ ಕುಲವು ಹೊಲೆಯರಂತೆ, ಹದಿನೆಂಟು ಜಾತಿಗಳಂತೆ ಪ್ರಾಚೀನತೆಯನ್ನು ಪಡೆದುಕೊಂಡಿದೆ.

ಕೆಲವು ವಚನಕಾರರು ಜಾತಿಗಳನ್ನು ಪುರುಷನ ಅಂಗಾಂಗಗಳೆಂಬಂತೆ ಚಿತ್ರಿಸುತ್ತಾರೆ. ನಿದರ್ಶನಕ್ಕೆ 'ಸೊಡ್ಡಳ ಬಾಚನರಸನ' ವಚನವೊಂದನ್ನು ನೋಡಬಹುದು 'ಶಿಖ ಬ್ರಾಹ್ಮಣ', 'ನಯನ ಕ್ಷತ್ರಿಯ', 'ನಾಸಿಕ ಬಣಜಿಗ', 'ಅಧರ ಒಕ್ಕಲಿಗ', 'ಕರ್ಣಗೊಲ್ಲ', 'ಕೊರಳು ಕುಂಬಾರ', 'ಬಾಹು ಪಾಂಚಾಳ', 'ಅಂಗೈ ಉಪ್ಪಾರ', 'ನಖ ನಾಯಿದ', 'ಒಡಲು ಡೊಂಬ', 'ಬೆನ್ನು ಅಗಸ', 'ಚರ್ಮಜಾಡ', 'ಪುಷ್ಠಸ್ಥಾನ ಕಬ್ಬಲಿಗ', 'ಒಳದೊಡ ಹೊಲೆಯ', 'ಮೊಣಕಾಲು ಈಡಿಗ', 'ಕಣಕಾಲ ಸಮಗಾರ', 'ಮೇಗಾಲ ಮಚ್ಚಿಗ' ಚಲಪಾದವೆಂಬ ಅಂಗಾಲ ಶುದ್ಧ ಮಾದಿಗ ಕಾಣಿರೆ ಎಂಬಲ್ಲಿ 'ಮಾದಿಗ'ನು ಅಂಗಾಲಿನಿಂದ ಹುಟ್ಟಿ ಬಂದವನೆಂದು ಹೇಳುತ್ತಾನೆ. ಬಹುಶಃ ಬಾಚರಸನು ಪ್ರತಿಯೊಬ್ಬರು ಮಾಡುವ ಕಾಯಕವನ್ನನುಸರಿಸಿ ಅವರವರ ಹುಟ್ಟನ್ನು ಹೇಳಿದಂತೆ ತೋರುತ್ತದೆ. ಇನ್ನು ಅನೇಕ ವಚನಕಾರರು ಹದಿನೆಂಟು ಜಾತಿಗಳೆಂದು ಕರೆಯುತ್ತಾರೆ. ಈ ಹದಿನೆಂಟು ಜಾತಿಗಳನ್ನು 'ಎಡಗೈ' ಜಾತಿಗಳೆಂದು 'ಬಲಗೈ' ಜಾತಿಗಳೆಂದು ವಿಭಾಗಮಾಡಿದ್ದರೂ ಇದರ ಉಲ್ಲೇಖವಚನಗಳಲ್ಲಿ ಸಿಗುವುದಿಲ್ಲ. ಅದು ಇವುಗಳ ವಿಷಯ ಶಾಸನಗಳಲ್ಲಿ ಕ್ರಿ.ಶ. ೪೫೪ರಷ್ಟು ಹಿಂದೆಯೇ ಉಲ್ಲೇಖಿಸಲಾಗಿದೆ. 'ಬಲಗೈ' ವರ್ಗವು ಬಣಜಿಗನಿಂದ ಆದಿಯಾಗಿ ಹೊಲೆಯರಿಂದ ಕೊನೆಯಾದರೆ, 'ಎಡಗೈ' ವರ್ಗವು ಪಾಂಚಾಲರಿಂದ ಪ್ರಾರಂಭವಾಗಿ ಮಾದಿಗರಿಂದ ಮುಗಿಯುತ್ತದೆ. ಮತ್ತು ಈ ಹದಿನೆಂಟು ಜಾತಿಗಳ ಉಲ್ಲೇಖದಲ್ಲಿ ಮಾದಿಗರ ಹೆಸರನ್ನು ಯಶೋಭೂಷಣವು ಹೇಳುತ್ತದೆ. ಮಾದಿಗರು ತಾವು ಆದಿಜಾಂಬವರು, ಜಾಂಬವಂತ ಕುಲದವರು, ಜಾಂಬವ ಪಟ್ಟಣದವರೆಂದು ಹೇಳುತ್ತಾರೆ. ಚನ್ನಯ್ಯಗಳಿರುವುದು ಅಂದರೆ ಹೊಲೆಯರಿರುವುದು 'ಚನ್ನಪಟ್ಟಣ' ಜಾಂಬವರಿರುವುದು 'ಜಾಂಬವ ಪಟ್ಟಣ' ಎನ್ನುತ್ತಾರೆ. ಈ ಜಾಂಬವ ರಾಮಾಯಣದ ಜಾಂಬವಂತ, ಒಂದು ಶಾಪದಿಂದಾಗಿ ತಾವು ಈ ಸ್ಥಿತಿಗೆ ಬಂದಿರುವುದಾಗಿ ಕಥೆಯೊಂದನ್ನು ಹೇಳುತ್ತಾರೆ ಆ ಕಥೆ ಹೀಗಿದೆ;

ಜಾಂಬವ ಕಾಲದ ಹುಡಗನೊಬ್ಬನಿಗೆ ಕಾಮಧೇನುವಿನ ಹಾಲು ಕುಡಿಯಬೇಕೆಂಬ ಆಸೆಯಾಯಿತು. ದೇವತೆಗಳು 'ಕುಡಿ' ಎನ್ನುವಾಗ, ಜಾಂಬವ ಅವನನ್ನು ತಡೆದನು, ಆದರೂ ಆ ಹುಡುಗ ಹಾಲನ್ನು ಕುಡಿದೇಬಿಟ್ಟನು. ಅನಂತರ ಹಾಲೇ ಇಷ್ಟು ರುಚಿಯಾಗಿರುವಾಗ ಕಾಮಧೇನುಪಿನ ಮಾಂಸವೆಷ್ಟು

ರುಚಿಯಾಗಿರಬೇಕೆಂದು ತಿಳಿದು ಅದನ್ನು ಕೊಂದು, ಮಾಂಸವನ್ನು ನಾಲ್ಕು ಭಾಗ ಮಾಡಿದನು. ದೇವತೆಗಳು ಮೂರು ಭಾಗ ತೆಗೆದುಕೊಂಡು, ಜಾಂಬವ ಹುಡಗನಿಗೆ ಒಂದು ಭಾಗಕೊಟ್ಟರು. ಈ ಸಂಗತಿ ಶಿವನಿಗೆ ತಿಳಿಯಲು, ಕಾಮಧೇನುವನ್ನು ಮತ್ತೆ ಪಡೆಯಲು ನಿಶ್ಚಯಿಸಿದಾಗ ದೇವತೆಗಳು ತಮ್ಮ ಭಾಗವನ್ನೆಲ್ಲ ಮರಳಿಕೊಟ್ಟರು. ಈ ಹುಡುಗ ಅಷ್ಟರಲ್ಲಿ ಅದನ್ನು ಬೆಂಕಿಯಲ್ಲಿ ಸುಟ್ಟುಬಿಟ್ಟಿದ್ದ ಅದನ್ನಾದರೂ ಕೊಡು ಎಂದರೂ ಕೊಡಲೊಪ್ಪಲಿಲ್ಲ. ಆ ಭಾಗವನ್ನು ಬಿಟ್ಟು ಕಾಮಧೇನುವಿಗೆ ಜೀವದಾನ ಮಾಡಿದರು. ಕಾಮಧೇನುವಿನ ಗಲ್ಲದ ಭಾಗ ಮಾತ್ರ ಕಪ್ಪಾಗಿ ಗಾಯವಾಯಿತು. ದೇವತೆಗಳೆದುರಿಗೆ 'ಮೊಂಡುತನ' ಮಾಡಿದ್ದರಿಂದ ಶಾಪಗ್ರಸ್ಥನಾಗಿ ಕೀಳು ಕುಲದವನಾದನು. ಆವಾಗಿನಿಂದಲೇ ಅವನು ಮಾದಿಗನಾದನು. ಅವನ ವಂಶದವರು ನಾವೆಂದು ಹೇಳುತ್ತಾರೆ. ಒಂದನ್ನೊಂದು ಹೋಲುವ ಇಂತದ ದಂತ ಕಥೆಗಳಿಂದ ತಿಳಿದು ಬರುವುದೇನೆಂದರೆ ಬಹುಶಃ ಸವರ್ಣೀಯರು ಅವರನ್ನು ಇಂತಹ ಕೆಲಸಗಳಲ್ಲಿ ತೊಡಗಿಸಿ, ದೇವತೆಗಳ ಹೆಸರಿನಲ್ಲಿ ಬೆರೆಸಿ ಕಥೆಯನ್ನು ಏಕೆ ಕಟ್ಟಿರಬಾರದು ಎಂದು ಸಂಶಯ ಬರಬಹುದು.

ಇನ್ನು ಕೆಲವು ಮಾದಿಗರು ತಾವು 'ಮಾತಂಗ' ಕುಲದವರು ಮಾತಂಗಿಯ ಮಕ್ಕಳು 'ದುರ್ಗಿಯ ಮಕ್ಕಳು' ಎಂದೆಲ್ಲಾ ಹೇಳುತ್ತಾರೆ. ಮತ್ತು ಬೌದ್ಧರ ಲಲಿತ ವಿಸ್ತಾರದಲ್ಲಿ ಹದಿನಾರು ರಾಜ್ಯಗಳ ವಿವರವಿದೆ. ಕಾಡು ಜನರಿಂದ ಕೂಡಿದ್ದು, 'ಮಗದ ರಾಜ್ಯ' ಮುಂತಾದ ಜಾತಿಯ ಜನರಿಂದ ಕೂಡಿದ್ದು 'ಕೋಸಲ ರಾಜ್ಯ' ಚಂಡಕುಲದಿಂದ ಕೂಡಿದ್ದು 'ವಂಶರಾಜ್ಯ' ದಸ್ಯಗಳಿಂದ ಕೂಡಿದ್ದು, 'ಮಥುರ ರಾಜ್ಯ' ಎಂದೆಲ್ಲಾ ಉಲ್ಲೇಖಿಸಲಾಗಿದೆ. ದಮ್ಮಪದ ಅಟ್ಟಕಥೆಯಲ್ಲಿ ಬರುವ ವಿಡುಡಬನ ಕಥೆ, ಮಾತಂಗ ಜಾತಕ ಮಾತಂಗ ಸೂತ್ರಗಳು ಬೌದ್ಧರಲ್ಲಿ ಪ್ರಸಿದ್ಧಿಹೊಂದಿವೆ.

ಒಂದು ಹೋಲಿಕೆಯಂತೆ ಮಾತಂಗರು ಕೆನರಾ ದೇಶವನ್ನಾಳುತ್ತಿದ್ದರು. ಒಂದು ರಾಜಮನೆತದವರೇ ಆಗಿದ್ದರೆಂದು ಹೇಳುತ್ತಾರೆ. ಮತ್ತೊಂದು ಅಭಿಪ್ರಾಯದಂತೆ ಮಾತಂಗರನ್ನು ಮಂಗಳೇಶನೆಂಬ ಚಾಲುಕ್ಯ ಅರಸನು (ಕ್ರಿ.ಶ. ೫೬೭–೬೧೦) ತನ್ನ ವಶದಲ್ಲಿರಿಸಿಕೊಂಡನೆಂದು ತಿಳಿದುಬರುತ್ತದೆ. ಇವರು ಚಾಲುಕ್ಯರಿಗಿಂತ ಪೂರ್ವದಲ್ಲಿ ಪ್ರಭಾವಶಾಲಿಯಾಗಿದ್ದು ಕೆಲವು ಪ್ರದೇಶಗಳನ್ನು ಆಕ್ರಮಿಸಿಕೊಂಡಂತೆ ತೋರುತ್ತಿದೆ. ಹದಿನಾರನೆಯ ಶತಮಾನದಲ್ಲಿ ಹೊಲೆಯರು (ಮಾದಿಗ, ಹೊಲೆಯ, ಚಾಂಡಾಲ ಇತ್ಯಾದಿ) 'ಕನಾಡ' ಜಿಲ್ಲೆಯಲ್ಲಿ ಮತ್ತೊಮ್ಮೆ ಪ್ರಬಲರಾಗಿ ತಲೆಯೆತ್ತಿದ ವೃತ್ತಾಂತವನ್ನು ಮುಂಬೈನ ಗೆಝುಟಿಯರ್‌ದಲ್ಲಿ ವಿವರಿಸಲಾಗಿದೆ.

ಮಾದಿಗರ ಮೂಲದ ಬಗೆಗೆ ಇನ್ನೊಂದು ಕಥೆ ಲಭ್ಯವಾಗುತ್ತಿದೆ. ಜಾಂಬವ ಋಷಿ ಈಶ್ವರನ ಸಭೆಗೆ ಪ್ರತಿದಿನವೂ ತಡವಾಗಿ ಬರುತ್ತಿದ್ದನು. "ಏಕೆ"? ಎಂದು ಶಿವನು ಕೇಳಿದಾಗ ತನ್ನ ಮಕ್ಕಳ ಬೇಡಿಕೆಗಳನ್ನು ಪೂರೈಸಿ ಬರುವುದರಿಂದ ತಡವಾಗುತ್ತಿದೆ ಎಂದನು. ಶಿವನು ಜಾಂಬವನ ಮಕ್ಕಳ ಮೇಲೆ ಕರುಣೆತೋರಿ ಬೇಡಿದ್ದನ್ನು ಕೊಡುವ ಕಾಮಧೇನುವನ್ನು ಅವನಿಗೆ ಕೊಟ್ಟನು. ಒಂದು ದಿನ

ಜಾಂಬವಮುನಿ ಮನೆಯಲ್ಲಿ ಇಲ್ಲದಿರುವಾಗ, ಸಾಂಖ್ಯಮುನಿ ಅವನ ಮನೆಗೆ ಬಂದನು. ಜಾಂಬವನ ಮಗ ಯುಗಮುನಿ ಅವನನ್ನು ಅತ್ಯಂತ ಆದರದಿಂದ ಸ್ವಾಗತಿಸಿಕೊಂಡು, ಸತ್ಕರಿಸಿ ಊಟ ಮಾಡಿಸಿದನು. ಊಟ ಮಾಡುವಾಗ ಹಾಲಿನ ಕೆನೆ ರುಚಿಯೆನಿಸಿ, ಕೆನೆ ಹೀಗಿರುವಾಗ ಮಾಂಸವೆಷ್ಟು ರುಚಿಯಾಗಿರ ಬಾರದು ಎಂದು ಸಾಂಖ್ಯನು ಕಾಮಧೇನುವನ್ನು ಕೊಂದು ಮಾಂಸವನ್ನು ತಿನ್ನುವುದಾಗಿ ಯುಗಮುನಿಗೆ ಹೇಳಿದನು. ಆದರೆ ಆತ ಇದಕ್ಕೊಪ್ಪಲಿಲ್ಲ. ಬೇಡವೆಂದರೂ ಕೇಳದೆ ಸಾಂಖ್ಯಮುನಿ ಹಸುವನ್ನು ಕೊಂದು ಎಲ್ಲರಿಗೂ ತಿನ್ನುವಂತೆ ಹೇಳಿದನು. ಈಶ್ವರನ ಸಭೆಯಿಂದ ಜಾಂಬವಮುನಿ ಬಂದಾಗ, ಎಲ್ಲರೂ ಮಾಂಸವನ್ನು ತಿನ್ನುತ್ತಿರುವುದನ್ನು ನೋಡಿದನು. ಸಾಂಖ್ಯ ಮತ್ತು ಯುಗಮುನಿಗಳನ್ನು ನ್ಯಾಯ ನಿರ್ಣಯಕ್ಕೆಂದು ಶಿವನ ಸಭೆಗೆ ಕರೆದೊಯ್ದನು. ಸಭೆಯ ಒಳಗೆ ಪ್ರವೇಶಿಸದೇ ಇಬ್ಬರು ಬಾಗಿಲಲ್ಲಿಯೇ ನಿಂತರು. ಶಿವನು ಕೋಪದಿಂದ ನೀವೀರ್ವರೂ ಚಾಂಡಲರಾಗಿರೆಂದು ಶಾಪವಿತ್ತನು. ಸಾಂಖ್ಯನು ಬಾಗಿಲದ ಬಲಗಡೆ ನಿಂತಿದ್ದರಿಂದ ಅವನ ವಂಶಜರು ಬಲಗೈಯವರು, ಅಂದರೆ ಹೊಲೆಯರಾದರು. ಯುಗಮುನಿ ಬಾಗಿಲದ ಎಡಗಡೆ ನಿಂತಿದ್ದರಿಂದ ಅವನ ಕುಲದವರು ಎಡಗೈಯವರು ಅಂದರೆ ಮಾದಿಗರಾದರು. ಆ ಶಾಪ ವಿವೇಚನೆಗಾಗಿ ಜನರಿಗೆ ಚಪ್ಪಲಿ ಹೊಲಿಯುತ್ತೇವೆ ಎಂದು ಹೇಳುತ್ತಾರೆ.

ಮಾದಿಗರ ಮೂಲವನ್ನು ಪ್ರಾಚೀನತೆಯನ್ನು ಕಂಡುಕೊಳ್ಳಲು ಶಾಸನಗಳು ಮತ್ತು ಸಾಹಿತ್ಯ ಕೃತಿಗಳು ಆಕರ ಸಾಮಗ್ರಿಗಳನ್ನೊದಗಿಸುತ್ತವೆ. ಕೆಳವರ್ಗದ ಜನಾಂಗಗಳನ್ನು ಕುರಿತು ಶಾಸನ, ಸಾಹಿತ್ಯ ಕೃತಿಗಳು ಹಾಗೂ ವಿದೇಶಿಗರ ಬರಹಗಳು ಹೆಚ್ಚಿನ ಮಟ್ಟಿಗೆ ಮೌನವನ್ನೇ ತಾಳುತ್ತಿವೆಯಾದರೂ ಅಲ್ಲಲ್ಲಿ ಕೆಲವು ನಿದರ್ಶನಗಳು ಸಿಕ್ಕುತ್ತಿವೆ. ಅವುಗಳನ್ನಿಲ್ಲಿ ನೋಡಬಹುದು.

ಕ್ರಿ.ಶ. ನಾಲ್ಕನೇ ಶತಮಾನದಲ್ಲಿ ಭಾರತಕ್ಕೆ ಬಂದ ಫಾಹಿಯಾನನು ಅಂದು ಭಾರತದಲ್ಲಿ ಏಳು ಜಾತಿಗಳಿದ್ದವೆಂದು ಹೇಳುತ್ತಾನೆ. ಚಾಂಡಾಲರು, ಪಟ್ಟಣದಲ್ಲಿ ಪ್ರವೇಶಿಸಬೇಕಾದರೆ ಕೋಲಿನಿಂದ ತಮ್ಮ ಬರುವಿಕೆಯನ್ನು ಸೂಚಿಸಬೇಕೆಂಬ ನಿಯಮವಿತ್ತು ಎನ್ನುತ್ತಾರೆ, ಹನ್ನೆರಡನೆಯ ಶತಮಾನದಲ್ಲಿ ಸಂಬೋಳಿ,ನಾಗಿದೇವ ಹಿಡಿದ ಕೋಲು ಇದೇ ಆಗಿರಬೇಕು. ಸಂಬೋಳಿಗೋಲು ಹಿಡಿದು ಊರನ್ನು ಪ್ರವೇಶಿಸುವ ಅನಿಷ್ಟ ಪದ್ಧತಿ ಬಹಳ ಪ್ರಾಚೀನವೆಂದು ಇದರಿಂದ ವಿಧಿತವಾಗುತ್ತಿದೆ. ಕ್ರಿ.ಶ. ೪೫೦ರಷ್ಟು ಹಿಂದಿನ ಗಂಗರಕಾಲದ ಶಾಸನವೊಂದರಲ್ಲಿ ಹದಿನೆಂಟು ಜಾತಿಗಳ ಉಲ್ಲೇಖವಿದೆ. ಬಾದಾಮಿ ಚಾಲುಕ್ಯರ ದೊರೆ ಮಂಗಳೇಶನು ಮಾತಂಗರು ಎಂಬುವರನ್ನು ಸೋಲಿಸಿದ್ದರ ಬಗೆಗೆ ಬಾದಾಮಿಯ ಗುಹಾ ಶಾಸನದಲ್ಲಿ ಹೇಳಲಾಗಿದೆ.

ಹದಿನಾಲ್ಕನೆಯ ಶತಮಾನದ ಶ್ರವಣ ಬೆಳಗೊಳದ ಶಾಸನವೊಂದರಲ್ಲಿ 'ಸಾತ್ವಿಕರು, ಮೋಷ್ಟಕರು ತರುಪಣ, ತಿರುವಿಡಿ, ತಂಣ್ಣಿರವರು ನಾಲ್ವತ್ತೆಂಟು ಜನಾಂಗಗಳು ಸಾವಂತ ಬೋವಕ್ಕಳು, ತಿರುಕುಲ, ಜಾಂಬವಕುಲ, ಮೊಳಗಾದ ಹದಿನೆಂಟು ನಾಡ' ಎಂಬಲ್ಲೆಲ್ಲ ಜಾಂಬವಕುಲ, ತಿರುಕುಲದ ಸ್ಪಷ್ಟ ಉಲ್ಲೇಖವಿದೆ.

ಇಲ್ಲಿರುವ ಜಾಂಬವ ಕುಲವೆಂಬುದು ಮಾದಿಗ ಕುಲ ಎಂಬುದು ಸ್ಪಷ್ಟ 'ತಿರುಕುಲ' ಎಂಬುದು ಹೊಲೆಯರ ಜಾತಿಯಾಗಿರಬಹುದು. ಕ್ರಿ.ಶ. ೧೩೬೮ರ ಸುಮಾರಿಗೆ ಜಾತಿಗಳ ಸಂಖ್ಯೆ ಹದಿನೆಂಟಿದ್ದು ಹೊಲೆ-ಮಾದಿಗರಂತ ಅಸ್ಪೃಶ್ಯ ಜನಾಂಗಗಳು ಪ್ರತ್ಯೇಕವಾಗಿ ಜೀವನೋಪಾಯ ಮಾಡುತ್ತಿದ್ದವೆಂದು ಸ್ಪಷ್ಟವಾಗುತ್ತದೆ.

ಕ್ರಿ.ಶ. ಸುಮಾರು ಹದಿನೇಳನೆಯ ಶತಮಾನದ ಶಾಸನವೊಂದು ದಾನ ಅಪಹರಿಸುವುದು 'ತನ್ನ ಹೆಂಡತಿಯನ್ನು ಹೊಲೆಮಾದಿಗರಿಗೆ ಕೊಟ್ಟುದ್ದಕ್ಕೆ ಸಮಾನ' ಎನ್ನುತ್ತದೆ. ಇದರಿಂದ ದಾನದ ಶಾಪಾಶಯದ ಭಾಗದಲ್ಲಿ ದಾನವನ್ನು ಅಪಹರಿಸಿದ ವ್ಯಕ್ತಿಗೆ ಒದಗಬಹುದಾದ ಕೆಡುಕನ್ನು ಹೇಳುವಾಗ ಹೊಲೆ-ಮಾದಿಗರ ಉಲ್ಲೇಖಗಳಿರುವುದು ಸ್ಪಷ್ಟವಾಗುತ್ತಿದೆ.

ಸಾಹಿತ್ಯ ಕೃತಿಗಳಲ್ಲಿಯೂ ಅಲ್ಲಲ್ಲಿ ಮಾದಿಗರನ್ನು ಕುರಿತು ಉಲ್ಲೇಖವಾಗಿರುವುದನ್ನು ಕಾಣಬಹುದು. 'ವಡ್ಡಾರಾಧನೆ'ಯ ಸುಕುಮಾರ ಸ್ವಾಮಿಯವರ ಕಥೆಯಲ್ಲಿ ವಾಯುಭೂತಿ ತಾನು ಮಾಡಿದ ಪಾಪ-ಕರ್ಮದ ಫಲವಾಗಿ ಅನೇಕ ಜನ್ಮಗಳನ್ನು ಕಳೆಯುತ್ತಾನೆ.

'ನಂಜುಂಡ ರಾಮನ ಚರಿತ್ರೆ'ಯಲ್ಲಿ (ಕ್ರಿ.ಶ. ೧೫೫೦) 'ಮಾತಂಗಿ' ಎಂಬುವವಳು ಸುಲ್ತಾನಸೇನೆಯ ಮುಖ್ಯಸ್ಥಳಾಗಿ ಬಂದು ಕುಮಾರರಾಮನನ್ನು ಸೋಲಿಸುತ್ತಾಳೆ. ಈಕೆ ಕೊಂಕಣ ದೇಶದ ,ಮಾದರ ಜಾತಿಯವಳು ಎಂಬುದು 'ಪಾಂಚಾಳ ಗಂಗನ' ಕೃತಿಯಲ್ಲಿ ಉಲ್ಲೇಖವಾಗಿದೆ. ಇವಳನ್ನು 'ಹರಳರ' ಕುಲದವಳೆಂದೂ 'ಹೊಲೆಯರ ಕುಲ' (ಮಾದಿಗ ಎಂದರ್ಥ) ದವಳೆಂದು ಹೇಳಲಾಗಿದೆ. ಕುಮಾರರಾಮನ ಸಾಂಗತ್ಯದಲ್ಲಿ ಮಾದರ ಜಾತಿಯವಳು ಸೇನಾನಿಯಾಗಿರುವುದರ ಏಕೈಕ ಚಿತ್ರಣವನ್ನು ಕಾಣಬಹುದು. ಕೆಲವರಾದರೂ ಮಾತಂಗರು ಚಾಲುಕ್ಯರ ಕಾಲದಲ್ಲಿ ಪ್ರಬಲರಾಗಿದ್ದರೆಂಬುದು ಖಚಿತ ನಂಜುಂಡ ಕವಿ ತನ್ನ ಕೃತಿಯಲ್ಲಿ ಕುಮಾರರಾಮನ ಆಪ್ತಸ್ನೇಹಿತರೆಂದು ಅವರ ಪರವಾಗಿ ಯುದ್ಧದಲ್ಲಿ ಹೋರಾಡಿದವರೆಂದು ಬೇರೆ ಬೇರೆ ಜಾತಿಯ ಕೆಲವು ವೀರರನ್ನು ಸೇರಿಸಿದ್ದಾನೆ. ಅವರಲ್ಲಿ 'ದೇವಿಶಟ್ಟೆಲಂಗ', 'ಕೊಳ್ಳಿಯನಾಗ', 'ಕಾಳಾಂಬಿಯ ಕಂಪ', 'ಹಿಂಡಿಯ ಲಕ್ಕ', 'ಅಕ್ಕಸಾಲಿಯ ಚಿಕ್ಕ', 'ಭಟರಲ್ಲಿಯೇ ಅಗ್ಗಳ ಏರಿಸುವ ಹೊಲೆಯರ ಹುಳ್ಳ', 'ಮಾದಿಗರ ಹಂಪ' ಮುಂತಾದವರನ್ನು ಹೆಸರಿಸಿದ್ದಾನೆ. ಇವರಲ್ಲಿ ದಲಿತ ವರ್ಗಕ್ಕೆ ಸಂಬಂಧ ಪಟ್ಟ ಹೊಲೆಯರ ಹುಳ್ಳ, ಮಾದಿಗರ ಹಂಪನ ಹೆಸರುಗಳು ಗಮನಾರ್ಹ. ಕಮ್ಮಟ ದುರ್ಗದ ಸಮೀಪದಲ್ಲಿರುವ ಒಂದು ಗುಡ್ಡವನ್ನು 'ಮಾದಿಗರ ಹಂಪಯ್ಯನ ಗುಡ್ಡ' ಎಂದು ಈಗಲೂ ಜನ ಕರೆಯುತ್ತಿರುವುದು ಹಂಪಯ್ಯನ ಗುಣಗಳಿಂದಾಗಿಯೇ ಇರಬೇಕು. ಆದ್ದರಿಂದ ದಲಿತ ವರ್ಗದ ವೀರರನ್ನು ಕುರಿತು ನಂಜುಂಡ ಕವಿಯ 'ಕುಮಾರರಾಮನ ಸಾಂಗತ್ಯ' ಒಂದು ಅಪೂರ್ವ ದಾಖಲೆ ಎನಿಸುತ್ತದೆ. ಅದೇ ರೀತಿಯಾಗಿ ವಚನಗಳಲ್ಲಿ ಮತ್ತು ಸರ್ವಜ್ಞನ ತ್ರಿಪದಿಗಳಲ್ಲಿ ಮಾದಿಗರ ಉಲ್ಲೇಖವನ್ನು ಹಿಂದೆ ವಿವರಿಸಲಾಗಿದೆ. ಮಹಾಭಾರತದಲ್ಲಿಯೂ ಮಾತಂಗ ಎಂಬ ಹೆಸರಿನ ಉಲ್ಲೇಖ ಬರುತ್ತದೆ. ಈಕೆ

ಚಾಂಡಾಲರಂತೆ ಶೂದ್ರಗಂಡ ಹಾಗೂ ಬ್ರಾಹ್ಮಣ ಸ್ತ್ರೀಯ ಸಂಯೋಗದಲ್ಲಿ ಹುಟ್ಟಿದವಳು ಅವಳ ಮಕ್ಕಳು ನಾವೆಂದು ಹೇಳಿಕೊಳ್ಳುವಲ್ಲಿ ಮಾದಿಗರ ಮೂಲವು ರಾಮಾಯಣ, ಮಹಾಭಾರತದ ಕಾಲದವರೆಗೂ ಹೋಗುತ್ತದೆ.

ಒಟ್ಟಿನಲ್ಲಿ ಮಾದಿಗರ ಜನಾಂಗವು ಬಹಳ ಪ್ರಾಚೀನ ಕಾಲದಿಂದಲೂ ಇತ್ತೆಂಬುದಕ್ಕೆ ಮಹಾಕಾವ್ಯ, ಸಾಹಿತ್ಯ ಕೃತಿ, ಶಾಸನಗಳು ತಕ್ಕಮಟ್ಟಿಗಾದರೂ ಆಧಾರಗಳನ್ನು ಒದಗಿಸುತ್ತವೆ. ಇಂದು 'ಮಾತಂಗ', 'ಮಾದಿಗ', 'ಜಾಂಬವ' ಎಂದು ಯಾವುದೇ ಹೆಸರಿನಿಂದ ತಮ್ಮನ್ನು ಇವರು ಕರೆದುಕೊಂಡರೂ ಮೂಲ ಒಂದೇ ಜನಾಂಗವಾಗಿದ್ದು ಅವರಲ್ಲಿಯೇ ಮುಂದೆ ವೃತ್ತಿ ಇರುವಿಕೆಗೆ ಅನುಗುಣವಾಗಿ ಅನೇಕ ಪಂಗಡಗಳಾಗಿ ನಿಂತವು. ಮಾದಿಗರ ಗುರುಗಳಾದ ಸಿದ್ದರಾಮೇಶ್ವರ ಅವರಿಂದ ಇವರ ವಂಶಾವಳಿ ಹಸ್ತಪ್ರತಿಯೊಂದರಲ್ಲಿ ಸಿಗುತ್ತಿದೆ. ಆ ಹೊತ್ತಿಗೆಯಲ್ಲಿ ಮಾದಿಗರ ವಂಶಾವಳಿ ಈ ಕೆಳಗಿನಂತಿದೆ.

ಮತಂಗ ಋಷಿ (ಮಗ) ಮತಂಗಋಷಿ (ಇವನಿಗೆ ಹನ್ನೆರಡು ಜನ ಮಕ್ಕಳು) ರಡ್ಡಿ, ಪಾಕನಾಟಿ, ಕಾಕರೆ, ಗುಲ್ಲೇಲ, ಗುಂಗುಟಿ, ಎಕ್ಕಲದೇವ, (ಜೋಗಿಣಿ) ಬೆಂಡರ, ಹೊಲಿಯ, ಅರವಾ, ಬೋಯಿ, ಮಾತಂಗಿ, ಡೊಕ್ಕಳಿಗ, ಎಂದು ಹನ್ನೆರಡು ಕುಲಗಳಾಗಿ ಬೇರ್ಪಟ್ಟಿವೆ. ಮತ್ತು ನೂಲಿ ಚಂದಯ್ಯನ ಕುಲದವರ ವಂಶಾವಳಿ ಹೀಗಿದೆ.

ಜಾಂಬವ ಋಷಿ, ಯುಗ ಮಹಾಮುನಿ, ಜಗಮಹಾಮುನಿ, ನೀಲ ಮಹಾಮುನಿ, ಪಾಲ ಮಹಾಮುನಿ, ದುಗ್ಗಿ ಮಹಾಮುನಿ, ರುದ್ರಾಕ್ಷ ಮಹಾಮುನಿ, ಬದ್ರಾಕ್ಷ ಮಹಾಮುನಿ, ರಕ್ತಾಕ್ಷ ಮಹಾಮುನಿ, ಚರ್ಮ ಮಹಾಮುನಿ, ಅಜಂಡ ಮಹಾಮುನಿ, ಅಘೋರ ಮಹಾಮುನಿ, ನಿರಂಕಾರ ಮಹಾಮುನಿ, ನೀಲಕಂಠ ಮಹಾಮುನಿ, ನೂಲಿ ಚಂದಯ್ಯ.

ಇಲ್ಲಿ ಬರುವ ಶರಣ ನೂಲಿ ಚಂದಯ್ಯನು ಬಿಜಾಪುರ ಜಿಲ್ಲೆ ಶಿವಣಗಿ ಗ್ರಾಮದವನು. ಇವನ ಕಾಯಕ ಹುಲ್ಲಿನ ಹಗ್ಗ ಮಾಡುವುದಾಗಿತ್ತು, ಈಗಲೂ ಕೆಲವು ಮಾದಿಗರು ಇದೇ ವೃತ್ತಿಯಲ್ಲಿ ತೊಡಗಿದ್ದಾರೆ. ಮೊದಲನೆಯ ವಂಶಾವಳಿಯನ್ನು ಗಮನಿಸಿದರೆ ಇಂದು ಬೇರೆ ಸ್ವತಂತ್ರ ಜಾತಿಯಾಗಿ ಬೆಳೆದಿರುವ ಹೊಲೆಯರು ಕೂಡ ಮಾದಿಗರ ಅಣ್ಣ-ತಮ್ಮಂದಿರೆಂದು ಹೇಳಬಹುದು. ಎರಡನೆ ವಂಶಾವಳಿ ಸ್ವಲ್ಪ ಸಂಶಯಕ್ಕೆ ಎಡೆಮಾಡಿ ಕೊಡುತ್ತದೆ.

* * *

ಅಧ್ಯಾಯ : 3

ಮಾದಿಗ ಸಮುದಾಯದ ಸಾಮಾಜಿಕ ಜೀವನ

ಸಾಮುದಾಯಿಕ ಬದುಕಿಗೆ ಅನ್ವಯವಾಗುವಂತೆ ಪ್ರತಿಯೊಂದು ಸಮುದಾಯವು ತನ್ನ ಪಾರಂಪರಿಕ ಆಚರಣೆಗಳು ಹಾಗೂ ಕೆಲವು ನಿಯಮಗಳನ್ನು ಸಮುದಾಯದ ಒಳತಿಗಾಗಿ ಯತಾವತ್ತಾಗಿ ಹಿಂದಿನಿಂದಲೂ ಪಾಲಿಸಿಕೊಂಡು ಬಂದಿವೆ. ಆಧುನೀಕರಣ, ಜಾಗತೀಕರಣ, ನಗರೀಕರಣ ಎಂಬ ಸಂಕೀರ್ಣ ಚಿಂತನೆಗಳ ಜೊತೆ ಜೊತೆಗೆ ಈ ಸಮುದಾಯಗಳು, ತಮ್ಮ ಅನನ್ಯತೆಯನ್ನು ಉಳಿಸಿಕೊಂಡು ಬರುತ್ತಿವೆ. ಚಾರಿತ್ರಿಕ, ಪಾರಂಪರಿಕ ಮೌಲ್ಯಗಳು ತಮ್ಮದೇ ಇರಬೇಕೆಂಬ ಹಂಬಲ ಈ ಸಮುದಾಯಗಳಲ್ಲಿ ಅಚ್ಚಾಗಿರುತ್ತದೆ. ಮುಖ್ಯವಾಗಿ ಸಾಮಾಜಿಕ ಜೀವನದ ಎಲ್ಲಾ ರಂಗಗಳಲ್ಲಿ ಅಂದರೆ ಸಾಮಾಜಿಕ, ಶೈಕ್ಷಣಿಕ, ರಾಜಕೀಯ, ಆರ್ಥಿಕ ಮುಂತಾದ ಕಡೆಗಳಲ್ಲಿ ತೀವ್ರ ನಿರ್ಲಕ್ಷ್ಯಕ್ಕೆ ಗುರಿಯಾಗಿರುವ ದಲಿತ ಸಮುದಾಯದ ನೈಜಸ್ಥಿತಿಯನ್ನು ಅರಿಯುವುದು, ಇಂದಿನ ತುರ್ತಾಗಿದೆ. ದಲಿತ ಸಮುದಾಯಗಳಲ್ಲಿ ಅತ್ಯಂತ ಕನಿಷ್ಠ ಜೀವನ ಸಾಗಿಸುತ್ತಿರುವ ಮಾದಿಗ ಸಮುದಾಯವು ಸಹ ತನ್ನ ಸಾಂಪ್ರದಾಯಕವಾದ ಅನನ್ಯತೆಗಳನ್ನು ಸಾಮಾಜಿಕ ಜೀವನದಲ್ಲಿ ಯಾವ ರೀತಿಯಾಗಿ ಪಾಲಿಸುತ್ತಿದೆ ಎಂದು ಅರಿಯುವುದು ಈ ಅಧ್ಯಯನದ ಪ್ರಮುಖ ಉದ್ದೇಶವಾಗಿದೆ.

ಇಂಡಿಯಾದ ಪರಂಪರೆಯಲ್ಲಿ ನಿರಂತರವಾಗಿ ಸಾಗಿ ಬಂದ ಪುರೋಹಿತಶಾಹಿ, ಆಡಳಿತಶಾಹಿ, ವಸಹತುಶಾಹಿ, ಇಂತಹ ಕಾಲಘಟ್ಟಗಳಲ್ಲಿಯೂ ಈ ಸಮುದಾಯದ ಬಗ್ಗೆ ಅಧ್ಯಯನಗಳು ನಡೆಯಲಿಲ್ಲ. ಸ್ವಾತಂತ್ರದ ನಂತರವು ಇದೇ ಪರಿಸ್ಥಿತಿ ಮುಂದುವರೆದಿದೆ. ಮಾದಿಗ ಸಮುದಾಯವು ಜಾಗತೀಕರಣ, ಐ.ಟಿ.ಬಿ.ಟಿ ಯಂತ ನವವಸಾಹತು ಶಾಹಿಗಳ ಕಪಿಮುಷ್ಟಿಯಲ್ಲಿದೆ. ಈ ಹಿನ್ನೆಲೆಯಲ್ಲಿಯಾದರೂ ಯಾವದೇ ರೀತಿಯ ಪ್ರಭಾವಗಳಿಗೆ ಬಲಿಯಾಗದೆ ತನ್ನ ಸಂಪ್ರದಾಯ, ಆಚರಣೆ ಮತ್ತು ನಂಬಿಕೆಗಳನ್ನು ಮುಂದಿನ ತಲೆಮಾರಿಗೆ ಕೊಂಡೊಯ್ಯುವ ಗುರುತರವಾದ ಜವಾಬ್ದಾರಿ ಸಮಸ್ತ ಮಾದಿಗ ಸಮುದಾಯದ ಮೇಲಿದೆ.

ಸ್ವತಂತ್ರ್ಯಾನಂತರದ ಸರ್ಕಾರಿ ಯೋಜನೆಗಳು ಯಾರಿಗೆ ತಲುಪಬೇಕಾಗಿತ್ತೋ ಅವರಿಗೆ ಈವರೆಗೆ ಗುರಿ ತಲುಪಿಲ್ಲ. ಆಧುನಿಕತೆಯಾಧಾರಿತ ಸಂಕೀರ್ಣ ಸಮಾಜದಲ್ಲಿ ಮಾದಿಗ ಸಮುದಾಯವು ಒಳಗೊಂಡಿರುವ ಆಚಾರ, ವಿಚಾರ, ರೀತಿ, ಸಂಪ್ರದಾಯ, ಪದ್ಧತಿ ಮುಂತಾದ ಅಂಶಗಳ ಬಗ್ಗೆ ಈ ಭಾಗದಲ್ಲಿ ಚರ್ಚಿಸಲಾಗಿದೆ.

೩.೧. ಸಾಮಾಜಿಕ ಹಿನ್ನೆಲೆ :

ಮಾದಿಗ ಸಮುದಾಯದಲ್ಲಿ ಅನೇಕ ವಿಭಿನ್ನ ಆಚರಣೆಗಳು ಬಳಕೆಯಲ್ಲಿವೆ. ಇವರ ಒಳಪಂಗಡಗಳು ಎಂದರೆ 'ಮೀಣಿಮಾದಿಗ' 'ಸಾಮಾದವರು' 'ಭಜಂತ್ರಿಯರು' 'ಡೋಣಿ ಮಾದಿಗರು' 'ಡೊಕ್ಕಾಮಿ ಅಸಾದರು' 'ಅಸಲರು' 'ಜಾಂಬರು' 'ತಕ್ಕ ಮಾದಿಗರು' 'ಗಡ್ಡರು' 'ಪೇಡಮಾದಿಗರು' 'ವಿಲ್ಲೂರು ಮಾದಿಗ' ಇವರು ಸಹ ಏಕ ಬಗೆಯ ಆಚರಣೆ ವಿಧಿ ವಿಧಾನಗಳನ್ನು ಹೊಂದಿದ್ದಾರೆ. ಇಲ್ಲಿ ಮಾದಿಗರಿಗೂ ಒಳಪಂಗಡದವರಿಗೂ ಯಾವುದೇ ಭಿನ್ನವಿಲ್ಲ.

ಸಾಮಾಜಿಕವಾಗಿ ಮಾದಿಗರಲ್ಲಿ ಎರಡು ಪ್ರಕಾರಗಳಿವೆ. ಒಂದು ಕನ್ನಡ ಮಾದಿಗರು, (ಕರ್ನಾಟಕ ಮೂಲದವರು) ಮತ್ತೊಂದು ತೆಲುಗು ಮಾದಿಗರು (ಆಂಧ್ರ ಮೂಲದವರು). ದೇಶಿಯ ಮತ್ತು ವಸಾಹಾತುಶಾಹಿಯ ದೃಷ್ಟಿಕೋನದ ಮತೀಯ ಪೂರ್ವಗ್ರಹಗಳು ದಲಿತ ಸಮುದಾಯಗಳ ಬದುಕನ್ನು ವಿರೂಪಗೊಳಿಸುವ ಶ್ರಮಿಕ ವರ್ಗ ಮತ್ತು ದಲಿತ ಸಮುದಾಯಗಳ ಕುರಿತು ವಸಹಾತುಶಾಹಿ ವ್ಯವಸ್ಥೆ ಅನೇಕ ಅಪಕಲ್ಪನೆಗಳನ್ನು ಮೈಗೂಡಿಸಿಕೊಂಡಿದೆ. ಆಂಧ್ರದ ಮೂಲದವರು ಸಹ ಸ್ಥಳೀಯರನ್ನು ಅಳವಡಿಸಿಕೊಂಡಿದ್ದಾರೆ. ಇಲ್ಲಿಗೆ ವಲಸೆ ಬಂದ ಮಾದಿಗರು ಸಹ ಸಾಮಾಜಿಕವಾಗಿ ಸಾಂಸ್ಕೃತಿಕವಾಗಿ ಭಿನ್ನವಾಗಿ ಜೀವನ ಸಾಗಿಸುತ್ತಿದ್ದಾರೆ.

ಸ್ವಾತಂತ್ರ್ಯ ನಂತರ ನಗರ ಹಾಗೂ ಗ್ರಾಮೀಣ ವಲಯಗಳಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ನಗರಕ್ಕೆ ಹೋಲಿಸಿದರೆ ಗ್ರಾಮೀಣರಲ್ಲಿಯ ಸಾಂಪ್ರದಾಯಿಕ ಆಚರಣೆಗಳಾದ ಜಾತೀಯತೆ, ಡಾಂಭಿಕ ಆಚರಣೆಗಳು ಇನ್ನು ಮುಂತಾದುದಾಗಿದೆ. ಗ್ರಾಮೀಣ ಭಾಗದಲ್ಲಿ ಜಾತೀಯತೆ ಎಂಬ ಪ್ರತ್ಯೇಕತೆ ಈವರೆಗೂ ಸರಿಪೂರ್ಣವಾಗಿ ನಾಶವಾಗಿಲ್ಲ. ಗ್ರಾಮೀಣ ಭಾಗಗಳಲ್ಲಿ ಇಂದಿಗೂ ಜಾತೀಯತೆ ತಾಂಡವವಾಡುತ್ತಿದೆ. ಆ ಕಡೆ ಗ್ರಾಮವೂ ಅಲ್ಲದ, ಈ ಕಡೆ ಸಂಪೂರ್ಣ ನಗರವಲ್ಲದ ಕೊಪ್ಪಳದಂತ ನಗರದಲ್ಲಿ ಇಂದಿಗೂ ಜಾತೀಯತೆಯ ಸುಳಿವುಗಳು ಸಿಗುತ್ತವೆ. ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯದಂತ ಪ್ರಮುಖ ವಿಷಯಗಳಲ್ಲಿ ಜಾತಿ ಪ್ರಮುಖ ಪಾತ್ರ ವಹಿಸುತ್ತದೆ. ಮಾದಿಗ ಕೇರಿಯಲ್ಲಿ ಬಹುಪಾಲು ಹಿರಿಯರು ಇಂದಿಗೂ ತನ್ನ ಸಮಕಾಲೀನ ಸವರ್ಣೀಯ ಮನೆಗಳಿಗೆ ಹೋದಾಗ ಮನೆಯ ಹೊರಗೆ ನಿಂತು 'ಧಣಿ', 'ಬುದ್ಧಿ' ಎಂದು ಸಂಬೋಧಿಸುವ, ಬೋಗಸೆಯಲ್ಲಿ ನೀರು ಕುಡಿಯವ ಅವರ ಮನೆಯ ಹೊರಗೆ ಕಟ್ಟೆ ಮೇಲೆ ಕುಳಿತುಕೊಳ್ಳುವ ಪರಿಪಾಠ ಇಂದಿಗೂ ಮುಂದುವರೆದಿದೆ. ಹಳೆಯ ತಲೆಮಾರಿನವರಿಗೆ ಇದು ಒಂದು ಸಾಂಪ್ರದಾಯಕ ಆಚರಣೆಯಾಗಿಯೇ ಉಳಿದಿದೆ. ಸಾಮಾಜೀಕರಣದಲ್ಲಿ ಮಾದಿಗರು ಸಹ ಇತರರಂತೆ ಸಾಮ್ಯವಾದ ಉಡುಗೆ-ತೊಡುಗೆಗಳನ್ನು ಧರಿಸುತ್ತಾರೆ. ಇಂದಿಗೂ ಸಹ ಈ ಸಮುದಾಯದಲ್ಲಿ ದೇವದಾಸಿ ಮತ್ತು ಬಾಲ್ಯ ವಿವಾಹದಂತಹ ಪದ್ಧತಿಗಳು ಜೀವಂತವಾಗಿವೆ. ಯಾವ ಕುಟುಂಬದಲ್ಲಿ ಪುರುಷ ಸಂತಾನ ಇರುವುದಿಲ್ಲವೋ ಅಂತಹ ಮನೆಯಲ್ಲಿ ಹಿರಿಯ ಮಗಳನ್ನು 'ಬಸವಿ'

ಯನ್ನಾಗಿ ಅಥವಾ 'ದೇವದಾಸಿಯಾಗಿ' ಬಿಡುವ ಪದ್ಧತಿ ಇದೆ. ಬಾಲ್ಯವಿವಾಹವು ಸಾಮಾನ್ಯವಾಗಿದೆ. ಮೈನೆರದವಳಿಗೆ ಹೆಚ್ಚಿನಕಾಲ ಮನೆಯಲ್ಲಿ ಇಟ್ಟುಕೊಂಡಿರುವದೆಂದರೆ ಉಡಿಯಲ್ಲಿ ಕೆಂಡ ಕಟ್ಟಿಕೊಂಡಂತೆ ಎಂಬ ಕಾರಣದಿಂದಲೇ ಮಾದಿಗ ಸಮುದಾಯದ ಬಾಲಕಿಯರು ಸಾಮಾಜಿಕ ಶೋಷಣೆಗಳಿಗೆ ಬಲಿಯಾಗುತ್ತಿದ್ದಾರೆ.

ಸಾಂಪ್ರದಾಯಕವಾಗಿ ಅಲಕ್ಷಿತ ಸಮುದಾಯಗಳಿಗೆ ಸೀಮಿತವಾಗಿರುವ ಚಾಕರಿಮಾಡುವ ಪದ್ಧತಿ ಇಂದಿಗೂ ಮುಂದುವರೆಯುತ್ತದೆ. ಮಾದಿಗ ಸಮುದಾಯದಲ್ಲಿ ಅತಿ ಹೆಚ್ಚು ಸರ್ಕಾರಿ ನೌಕರಿಯಲ್ಲಿರುವುದು ಜಾಡಮಾಲಿ, ಪೌರಕಾರ್ಮಿಕ ಹಾಗೂ ಚರಂಡಿ ಸ್ವಚ್ಛಗೊಳಿಸುವಂತಹ ಪಾರಂಪರಿಕ ವೃತ್ತಿಗಳಿಂದಾಗಿ ಅವರಿಗೆ ಸರ್ಕಾರದಿಂದ ಸಿಕ್ಕಿರುವಂತ ಕೆಲಸಗಳಿಂದಾಗಿ, ಸ್ವತಃ ತಮ್ಮ ಮನೆಗಳನ್ನು ಸ್ವಚ್ಛವಾಗಿಡದ ಮಾದಿಗರು ಊರನ್ನೆ ಸ್ವಚ್ಛವಾಗಿಡುವ ಕಾಯಕದಲ್ಲಿ ತೊಡಗಿದ್ದಾರೆ.

೩.೨ ಸಾಮಾಜಿಕ ಸ್ಥಿತಿಗತಿ

ಮಾದಿಗ ಸಮುದಾಯದಲ್ಲಿ ಸಾಮಾಜಿಕ ಸ್ಥಿತಿಗತಿಯು ವಿಭಿನ್ನವಾಗಿ ಕೂಡಿರುವಂತದ್ದು. ಏಕೆಂದರೆ ಅವರು ಮುಗ್ಧರು. ಏನು ಅರಿಯದ ಅನಾಗರಿಕರು. ಅನಕ್ಷರಸ್ಥರೂ ಸಂಪ್ರದಾಯದ ನಂಬಿಕೆಗಳನ್ನು ಹೃದಯ ಶ್ರೀಮಂತಿಕೆಯಿಂದ ಆಚರಿಸಿಕೊಂಡು ಬಂದಂತವರು. ಶತಶತಮಾನಗಳಿಂದ ತುಳಿತಕ್ಕೆ ಒಳಪಟ್ಟಿರುವವರು. ತಮ್ಮ ಕನಸುಗಳನ್ನು ಸುಟ್ಟುಕೊಂಡವರು. ಇತರರಿಗಾಗಿ ತನು, ಮನ, ಧನ, ಸಮರ್ಪಿಸಿಕೊಂಡವರು. ಸಮುದಾಯದಲ್ಲಿ ಉದಾರಿತನವನ್ನು ಮೆರೆದಂತವರು. ಅಂತಹ ಸಮುದಾಯದ ಸಾಮಾಜಿಕ ಸ್ಥಿತಿಗತಿ ಇತರೆ ಸಮುದಾಯದ ಸಾಮಾಜಿಕ ಸ್ಥಿತಿಗತಿಗಿಂತ ತುಂಬಾ ಭಿನ್ನವಾದುದು. ಸರಳತೆಯಿಂದ, ನಂಬಿಕೆಯಿಂದ, ದೃಡಭಕ್ತಿಯಿಂದ, ಆಚರಣೆಯಿಂದ, ಬದುಕುವ ಶೈಲಿಯಿಂದ ಎಲ್ಲದರಲ್ಲೂ ಶ್ರೀಮಂತಿಕೆಯನ್ನು ತೋರಿದವರೇ ಮಾದಿಗ ಸಮುದಾಯದವರು. ಕಾಯಕ ನಿಷ್ಠೆ ಅವರಲ್ಲಿ ಮನೆಮಾಡಿರುವಂತದ್ದು ದೇವರು ಕೊಟ್ಟ ವರವಾಗಿದೆ.

ಒಂದು ಸಮುದಾಯದ ಜೀವನ ಶೈಲಿಯನ್ನು ಮತ್ತು ಆ ಸಮುದಾಯದ ಮೂಲ ಸಂಸ್ಕೃತಿಯನ್ನು ಹಾಗೂ ಅವರ ಪರಂಪರೆಯಲ್ಲಿನ ಮೌಲ್ಯಗಳನ್ನು ಆಧರಿಸಿ ರೂಪುಗೊಂಡಿರುತ್ತದೆ ಎಂದು ಹೇಳಬಹುದು. ತದನಂತರ ಒಂದು ಸಂಸ್ಕೃತಿಯನ್ನು ಆಂತರಿಕ ಹಾಗೂ ಬಾಹ್ಯವಾಗಿ ಕೆಲವೊಂದನ್ನು ಒತ್ತಡಗಳಿಂದಾಗಿ ಬದಲಾಗುವಂತಹ ಸಮಯ ಸಾಧಕಗಳನ್ನು ಆಯಾ ಬದಲಾವಣೆಗಳಿಗೆ ತಕ್ಕಂತೆ ಜೀವನ ವಿಧಾನವನ್ನು ರೂಪಿಸಿಕೊಳ್ಳಬೇಕಾಗುತ್ತದೆ. ಇಂಥ ಒಂದು ಪರಿಣಾಮಕ್ಕೆ ತಕ್ಕಂತೆ ಮಾದಿಗರಲ್ಲಿ ಕೆಲವು ಸಾಮಾಜಿಕ ಸ್ಥಿತಿಗತಿಗಳನ್ನು ಕಾಣಬಹುದು. ಅದರಲ್ಲಿ ಮುಖ್ಯವಾಗಿ ಕೌಟುಂಬಿಕ ಜೀವನವನ್ನು, ವಸತಿ ವ್ಯವಸ್ಥೆಯನ್ನು, ಅವರ ಉಡುಗೆ ತೊಡುಗೆಗಳು, ಆಹಾರ ಪದ್ಧತಿ ಮತ್ತು ನ್ಯಾಯಪದ್ಧತಿಯನ್ನು, ನಂತರ ಅವರ ಕುಲಕಸಬುಗಳನ್ನು ನಾವು ಕಾಣಬಹುದಾಗಿದೆ.

ಮಾದಿಗರ ಆಹಾರ ಪದ್ಧತಿಯಲ್ಲಿ ಉಡುಗೆ ತೊಡುಗೆಗಳಲ್ಲಿ ಕೆಲವು ಬದಲಾವಣೆ ಕಂಡು ಬಂದರೂ ಮದುವೆ ಮತ್ತು ಸಾವುಗಳಿಗೆ ಸಂಬಂಧಿಸಿದ ಆಚಾರ ವಿಚಾರಗಳಲ್ಲಿ ಕೆಲವೊಂದನ್ನು ಉಳಿಸಿಕೊಂಡು ಬಂದಿದ್ದಾರೆ. ಆದ್ದರಿಂದ ಇವುಗಳ ವಿಶ್ಲೇಷಣೆ, ಅವರ ಸಂಸ್ಕೃತಿಯ ಮೂಲ ಸ್ವರೂಪದ ಮೇಲೆ ಬಹಳಷ್ಟು ಬೆಳಕನ್ನು ಚೆಲ್ಲುಬಹುದಾಗಿದೆ. ವಾಸ್ತವವಾಗಿ ಮಾದಿಗ ಸಮುದಾಯದಲ್ಲಿ ಅಂದರೆ ಹೊಲೆಮಾದಿಗರ ಬದುಕಿಗೂ ಮತ್ತು ಮಾದಿಗರ ಸಾಮಾಜಿಕ ಬದುಕಿಗೂ ಹೇಳಿಕೊಳ್ಳುವಂತಹ ವ್ಯತ್ಯಾಸಗಳೇನೂ ಕಂಡುಬರುವುದಿಲ್ಲ. ಒಂದೊಂದು ಸಮುದಾಯ ಒಂದೊಂದು ವಿಶಿಷ್ಟವಾದಂತಹ ಸಾಂಸ್ಕೃತಿಕ ಅಂಶವನ್ನು ಮಾತ್ರ ಹೊಂದಿರುತ್ತದೆ ಎಂದು ಹೇಳಬಹುದು. ಆದ್ದರಿಂದ ಇಲ್ಲಿ ಮಾದಿಗರ ಭೌತಿಕ ಸಂಸ್ಕೃತಿಗೆ ಸಂಬಂಧಿಸಿದಂತೆ ಕೆಲವು ಸಂಗತಿಗಳನ್ನು ಹೇಳಲಾಗಿದೆ.

ಮಾದಿಗರ ಸಾಮಾಜಿಕ ಸ್ಥಾನಮಾನಗಳಲ್ಲಿ ಮಾದಿಗರನ್ನು ಅತ್ಯಂತ ಕೆಳಸ್ಥರದಲ್ಲಿ ಇಡಲಾಗಿದೆ. ಹೊಲೆಯರಂತೆ ಇವರನ್ನು ಮೇಲ್ವರ್ಗದವರು ಮುಟ್ಟಿಸಿಕೊಳ್ಳುವುದಿಲ್ಲ. ಇಲ್ಲಿ ಒಂದು ವಿಚಿತ್ರವೆಂದರೆ ಬ್ರಾಹ್ಮಣರನ್ನು ಇವರು ತಮ್ಮ ಕೇರಿಯಲ್ಲಿ ಬರಗೊಡುವುದಿಲ್ಲ. ಒಂದು ವೇಳೆ ಏನಾದರೂ ಬಂದರೆ ಅವರನ್ನು 'ಛೀ ಹಳಿ ಹುಚ್ಚು ನಾಯಿ' ಎಂದು ಬೈದು ಕಳಿಸುತ್ತಿದ್ದರು. ನಂತರ ಅವನು ಬಂದು ಹೋದ ದಾರಿಯಲ್ಲಿ ಅಥವಾ ಜಾಗದಲ್ಲಿ ನೀರು ಹಾಕಿ ಸಗಣಿಯಿಂದ ಸಾರಿಸುತ್ತಾರೆ. ಇವರು ಅಗಸ ಹಾಗೂ ಗೊಲ್ಲರ ಮನೆಯಲ್ಲಿ ಎಂದಿಗೂ ಊಟಮಾಡುವುದಿಲ್ಲ ಎಂದು ಹೇಳುತ್ತಾರೆ. ಹೊಲೆಯರಲ್ಲಿ ಮುಖ್ಯಸ್ಥರು ಇರುವಂತೆ ಮಾದಿಗರಲ್ಲಿಯೂ ಸಹ ಕಟ್ಟೆಮನಿಯವರು ಮುಖಂಡರಾಗಿರುತ್ತಾರೆ. ಕನ್ನಡ ಮಾದಿಗರಲ್ಲಿ ದೊಡ್ಡ ಮಾದಿಗರನ್ನು ಎಂದು ಕರೆಯುತ್ತಾರೆ. ಅವರ ಕೇರಿಯಲ್ಲಿ ಒಬ್ಬ ಯಜಮಾನನ್ನು ಸಹ ನೇಮಿಸಿರುತ್ತಾರೆ. ಆ ಯಜಮಾನನು ಹೇಳಿದ ಹಾಗೆಯೇ ಕೇರಿಯ ಜನರೆಲ್ಲರೂ ಕೇಳಬೇಕಾಗುತ್ತದೆ. ಸಮಾಜದಲ್ಲಿ ಅವರಿಗೊಂದು ಸ್ಥಾನಮಾನವಿದೆ. ಆತನು ಸಮುದಾಯದಲ್ಲಿ ಸ್ವತಂತ್ರವಾಗಿ ತನ್ನ ಜೀವನ ನಡೆಸುವಲ್ಲಿ ಅನೇಕ ಏಳುಬೀಳುಗಳನ್ನು ಕಂಡಿದ್ದಾನೆ. ಕುಟುಂಬದ ವ್ಯವಸ್ಥೆಯಲ್ಲಿ ಬದುಕುವ ಜೀವನ ಶೈಲಿಯಲ್ಲಿ ಅನೇಕ ಏಳುಬೀಳುಗಳನ್ನು ಕಂಡಿದ್ದಾನೆ. ಕುಟುಂಬದ ವ್ಯವಸ್ಥೆಯಲ್ಲಿ ಬದುಕುವ ಜೀವನ ಪರಿಯಲ್ಲಿ ಎಲ್ಲದರಲ್ಲೂ ತನ್ನ ಸೂಕ್ಷ್ಮ ಬುದ್ಧಿವಂತಿಕೆಯನ್ನು ಸಮುದಾಯದ ಪರವಾಗಿ ತೋರಿದ್ದಾನೆ.

೩.೩ ಕೌಟುಂಬಿಕ ಜೀವನ

ಯಾವುದೇ ಒಂದು ಸಮುದಾಯದಲ್ಲಿ ಸಂಸ್ಕೃತಿಯನ್ನು, ಜೀವನವನ್ನು ಪ್ರತಿಬಿಂಬಿಸುವುದು ಕುಟುಂಬ. ಕುಟುಂಬ ಸಮುದಾಯದ ಹಿರಿಯ ಮಗ ಇದ್ದಂತೆ. ಕುಟುಂಬದಿಂದಲೇ ಆ ಸಮುದಾಯಕ್ಕೆ ಜೀವಾಳ. ಏಕೆಂದರೆ ಕುಟುಂಬದೊಂದಿಗೆ ಸಂಸ್ಕೃತಿಯ ಸಾವಿರಾರು ರೂಪಗಳು ಇವೆ. ಆ ಎಲ್ಲಾ ರೂಪಗಳಿಂದ ಆ ಸಮುದಾಯವನ್ನು ಗುರುತಿಸಬಹುದಾಗಿದೆ.

ಸಮುದಾಯದಲ್ಲಿ ಕೌಟುಂಬಿಕ ಜೀವನ ಸಂಸ್ಕೃತಿಯ ಜೀವಾಳವಾಗಿದೆ. ಕುಟುಂಬದಲ್ಲಿ ಎಲ್ಲಾ ಸದಸ್ಯರ ಪಾತ್ರ ಅಮೂಲ್ಯವಾದದ್ದು. ಮನೆಯ ಯಜಮಾನ ತಂದೆಯಾದರೂ ತಂದೆಗೆ ಯಜಮಾನಿ ತಾಯಿ ಆಗುತ್ತಾಳೆ. ಅಂದರೆ ಇಲ್ಲಿ ಕುಟುಂಬದಲ್ಲಿ ಮುಖ್ಯ ಜವಾಬ್ದಾರಿ ವಹಿಸುವನು ಯಜಮಾನ. ಸಮಾಜದಲ್ಲಿ ಪುರುಷ ಇದ್ದರೆ, ಕುಟುಂಬದಲ್ಲಿ ಸ್ತ್ರೀಯ ಪಾತ್ರ ಅವಿಸ್ಮರಣೀಯ.

ಜೀವನ ನಿರ್ವಹಣೆಗೆ ಕಾಯಕ ವೃತ್ತಿಯನ್ನು ಅವಲಂಬಿಸಿದ ಇವರಿಗೆ ಚಮ್ಮಾರಿಕೆ ಕಾಯಕ ಕುಲಕಸುಬಾಗಿದೆ. ಆದ್ದರಿಂದ ನಾನಾ ವಸ್ತುಗಳನ್ನು ಸೃಷ್ಟಿಸಿ ಅವುಗಳನ್ನು ಮಾರಿ ಜೀವನ ನಿರ್ವಹಣೆ ಮಾಡುವುದನ್ನು ಗಮನಿಸಬಹುದಾಗಿದೆ.

ಅದರಂತೆಯೇ ಉದ್ಯೋಗದ ನಾನಾ ಮುಖಗಳನ್ನು ಆ ಸಮುದಾಯದಲ್ಲಿ ಕಾಣಬಹುದು. ಇವರ ಕುಟುಂಬದಲ್ಲಿ ಅವಿಭಕ್ತ ಕುಟುಂಬಗಳನ್ನು ನೋಡಬಹುದು. ಹಿರಿಯರೆಲ್ಲರೂ ಕಾಯಕದಲ್ಲಿ ತೊಡಗಿದರೆ, ಕಿರಿಯರು ಮನೆಯ ಸಣ್ಣ ಪುಟ್ಟ ಕಾರ್ಯಗಳಲ್ಲಿ ಮಗ್ನರಾಗುವರು.

ಇವರಿಗೆ ಬಲವಾದ ದೈವನಂಬಿಕೆ, ಸಂಪ್ರದಾಯವನ್ನು ಜೀವಕ್ಕಿಂತ ಹೆಚ್ಚಾಗಿ ಆಚರಿಸಿದ್ದಾರೆ. ಅಲ್ಲದೆ ಕುಟುಂಬದಲ್ಲಿ ಆಚರಣೆ, ವೇಷಭೂಷಣ, ಆಹಾರ ಪದ್ಧತಿ, ನೆಲೆಯ ವ್ಯವಸ್ಥೆ, ಆಡಳಿತ, ನ್ಯಾಯಪದ್ಧತಿ, ವಿದ್ಯಾಭ್ಯಾಸ, ಹೈನುಗಾರಿಕೆ, ಕೃಷಿ ಇತರೆ ಆರ್ಥಿಕ ಮತ್ತು ಧಾರ್ಮಿಕ, ಶೈಕ್ಷಣಿಕ, ರಾಜಕೀಯ ಅಂಶಗಳನ್ನು ಸಾಮಾಜಿಕ ಸ್ಥಿತಿಗತಿಯಲ್ಲಿ ಸಮುದಾಯದ ಕುಟುಂಬಗಳಲ್ಲಿ ನೋಡಬಹುದಾಗಿದೆ.

೩.೪ ಆಹಾರ ಪದ್ಧತಿ

ಮಾದಿಗರು ಸೇವಿಸುವಂತಹ ಆಹಾರವು ಇತರ ಜನಾಂಗದಂತೆಯೇ ಇರುತ್ತದೆ. ಇಲ್ಲಿ ಹೊಲೆಯರು ಯಾವ ಆಹಾರವನ್ನು ಸೇವಿಸುತ್ತಾರೆಯೋ ಅವರು ಸಹ ಅದೇ ಆಹಾರವನ್ನು ಸೇವಿಸುತ್ತಾರೆ. ಇವರು ಮಾಂಸಹಾರಿಗಳು ಹೌದು, ಸಸ್ಯಹಾರಿಗಳೂ ಹೌದು. ಮಾಂಸ ಆಹಾರದಲ್ಲೂ ಮುಖ್ಯವಾಗಿ ಕೋಣದ ಮಾಂಸಕ್ಕೆ ಹೆಚ್ಚು ಮಹತ್ವವನ್ನು ಕೊಡುತ್ತಾರೆ. ಹಿಂದಿನ ಕಾಲದಲ್ಲಿ ತಾತ ಅಜ್ಜಿಯರು ಕೆಲವೊಂದು ಪುರಾಣ ಕಥೆಗಳನ್ನು ಜಾನಪದ ಗೀತೆಗಳನ್ನು ಹಾಡುಗಳನ್ನು ಮತ್ತು ಕೆಲವೊಂದು ಆಚರಣೆಗಳಿಗೆ ಸಂಬಂಧಿಸಿದಂತೆ ಹಾಡುಗಳನ್ನು ಹಾಡುತ್ತಾರೆ. ನಂತರ ಗ್ರಾಮದೇವತೆಗಳ ಆರಾಧನೆಯಲ್ಲಿ ಕೋಣಗಳನ್ನು ಬಲಿಕೊಡುತ್ತಿದ್ದರು. ಉದಾಹರಣೆಗೆ ಯುಗಾದಿ ಅಥವಾ ದಸರಾ ಹಬ್ಬ ಏನಾದರೂ ಬಂದರೆ ಆ ಹಬ್ಬಕ್ಕೆ ತಕ್ಕಂತೆ ಅಡಿಗೆಯನ್ನು ಮಾಡುತ್ತಾರೆ. ಅಂದರೆ ಯುಗಾದಿಗೆ ಸಂಬಂಧಿಸಿದ ಹಾಗೆ ಹೋಳಿಗೆ, ಕರಿಗಡುಬುಗಳನ್ನು ಮಾಡುತ್ತಾರೆ. ಮಾದಿಗರು ವಾರಕ್ಕೆ ೩ ಅಥವಾ ೪ ಬಾರಿ ಮಾಂಸ ತಿನ್ನುತ್ತಾರೆ.

ಹಿಂದೆ ಮಾದಿಗರು ಪ್ರಾಣಿಗಳ ಬಲಿ ನಿರ್ವಾಹಕರಾಗಿದ್ದರಿಂದ ಅವರಿಗೆ, ಬಲಿಯನ್ನು ಕೊಟ್ಟ ಪ್ರಾಣಿಯ ಪ್ರಧಾನ ಪಾಲು ಈ ಮಾದಿಗರಿಗೆ ಸಂದಾಯವಾಗುತ್ತಿತ್ತು. ನಂತರ ಹಿಂದೆ ಸತ್ತದನಗಳ

ವಾರಸುದಾರರು ಇವರೇ ಆಗಿದ್ದರಿಂದ ತಿನ್ನಲು ಯೋಗ್ಯವಾದ ಸತ್ತದನದ ಮಾಂಸವೂ ಸಹ ಇವರ ಮುಖ್ಯ ಆಹಾರವಾಗಿತ್ತು. ಆಗಿನ ಕಾಲದಲ್ಲಿ ಹಿರಿಯರು ಸಾಹುಕಾರ ಅಥವಾ ಗೊಂಚಿಗ್ಯಾರನ ಮನೆಯಲ್ಲಿ ಸಂಬಳ ದುಡಿಯಬೇಕಾಗಿತ್ತು. ಆಗಿನ ಕಾಲದಲ್ಲಿ ಅವನಿಗೆ ಕೊಡಬೇಕಾದ ಸಂಬಳ ವರ್ಷಕ್ಕೆ ಎರಡಾಣೆ, ಅಥವಾ ಮೂರಾಣೆಯನ್ನು ಕೊಡುತ್ತಿದ್ದರು. ಇದರಿಂದ ಮಕ್ಕಳು ಮರಿಗಳೆಲ್ಲರೂ ಜೀವನ ಸಾಗಿಸುತ್ತಿದ್ದರೂ. ನಂತರ ಆ ಹೊತ್ತಿಗೆ ಸಾಕಾಗುವಷ್ಟು ಮಾಂಸವನ್ನು ಇಟ್ಟುಕೊಂಡು ಉಳಿದ ಮಾಂಸವನ್ನು ಕುಡುಗೋಲಿನಿಂದ ಉದ್ದುದ್ದ ಕೊಯ್ದು ಹಗ್ಗವನ್ನು ಕಟ್ಟಿ ಆ ಹಗ್ಗಕ್ಕೆ ತೋರಣದಂತೆ ಹಾಕಿ ಒಣಗಿಸುತ್ತಿದ್ದರು. ನಂತರ ಏನಾದರೂ ಹೆಚ್ಚಾದರೆ ಆ ಮಾಂಸವನ್ನು ಸಣ್ಣಗೆ ತುಂಡು–ತುಂಡಾಗಿ ಮಾಡಿ ಒಂದು ಪುಟ್ಟಿಯಲ್ಲಿ ಹಾಕಿ ಆ ಪುಟ್ಟಿಯ ಮೇಲೆ ಒಂದು ಬೇಲಿಯನ್ನು ಇಟ್ಟು ಪ್ರಾಣಿಗಳು ಮುಟ್ಟದಂತೆ ನೋಡಿಕೊಳ್ಳಬೇಕಾಗುತ್ತದೆ. ಆದರೆ ಹಿಂದಿನ ಕುಲಕಸುಬು ಈಗ ಕೈಬಿಟ್ಟಿರುವುದರಿಂದ ಆಗ ಸಿಗುತ್ತಿದ್ದ ಬಹುಪಾಲು ದನಗಳು ಈಗ ಅಪರೂಪವಾಗಿವೆ ಎಂದು ಹೇಳಬಹುದು.

೩.೫ ವಸತಿ ವ್ಯವಸ್ಥೆ

ಮಾದಿಗರು ನೆಲೆಸಿರುವ ಕೇರಿಗೆ ಅಥವಾ ಓಣಿಗೆ 'ಮಾದರಗೇರಿ', 'ಮಾದರೋಣಿ' ಎಂದು ಕರೆಯುತ್ತಾರೆ. ಅಂದರೆ ಮಾದಿಗರು ಮೂಲತಃ ಊರಿಂದೂರಿಗೆ ಅಲೆಯುವ ಅಲೆಮಾರಿಗಳಾಗಿದ್ದು ಕಾಲ ಕ್ರಮೇಣ ಅಲ್ಲಲ್ಲಿ ನಲೆನಿಂತವರಾಗಿದ್ದಾರೆ. ಇವರು ನೆಲೆ ನಿಂತ ಮೇಲೆ ಮಳೆಗಾಲವೊಂದನ್ನು ಬಿಟ್ಟು ಉಳಿದೆಲ್ಲಾ ಋತುಗಳಲ್ಲೂ ಇವರ ರಂಗಜಾಥಗಳು ಸಂಚಾರದಲ್ಲಿರುತ್ತಿದ್ದವು. ಅಂದರೆ ಒಂದು ಊರಿನಲ್ಲಿ ಏನಾದರೂ ಮಳೆಬಾರದೇ ಹೋದರೆ ಇಲ್ಲಿ ಇರುವಂತಹ ಜನರು ವಲಸೆ ಹೋಗಲು ಪ್ರಾರಂಭಿಸುತ್ತಾರೆ. ಏಕೆಂದರೆ ತಮ್ಮ ತಮ್ಮ ಹೊಟ್ಟೆಪಾಡಿಗೋಸ್ಕರ ಒಂದು ಊರಿನಿಂದ ಮತ್ತೊಂದು ಊರಿಗೆ ಹೋಗಿ ಜೀವನವನ್ನು ಸಾಗಿಸುತ್ತಾರೆ. ನಂತರ ಆ ಊರಿನಲ್ಲಿ ದುಡಿದುಕೊಂಡು ಬಂದು ತಮ್ಮ ಮೂಲ ನೆಲೆಗಳಿಗೆ ಹಿಂತಿರುಗುತ್ತಾರೆ. ಇಂಥಹ ನೂರಾರು ವರ್ಷಗಳು ಸೇರಿ ಅರೆ ಅಲೆಮಾರಿಗಳಾಗಿ ಬದುಕಿ ಬಂದು ಮಕ್ಕಳು ಮರಿಯನ್ನು ಸಾಕಿಕೊಂಡು ಅಲೆಮಾರಿ ಬದುಕಿಗೆ ವಿದಾಯ ಹೇಳಿ ಇದೀಗ ಶಾಶ್ವತವಾಗಿ ನೆಲೆನಿಂತಿದ್ದಾರೆ.

ನಂತರ ಹಿಂದೆಲ್ಲ ಅಲೆಮಾರಿ ಬದುಕಿಗೆ ಅಂಟಿಕೊಂಡಿದ್ದ ಜನರು ತಮಗೆ ಮನೆಮಾಡಿಕೊಳ್ಳಬೇಕೆಂದು ಹಂಬಲ ಅಥವಾ ವ್ಯಾಮೋಹ ಅವರಲ್ಲಿರಲಿಲ್ಲ. ಹೋದ ಊರಲ್ಲಿ ಮಾದಿಗ ಕೇರಿಯಲ್ಲೇ ಇರುವ ಯಾವುದಾದರೂ ಮನೆಯೋ ಅಥವಾ ಮಾರಿಗುಡಿಯೋ ಇನ್ಯಾವುದೊ ಟೆಂಟುಗಳನ್ನು ಹಾಕಿಕೊಂಡು ವಾಸ್ತವ್ಯಕ್ಕೆ ಅಣಿಯಾಗುತ್ತಿದ್ದರು. ಅವರು ಇರುವಷ್ಟು ಕಾಲ ಇದ್ದು ದುಡಿದುಕೊಂಡು ತಮ್ಮ ಊರಿಗೆ ಹೋಗುತ್ತಿದ್ದರು. ಆದರೆ ಮಾದಿಗರ ಕೇರಿಯಲ್ಲೇ ಉಳಿಯಲು ಅವಕಾಶವಿತ್ತು. ಆದರೆ ದೊಕ್ಕಲರಂತೆ ಇವರನ್ನು ಊರ ಹೊರಗಡೆ ಇಡುತ್ತಿರಲಿಲ್ಲ. ಮಾದಿಗರವು ಪ್ರತ್ಯೇಕವಾದಂತಹ ಕೇರಿಗಳೇನಲ್ಲ. ಎಲ್ಲಾ

ಜನಾಂಗದವರ ಮನೆಗಳೂ ಸಹ ಕೂಡಿಕೊಂಡು ಇದ್ದವು. ಆದರೆ ಹೀಗ ಮಾದಿಗರ ಕೇರಿಯೇ ಬೇರೆ. ಲಿಂಗಾಯಿತರ ಮನೆಗಳೇ ಬೇರೆ. ಹೀಗೆ ಬೇರೆ ಬೇರೆ ಜನಾಂಗಗಳೆಂದು ವಿಂಗಡಣೆ ಮಾಡಿದರು. ಮಾದಿಗರ ಕೇರಿ ಮಾದಿಗರ ಕೇರಿಗಳೇ ಆಗಿರುತ್ತವೆ. ಉಳಿದ ಭಾಗಗಳಲ್ಲಿ ಇವರ ಸಂಖ್ಯೆ ಕಡಿಮೆ ಇರುವುದರಿಂದ ಮಾದಿಗರ ಕೇರಿಗಳಲ್ಲೇ ಇವರ ವಾಸಸ್ಥಳ. ಆದರೆ ಇವತ್ತಿನ ದಿನದಲ್ಲಿ ನಗರಗಳಲ್ಲಿ ಮಾದಿಗರ ಕೇರಿಗಳನ್ನು ಕಂಡು ಹಿಡಿಯುವುದಕ್ಕೆ ಆಗುವುದಿಲ್ಲ. ಇವರದೇ ಅದಂತಹ ಕೇರಿಗಳನ್ನು ಮಾಡಿಕೊಂಡಿದ್ದಾರೆ.

ಹಿಂದಿನ ಕಾಲದಲ್ಲಿ ಮಾದಿಗರ ಕೇರಿಯಂತೆಯೇ ಅವರಿಗೆ ಸ್ಮಶಾನ ಭೂಮಿ ಕೂಡ ಪ್ರತ್ಯೇಕವಾಗಿಯೇ ಇರುತ್ತಿತ್ತು. ನಂತರ ಸೇದುವ ಬಾವಿಯೂ ಸಹ ಪ್ರತ್ಯೇಕವಾಗಿತ್ತು. ಏಕೆಂದರೆ ನೀರನ್ನು ತರುವಂತಹ ಸಂದರ್ಭದಲ್ಲಿ ಮೇಲ್ಜಾತಿಯವರು ಕೊಡಗಳನ್ನು ಮುಟ್ಟಿಸಿಕೊಳ್ಳುತ್ತಾರೆ ಎಂಬ ಕಾರಣದಿಂದ ಅವರಿಗೆ ಪ್ರತ್ಯೇಕವಾದ ಸೇದುವ ಬಾವಿ ಇರುತ್ತದೆ. ಉದಾಹರಣೆಗೆ ಪ್ರಸ್ತುತ ಅಧ್ಯಯನದ ಕ್ಷೇತ್ರಕಾರ್ಯದಲ್ಲಿ ಕಂಡುಬಂದ ಸಂಗತಿಯೊಂದು ಹೀಗಿದೆ. ತಿಮ್ಮಲಾಪುರ ಎನ್ನುವ ಗ್ರಾಮದಲ್ಲಿ ಇವತ್ತಿಗೂ ಸಹ ಜಾತಿ–ಬೇಧ, ಮೇಲು–ಕೀಳು, ಎಂಬ ಭಾವನೆಯನ್ನು ಇಟ್ಟುಕೊಂಡಿದ್ದಾರೆ. ಕೆಳಜಾತಿಯವರು ಟೀ ಕುಡಿಯಲಿಕ್ಕೆ ಹೋದಾಗ ಅವರದೇ ಅದಂತಹ ಸಿಲವರ್ ಲೋಟಗಳನ್ನು ಇಡುತ್ತಿದ್ದರು. ಇವರು ಹೊರಗಡೆಯೇ ಕುಟಿತು ಟೀ ಕುಡಿಯಬೇಕಾಗುತ್ತಿತ್ತು. ಹಿಂದಿರುವಂತಹ ಜಾತಿಪದ್ಧತಿಯನ್ನು ಇಂದಿಗೂ ಬೆಳಸಿಕೊಂಡು ಬಂದಿದ್ದಾರೆ. ಆಗಿನ ಕಾಲದಲ್ಲಿ ಮಾದಿಗರು ತಮ್ಮ ಮನೆಗಳಿಗೆ ಕೇವಲ ಕೆಮ್ಮಣ್ಣು ಮಾತ್ರ ಬಳಿಯುತ್ತಿದ್ದರು. ಏಕೆಂದರೆ ಮಾದಿಗರ ಕೇರಿಯು ಊರಿನಿಂದ ಹೊರಗೆ ಎದ್ದು ಕಾಣುವಂತೆ ಇದ್ದರೂ ಸಹ ಸುಣ್ಣವನ್ನು ಬಳಿಯುತ್ತಿರಲಿಲ್ಲ. ಆದ್ದರಿಂದ ಮಾದಿಗರ ಕೇರಿಯಂತೆ ಹೊಲೆಯರ ಕೇರಿಯೂ ಸಹ ಊರಿನಿಂದ ಪ್ರತ್ಯೇಕವಾಗಿ ಇಡಲಾಯಿತು. ಹೀಗಾಗಿ ಊರಿಗೆ ಬರುವಂತಹ ಹೊಸಬರಿಗೆ ನೆಂಟರಿಷ್ಟರಿಗೆ ಸಾಧು ಸಂತರಿಗೆ ಇನ್ನಿತರ ಅಲೆಮಾರಿ ಜಾತಿಗಳಿಗೆ ಮಾದಿಗರ ಕೇರಿ ಎಂದು ಗೊತ್ತಾಗತ್ತಿತ್ತು. ಮಾದಿಗರನ್ನು ಉಳಿದೆಲ್ಲರಿಗಿಂತ ಕೀಳಾಗಿ ಕಾಣುವುದರಿಂದ ಈ ಪ್ರತ್ಯೇಕ ಕೇರಿಗಳನ್ನು ಮಾಡಲಾಯಿತು. ಏಕೆಂದರೆ ಮಾದಿಗರು ದನದ ಮಾಂಸವನ್ನು ತಿನ್ನುವುದರಿಂದ ಈ ಜಾತಿಯನ್ನು ಪ್ರತ್ಯೇಕವಾಗಿ ತಮ್ಮದೇ ಆದಂತಹ ಕೇರಿಯನ್ನಾಗಿ ಮಾಡಿಕೊಂಡು ಜೀವನವನ್ನು ಸಾಗಿಸುತ್ತಾರೆ. ಈ ಸಮುದಾಯದವರಿಗೆ ಕೇವಲ ಬಟ್ಟೆ, ಆಹಾರ, ನೀರು ಮತ್ತು ಮನೆಗಳು ಇರುತ್ತವೆ. ಆದರೂ ಕೂಡ ಸ್ವಚ್ಛತೆಯಿಂದ ಇರುವುದಿಲ್ಲ. ಏಕೆಂದರೆ ಬೆಳಿಗ್ಗೆ ಎಂಟೂವರೆ ಹೊತ್ತಿಗೆ ತಮ್ಮ ತಮ್ಮ ಹೊಲಗಳಿಗೆ ಹೋಗಿ ಕೆಲಸವನ್ನು ಮಾಡುತ್ತಾರೆ. ಬರುವುದಕ್ಕೆ ಸಾಯಂಕಾಲ ಆಗುತ್ತದೆ. ಇದರಿಂದ ಅವರು ಕೀಳಾಗಿ ಕಾಣುತ್ತಾರೆ. ಇದರಿಂದ ಮೇಲ್ವರ್ಗದವರು ಇವರನ್ನು ಮುಟ್ಟಿಸಿಕೊಳ್ಳುವುದಿಲ್ಲ. ತದನಂತರ ಮಾದಿಗರ ಬಾವಿ ಎಂದು ಸ್ಪಷ್ಟವಾಗಿ ಗುರುತಿಸಲು ಸಾಧ್ಯವಾಗುವಂತೆ ಆ ಬಾವಿಯ ದಡದಲ್ಲಿ ಕಲ್ಲನ್ನು ಹೂಳುತ್ತಾರೆ. ಇವತ್ತಿಗೂ ಕೆಲವೊಂದು ಊರುಗಳಲ್ಲಿ ಈ ಸಂಪ್ರದಾಯ ಇದೆ ಎಂದು ಹೇಳಬಹುದು. ಆದರೆ ಕೊಪ್ಪಳ ನಗರದಲ್ಲಿ ಈ ದೃಶ್ಯಗಳು ಕಂಡು

ಬರುವುದಿಲ್ಲ. ಅಂದು ಹೊಲದ ಬೇಸಾಯಕ್ಕೆ ಅಥವಾ ಉಳುಮೆಗೆ ಎತ್ತುಗಳ ದುಡಿಮೆ ಇರುವುದಿಲ್ಲ. ಇದು ಅವರ ನಂಬಿಕೆಯಾಗಿದೆ. ಇದರಿಂದ ಸೋಮವಾರದಂದು ಮನೆಯನ್ನು ಗುಡಿಸಿ ಸಾರಿಸಿ ಸ್ವಚ್ಚಮಾಡುತ್ತಾರೆ. ನಂತರ ಮಾದಿಗರ ಕೇರಿಗಳಲ್ಲಿ ರಾಮ, ಕೃಷ್ಣ, ನಾರಾಯಣ ಮುಂತಾದ ಈ ಯಾವುದೇ ದೇವರುಗಳು ಇರುವುದಿಲ್ಲ. ಆ ಹಟ್ಟಿಯಲ್ಲಿರುವುದು ಒಂದೇ ಒಂದು ಗುಡಿ. ದುರುಗವ್ವನ ಗುಡಿ ಇರುತ್ತದೆ. ಇದನ್ನು ಅದೇ ಕೇರಿಯ ಜನರು ಚಪ್ಪಡಿ ಕಲ್ಲುಗಳಿಂದಲೂ, ಮಣ್ಣಿನ ಗೋಡೆಗಳಿಂದಲೂ ಒಂದು ಮಂಟಪ ಅಥವಾ ಒಂದು ಗುಡಿಯನ್ನು ಕಟ್ಟಿ ಆ ಗುಡಿಯ ಒಳಗೆ ಒಂದು ಹೆಣ್ಣು ದೇವತೆಯನ್ನು ಕೂಡ್ರಿಸುತ್ತಾರೆ. ನಂತರ ಆ ದುರುಗಮ್ಮನ ಗುಡಿಯಲ್ಲಿ ಪ್ರತಿಸಂಜೆ ಹರಳೆಣ್ಣೆ, ಸೊಳ್ಳಿನ ದೀಪ ಮಂದವಾಗಿ ಉರಿಯುತ್ತಿರುತ್ತದೆ. ಈ ಗುಡಿಯನ್ನು ನೋಡಿಕೊಳ್ಳುಲು ಹಾಗೂ ಪೂಜೆಯನ್ನು ಮಾಡಲಿಕ್ಕೆ ಒಬ್ಬ ಪೂಜಾರಿಯು ಇರುತ್ತಾನೆ. ಆದ್ದರಿಂದ ಕೇರಿಯ ಜನರೆಲ್ಲರಿಗೂ ಇದು ಒಂದೇ ಗುಡಿಯಾಗಿರುತ್ತದೆ. ನಂತರ ಊರಿನ ಹಿರಿಯರು ಅಥವಾ ಪ್ರಾಯದ ಹುಡುಗರು ಊಟ ಮಾಡಿಕೊಂಡು ರಾತ್ರಿ ಆ ಗುಡಿಯ ಮುಂದೆ ಹಾಡು, ಭಜನೆ, ರಂಗತಾಲೀಮು ಸಹ ಹಾಡುತ್ತಾರೆ. ನಂತರ ವಯಸ್ಸಾದ ಮುದುಕರಿಗೆ ಈ ಗುಡಿಯೇ ವಾಸಸ್ಥಾನ. ಹೀಗೆ ಹಲವಾರು ಸಂಗತಿಗಳನ್ನು ಅವರ ನೆಲೆಗಳಲ್ಲಿ ಕಾಣಬಹುದು.

೩.೬ ಉಡುಗೆ ತೊಡುಗೆ

ಮಾದಿಗರಲ್ಲಿ ಉಡುಗೆ ತೊಡುಗೆಗಳಲ್ಲಿ ಯಾವುದೇ ಬದಲಾವಣೆ ಕಂಡುಬಂದಿಲ್ಲ. ಆದರೆ ಜಾಂಬವ ಹೆಂಗಸರು ಸೀರೆಯ ಸೆರಗನ್ನು ಬಲಗಡೆಗೆ ಹಾಕಿಕೊಂಡರೆ, ಮಾದಿಗರ ಹೆಂಗಸರು ಎಡಗಡೆ ಸೆರಗನ್ನು ಹಾಕಿಕೊಳ್ಳುತ್ತಿದ್ದರು. ನಂತರ ಗಂಡಸರು ಮತ್ತು ಮಕ್ಕಳು ಧರಿಸುವಂತಹ ಉಡುಗೆ ತೊಡುಗೆಗಳು ಆಭರಣಗಳು ಇತರ ಜನಾಂಗಕ್ಕಿಂತ ಭಿನ್ನವಾಗಿಲ್ಲ. ಎಲ್ಲವೂ ಹೊಲೆಯರಂತೆಯೇ ಇವೆ. ಹಿಂದಿನ ಕಾಲದಲ್ಲಿ ಮಾದಿಗರ ಹೆಂಗಸರು ಒಬ್ಬ ಊರಿನ ರೈತ ಅಥವಾ ಮುಖಂಡ ಏನಾದರೂ ಎದುರಿಗೆ ಬಂದರೆ, ಮೈ ಮೇಲೆ ಇರುವಂತಹ ಸೆರಗನ್ನು ತೆಗೆದುಕೊಂಡು ತಲೆತುಂಬ ಹೊದ್ದುಕೊಂಡು ಸ್ವಲ್ಪ ದೂರ ಸರಿದುಕೊಂಡು ಹೋಗುತ್ತಾಳೆ. ಇದು ಆಗಿನ ಕಾಲದ ಒಂದು ಸಂಪ್ರದಾಯವಾಗಿತ್ತು. ಆದರೆ ಇವತ್ತಿನ ಜಗತ್ತಿನಲ್ಲಿ ಅದು ಬೇರೆಯೇ ಆಗಿದೆ. ಆದರೆ ಇಂತಹ ಒಂದು ಸಂಪ್ರದಾಯ ಕೆಲವೊಂದು ಹಳ್ಳಿಗಳಲ್ಲಿ ಈಗಲೂ ತಲೆ ತುಂಬ ಸೆರಗನ್ನು ಹಾಕಿಕೊಂಡು ಓಡಾಡುತ್ತಾರೆ. ಹೊರಗಡೆ ಹೋದರೆ ತಲೆಯನ್ನು ತಗ್ಗಿಸಿಕೊಂಡು ಓಡಾಡುತ್ತಾರೆ. ಬಹಳಷ್ಟು ಹೆಂಗಸರು ಎಡಗಡೆಗೆ ಸೆರಗನ್ನು ಹೊದೆಯುತ್ತಾರಾದರೂ ಹಳಬರು ಮಾತ್ರ ಬಲಗಡೆ ಸೆರಗು ಹೊದೆಯುತ್ತಾರೆ. ಅಲ್ಲದೆ ಮಾದಿಗರಲ್ಲಿ ಇಂದಿಗೂ ವಿಶಿಷ್ಟವಾದ ಬಲಗಡೆ ಸೆರಗೂ ಪದ್ಧತಿಯನ್ನು ಅನುಸರಿಸುತ್ತಾರೆ. ಆದರೆ ಮಾದಿಗರಲ್ಲಿ ಹಳಬರು ಮಾತ್ರ ಯವಾಗಲೂ ಕುಡಪೈಟ ಪದ್ಧತಿಯನ್ನೇ ಅನುಸರಿಸಿಕೊಂಡು ಬಂದಿದ್ದಾರೆ. ಆದರೆ ಈಗಿನ ಹುಡುಗಿಯರು ಮತ್ತು ಹೆಂಗಸರು ಹೊರಗಿನ ಪ್ರಪಂಚದ ಕಡೆಗೆ ವಾಲಿದ್ದರಿಂದ ಅವರೆಲ್ಲರೂ

ಎಡಗಡೆ ಸೆರಗು ಹಾಕಿಕೊಳ್ಳುತ್ತಿದ್ದಾರೆ. ವಿಚಿತ್ರವೆಂದರೆ ಮಾದಿಗರಲ್ಲಿ ಕೂಡ ತಮ್ಮ ಪಣಕಟ್ಟಿಗೆ ಸೇರಿದ ಇನ್ನಿತರ ಜಾತಿಗಳನ್ನು ಹೆಸರಿಸಿ ಅವರು ಇಂದಿಗೂ ಮದುವೆಯ ಸಂದರ್ಭದಲ್ಲಿ ಕುಡಿಪೈಟನ್ನೇ ಅನುಸರಿಸುತ್ತಿದ್ದರು ಎಂದು ಹೇಳಬಹುದು.

ಕುಡಿಪೈಟ ತುಂಬಾ ಪೂರ್ವಾಕಾಲದ ಪದ್ಧತಿಯಾಗಿರುವುದರಿಂದ ಅದನ್ನು ಬಿಡಬಾರದೆಂದು ಮಾದಿಗರಲ್ಲಿ ಮತ್ತು ಹೊಲೆಯರಲ್ಲಿ ದೃಢ ನಿರ್ಧಾರವಾಗಿದೆ. ಅಂದರೆ ಹಳೆ ತಲೆಮಾರಿನ ಹೆಂಗಸರು ಹಾಕಿಕೊಳ್ಳುವಂತಹ ಕುಡಿಪೈಟವನ್ನು ಬಿಡಬಾರದೆಂದು ಆ ಹೆಂಗಸರ ಅಭಿಪ್ರಾಯ. ಆದರೆ ಇವರ ಕುಲದಲ್ಲೇ ಯುವಪೀಳಿಗೆಯ ಹೆಣ್ಣುಮಕ್ಕಳಿಗೆ ತಮ್ಮಲ್ಲಿನ ಹಳೆಯದರ ಬಗ್ಗೆ ಹೇಳಿದರೆ ಅವರಿಗೆ ತಾತ್ಸಾರವಾಗುತ್ತದೆ. ಏಕೆಂದರೆ ಹೊರಗಿನ ಪ್ರಪಂಚದ ಬೆಡಗುಗಳತ್ತ ತೀವ್ರವಾದ ಆಕರ್ಷಣೆಯನು ಮೂಡಿಸುತ್ತಾರೆ. ಇಲ್ಲಿ ಹಳೇ ತಲೆಮಾರಿನ ಹೆಂಗಸರು ಎಡ ಸೆರಗನ್ನೇ ಗೌರವದ ಪದ್ಧತಿಯಂತೆ ಅನುಸರಿಸುತ್ತಾ ಬಂದಿದ್ದಾರೆ. ಆದರೆ ಹೊಸ ಪೀಳಿಗೆಯ ತರುಣಿಯರು ಕುಡಿಪೈಟದ ಬಲಸೆರಗನ್ನು ಅತ್ಯಾಧುನಿಕವಾಗಿ ಆವಿಷ್ಕಾರಿಸಲ್ಪಟ್ಟ ಪ್ಯಾಷನ್‌ಗಳನ್ನು ಈಗಿನ ಹುಡಿಗಿಯರು ಮತ್ತು ಹೆಂಗಸರು ಬಳಸುತ್ತಾರೆ. ನಂತರ ಸಾಧಾರಣವಾಗಿ ಯಾರೂ ಚಪ್ಪಲಿ ಮೆಟ್ಟುವುದಿಲ್ಲ. ವಾಚು, ಉಂಗುರ, ಸರಗಳನ್ನಂತೂ ಹಾಕಿಕೊಳ್ಳುವುದಿಲ್ಲ. ಏಕೆಂದರೆ ಅವರಲ್ಲಿ ಬಡತನ ಎಂಬುದು ತಾಂಡವಾಡುತ್ತಿರುತ್ತದೆ. ಹಾಗೂ ಹೆಂಗಸರಲ್ಲಿ ತಾಳಿಯೊಂದು ಇರುತ್ತಿತ್ತು. ಅದು ಮಣಿಸರಗಳಿಂದ ಕೂಡಿಸಿಕೊಂಡು ಕೊರಳಿಗೆ ಹಾಕಿಕೊಳ್ಳುತ್ತಿದ್ದರು. ಆದರೆ ಇತ್ತೀಚಿನ ದಿನಗಳಲ್ಲಿ ಹೆಂಗಸರು ಚಿನ್ನದ ತಾಳಿಯನ್ನು ಹಾಕಿಕೊಳ್ಳುತ್ತಾರೆ. ಎಂದು ತಿಳಿದುಬರುತ್ತದೆ. ಆಗಿನ ಕಾಲದ ಹೆಣ್ಣುಮಕ್ಕಳು ಸಾಧಾರಣವಾದ ಮಣಿಸರಗಳು, ಬಳೆಗಳು, ಅಗ್ಗದ ಓಲೆಗಳು ಎಲ್ಲಾ ಮಹಿಳೆಯರಲ್ಲೂ ಕಾಣಿಸುತ್ತವೆ. ಅಪರೂಪಕ್ಕೆ ಒಂದೆರಡು ಚಿನ್ನದ ಆಭರಣಗಳು ಇರುತ್ತಿದ್ದವು. ನಂತರ ಮೂವತ್ತು ದಾಟಿದ ಹೆಂಗಸರಲ್ಲಿ ಎಲೆ ಅಡಿಕೆಯ ಚೀಲವು ಸಹ ಇರುತ್ತದೆ. ಮುದುಕಿಯರ ಚೀಲವನ್ನು ನೋಡಿದರೆ, ಅಡಿಕೆ, ಎಲೆ ಹಾಕಿಕೊಳ್ಳುವ ಸ್ಥಳವೇ ಬೇರೆಯಾಗಿರುತ್ತದೆ ನಂತರ ಕಡ್ಡಿಪುಡಿ ಹಾಕಿಕೊಳ್ಳುವ ಸ್ಥಳವೇ ಬೇರೆಯಾಗಿರುತ್ತದೆ. ಅದೆಲ್ಲವನ್ನು ಸೇರಿ ಒಂದೇ ಚೀಲದಲ್ಲಿ ಹಾಕಿಡುವುದನ್ನು ಕಾಣಬಹುದು.

'ಬಲಗಡೆ ಎಡಗಡೆ ಸೆರಗು' ಹಾಕುವುದನ್ನು ಕುರಿತು ಒಂದು ಕಥೆ ಇದೆ. ಒಂದು ಊರಲ್ಲಿ ಅಣ್ಣ ತಮ್ಮ ಇಬ್ರು ಇದ್ದರಂತೆ ಅಣ್ಣನಿಗೆ ಮದುವೆ ಆಗಿತ್ತು. ತಮ್ಮನಿಗೆ ಆಗಿರಲಿಲ್ಲ. ಹೀಗಿರುವಾಗ ತಮ್ಮನಿಗೂ ಅಣ್ಣನ ಹೆಂಡತಿಗೂ ಸಂಬಂಧ ಬೆಳೆಯಿತು. ಇಬ್ಬರೂ ಒಬ್ಬರನ್ನೊಬ್ಬರು ಅರೆಗಳಿಗೇನೂ ಬಿಟ್ಟಿರುವುದಕ್ಕೆ ಆಗುವುದಿಲ್ಲ. ಇನ್ನು ಅಣ್ಣನಿಗೆ ಗೊತ್ತಾದ್ರೆ ಸುಮ್ನೆ ಬಿಡೋದಿಲ್ಲ ಎಂದುಕೊಂಡು ತಮ್ಮನಾದವನು ಅವಳನ್ನು ಕರೆದುಕೊಂಡು ದೂರ ಅಂದರೆ ದೇಶಾಂತರ ಹೋಗಿಬಿಟ್ಟ. ಇತ್ತ ಅಣ್ಣನಿಗೆ ಚಿಂತೆ ಬಂತು. ಆಗ ಅವನಿಗೆ ಹುಚ್ಚು ಹಿಡಿಯಿತು. ಆ ಹುಚ್ಚಿನಲ್ಲಿಯೇ ಅವರನ್ನು ಹುಡುಕುತ್ತಾ ತಾನೂ ದೇಶಾಂತರ ಹೋಗಿಬಿಟ್ಟ. ಅವರನ್ನು ಹುಡುಕುತ್ತಾ ಆ ತಮ್ಮನೂ ಹೆಂಡತಿನೂ ಸಂಸಾರ ಮಾಡಿಕೊಂಡಿದ್ದ ಊರಿಗೆ ಬಂದ.

ಅಷ್ಟರೊಳಗೆ ಏನಾಗಿಬಿಟ್ಟಿತ್ತು ಎಂದರೆ ಅವನ ಗಡ್ಡ ಬೆಳೆದು ಮೊಳದುದ್ದ ಆಗೋಗಿತ್ತು. ತಿರುಗಿ ತಿರುಗಿ ಕಣ್ರಗ ಕಪ್ಪಾಗಿದ್ದನು. ನಿಲ್ಲುವುದಕ್ಕೆ ನಡುವು ಬರುವುದಿಲ್ಲ. ನಡೆಯುವುದಕ್ಕೆ ಬಲ ಇರುವುದಿಲ್ಲ. ನೀರು ಕುಡಿಯದೆಯೇ ನಾಲಿಗೆ ಬಾಯಾರಿಕೆಯಾಗುತ್ತದೆ. ಆಗ ಸಮೀಪದಲ್ಲಿ ಒಂದು ಮನೆ ಕಾಣಿಸುತ್ತದೆ. ಅಲ್ಲಿ ಹೋಗಿ ನೀರು ಕೇಳಿದನು.

ಆಗ ಅವನು ಯಾವ ಮನೆಯಲ್ಲಿ ನೀರು ಕೇಳಿದನೋ ಆ ಮನೆ ಯಾರದು ಎಂದರೆ ಇವನ ಹೆಂಡತಿ ಮತ್ತು ತಮ್ಮನೂ ಬಂದು ಸಂಸಾರ ಮಾಡ್ಕೊಂಡಿದ್ರಲ್ಲ ಅವರ ಮನೇನೆ. ಇವರ ಧ್ವನಿಕೇಳಿ ತಮ್ಮನಾದವನು ಹಿಂದಕ್ಕೆ ತಿರುಗಿ ನೋಡಿದ. ನೋಡಿದರೆ ಅಣ್ಣ ಏನು ಮಾಡುವುದು ನೀರು ಕೊಟ್ಟರೆ ಗುರುತು ಸಿಗುತ್ತದೆ. ಕೊಡದೆ ಹೋದರೆ ಅಣ್ಣನ ಪ್ರಾಣ ಹೋಗುತ್ತದೆ. ಎಂದನು ಆಗ ತಮ್ಮನು ಒಂದು ಉಪಾಯವನ್ನು ಮಾಡಿದ. ತನ್ನ ಹೆಂಡಿಗೆ ಎಲ್ಲಾ ವಿಷಯವನ್ನು ಹೇಳಿದ ಹಿಂಗ ಅಣ್ಣ ಬಂದಿದ್ದಾನೆ ನೀನು ಹಿಂಗೆ ಹೋಗಿ ನೀರು ಕೊಟ್ಟರ ಗುರುತು ಹಿಡಿಯುತ್ತಾನೆ. ಕೊಡದೇ ಹೋದರೆ ಅವನು ಸತ್ತು ಹೋಗುತ್ತಾನೆ. ಹಾಗಾಗಿ ನೀನು ಬಲಗಡೆ ಹಾಕಿಕೊಂಡಿರುವ ಸೆರಗನ್ನು ಎಡಗಡೆಗೆ ಹಾಕಿಕೊಂಡು ಹೋಗಿ ನೀರು ಕೊಡು ಎಂದನು. ಆಗ ಅವಳು ಬಲಗಡೆಗೆ ಇದ್ದ ಸೆರಗನ್ನು ಎಡಗಡೆಗೆ ಹಾಕಿಕೊಂಡು ನೀರನ್ನು ಕೊಟ್ಟಳು. ಆಗ ಅಣ್ಣನಿಗೆ ಅವಳ ಗುರುತು ಸಿಗಲಿಲ್ಲ. ಆಗ ಅವನು ಮುಂದಕ್ಕೆ ಹೋಗಿ ಬಿಟ್ಟನು ಆಗ ತಮ್ಮನೂ ಅತ್ತಿಗೇನೂ ಬಚಾವಾದರು. ಅಂದಿನಿಂದ ಇವತ್ತಿನವರೆಗೂ ಎಡಗಡೆ ಸೆರಗೇ ಆಗೋಯ್ತು.

೩.೭. ನ್ಯಾಯ ಪದ್ಧತಿ :

ಮಾದಿಗ ಸಮುದಾಯದವರು ತಮ್ಮದೇ ಆದ ಸಾಮಾಜಿಕ ರಚನೆಯನ್ನು ಹೊಂದಿದ್ದಾರೆ. ಅವರು ನ್ಯಾಯ ಕಟ್ಟೆಯ ನ್ಯಾಯಾದೀಶರು ಹೇಳಿದಂತೆ ನಡೆಯುತ್ತಾರೆ. ತಮ್ಮ ಕೇರಿಗಳಲ್ಲಿಯ ಆಂತರಿಕ ಮತ್ತು ಬಾಹ್ಯ ವಿಷಯಗಳ ಕುರಿತು ಆಗಾಗ ಚರ್ಚೆ ನಡೆಸುತ್ತಾರೆ. ಸಾಮಾಜಿಕ ನಿಯಮಗಳ ಉಲ್ಲಂಘನೆ ಮಾಡಿದರೆ ಆ ವ್ಯಕ್ತಿಗೆ ಅಥವಾ ಅವರ ಕುಟುಂಬಕ್ಕೆ ಶಿಕ್ಷೆಯನ್ನು ಕೊಡುತ್ತಿದ್ದರು.

ಆದ್ದರಿಂದ ಈ ಸಮುದಾಯವು ತಮ್ಮ ನಡುವಣ ಯಾವುದೇ ರೀತಿಯ ಒಳಜಗಳಗಳು ವಾಜ್ಯನ್ಯಾಯಗಳನ್ನು ಇವರೇ ಬುಡಕಟ್ಟುಗಳಂತೆ ತೀರ್ಮಾನಿಸಿಕೊಳ್ಳುತ್ತಾರೆ. ತಮ್ಮ ಬುಡಕಟ್ಟು ಜನಾಂಗದವರು ಯಾರೇ ಆಗಲಿ ಅವರಿಗೆ ಒಗ್ಗಟ್ಟು ಅವಶ್ಯಕವಾಗಿರುತ್ತದೆ. ಇವರ ಮನೆ ಮತ್ತು ಕುಲಗಳಲ್ಲಿ ಜಗಳ ಅಥವಾ ವಾಜ್ಯಗಳು ಜರುಗಿದರೆ ಅದು ಗುಂಪಿನಿಂದ ಹೊರಗೆ ಹೋಗುವಂತಿಲ್ಲ ಅಲ್ಲಿಯೇ ತೀರ್ಮಾನವಾಗಿಬಿಡಬೇಕು. ಎಷ್ಟೇ ದೊಡ್ಡ ಜಗಳ ಆದರೂ ಸಹ ಇತರ ಸ್ಥಳಗಳಲ್ಲಿರುವ ತಮ್ಮ ಕುಲದ ಯಜಮಾನರುಗಳಿಂದ ಆ ಜಗಳವನ್ನು ಸುಮ್ಮನಿರಿಸುತ್ತಾರೆ. ಈ ರೀತಿಯ ನ್ಯಾಯ ವ್ಯವಸ್ಥೆ ಮತ್ತು ಬಿಗಿ ಭದ್ರತೆ ಇರುವುದರಿಂದಲೇ ಇಂದಿಗೂ ಬುಡಕಟ್ಟು ಸಮುದಾಯಗಳಲ್ಲಿ ಯಾವುದೇ ರೀತಿಯ ಜಗಳ ಕಲಹಗಳು ಆಗದೇ ಸಂತೋಷದಿಂದ ಜೀವನವನ್ನು ಸಾಗಿಸುತ್ತಾರೆ.

ಹಿಂದೆ ಇವರಲ್ಲಿ ಯಾರಾದರೂ ಅಪರಾಧ ಮಾಡಿದರೆ ದಂಡವನ್ನು ವಿಧಿಸುತ್ತಿದ್ದರು. ಹೆಣ್ಣು ಮಕ್ಕಳು ಮದುವೆಯಾಗಿ ತಮ್ಮ ಗಂಡನ ಮನೆಗೆ ಹೋಗದಿದ್ದರೆ ಕೇರಿಯ ಯಜಮಾನರೆಲ್ಲರೂ ಸೇರಿಕೊಂಡು ನ್ಯಾಯ ತೀರ್ಮಾನವನ್ನು ಮಾಡಿ ಅವಳನ್ನು ಗಂಡನ ಮನೆಗೆ ಕಳುಹಿಸುವರು. ಅವಳು ಏನಾದರೂ ನ್ಯಾಯ ತೀರ್ಮಾನಕ್ಕೆ ಬದ್ಧಳಾಗದೇ ಅಥವಾ ಗಂಡನ ಮನೆಗೆ ಹೋಗದೇ ಇದ್ದರೆ, ಕೈ ಕಾಲನ್ನು ಕಟ್ಟಿ ಎತ್ತಿನ ಗಾಡಿಯೊಳಗೆ ಹಾಕಿ ಗಂಡನ ಮನೆಗೆ ಕಳುಹಿಸುತ್ತಿದ್ದರು. ನಂತರ ಅವಳ ಗಂಡನ ತಪ್ಪಿದ್ದರೆ ಅವನಿಗೆ ದಂಡವನ್ನು ಹಾಕಿ ಅವರಿಬ್ಬರನ್ನು ಒಂದುಗೂಡಿಸುತ್ತಾರೆ. ಈ ಸಮುದಾಯದಲ್ಲಿಯೇ ಅಪರಾಧಿಗಳಿಗೆ ಕಟ್ಟೆಮನೆ ಅಥವಾ ಹಿರಿಯರ ಭಯವಿಲ್ಲದಿದ್ದರೂ ದೇವರಿಗೆ ಭಯ ಪಡುತ್ತಾರೆ. ಇಂದಿಗೂ ಈ ಸಮಾಜದಲ್ಲಿ ಯಾವುದೇ ಹಬ್ಬ ಜಾತ್ರೆಗಳು ನಡೆಯಬೇಕಾದರೆ ನೇಮಿಸಲ್ಪಟ್ಟ ಯಜಮಾನರ ಮುಖಾಂತರ ಅಥವಾ ಹಿರಿಯರ ಮುಂಖಾಂತರ ನಡೆಯುತ್ತವೆ. ಜಾತ್ರೆ ಹಬ್ಬಗಳಿಗೆ ತಗಲುವ ವೆಚ್ಚವನ್ನು ಅವರ ಸಮುದಾಯದಲ್ಲಿ ಬಡವರಿಗಾಗಲೀ ಶ್ರೀಮಂತರಿಗಾಗಲಿ, ಯಾರಾದರೂ ಸಹ ಯಜಮಾನರು ಎಷ್ಟು ಕೇಳುತ್ತಾರೋ ಅಷ್ಟು ಪ್ರತಿ ಕುಟುಂಬದವರು ಕೊಡಬೇಕಾಗುತ್ತದೆ.

ಮಾದಿಗ ಸಮುದಾಯದಲ್ಲಿ ಹೆಣ್ಣುಮಕ್ಕಳು ತನ್ನ ಕುಲದಿಂದ ಬೇರೆ ಜಾತಿಯವರನ್ನು ಏನಾದರೂ ಮದುವೆ ಆದರೆ ಅವಳನ್ನು ಈ ಕೇರಿಯಿಂದ ಮತ್ತು ಕುಲದಿಂದ ಹೊರಹಾಕುತ್ತಾರೆ.ಒಂದು ವೇಳೆ ಅವರ ಕುಲದಲ್ಲೇ ಏನಾದರೂ ಮದುವೆ ಆದರೆ ಅಂದರೆ, ಅವರಲ್ಲೇ ಕೆಲವು ಬೆಡಗುಗಳು ಬರುತ್ತವೆ. ಆ ಬೆಡಗಿನ ಮುಖಾಂತರ ಮದುವೆಯಾದರೆ ಮಾತ್ರ ದಂಡ ಹಾಕುವ ಪದ್ಧತಿ ರೂಢಿಯಲ್ಲಿತ್ತು. ಮಾದಿಗ ಸಮುದಾಯದವರೂ ಸಹ ಇಂದಿಗೂ ಕೆಲವು ಸಂಪ್ರದಾಯ ಮತ್ತು ನಂಬಿಕೆಗಳನ್ನು ಉಳಿಸಿಕೊಂಡು ಬಂದಿದ್ದಾರೆ.

೩.೮. ಕಸಬು

ಮಾದಿಗರು ನಿರ್ಧಿಷ್ಟವಾಗಿ ಸಾಂಪ್ರದಾಯಿಕ ಕಸುಬಿನಿಂದಾಗಿಯೇ ಈ ಜನಾಂಗಕ್ಕೆ ಮಾದಿಗರು ಎಂಬ ಹೆಸರು ಬಂದಿರುವುದು ಸ್ಪಷ್ಟ. ಮಾದಿಗ ಕುಲಗಳ ಮದುವೆಯ ಸಂದರ್ಭದಲ್ಲಿ ತಂಗಡಿ ದ್ಯಾವರನ್ನು ಮತ್ತು ಯಲ್ಲಮ್ಮನಿಗೆ ಕಾಯಿಯನ್ನು ಕೊಟ್ಟು ಪೂಜೆಯನ್ನು ಮಾಡುತ್ತಿದ್ದರು. ಹಾಗಿಯೇ ಪಣಕಟ್ಟು ವ್ಯವಸ್ಥೆಯ ಪ್ರವರ್ಧಮಾನದ ಕಾಲದಲ್ಲಿ ಎಡಗೈ ಪಣಕಟ್ಟಿನ ಕುಲ ಚಿಹ್ನೆಗಳನ್ನು ಹೊರುವ ಅಧಿಕೃತ ವಾರಸುದಾರಿಕೆಯೂ ಇವರಲ್ಲಿದೆ. ಇವರು ಮೂಲತಃ ಪ್ರದರ್ಶಕ ಕಲಾವಿದರು.

ಇವರ ಪ್ರದರ್ಶನ ಪರಿಣಿತಿಯನ್ನು ಆಧರಿಸಿಯೇ ಇವರಿಗೆ ಈ ಹೆಸರು ನಿಂತಿರುವುದು. ಮಾದಿಗರ ಪೂರ್ವಜರು ಇವರ ಕುಲಕ್ಕೆ ಅತೀ ಮುಖ್ಯವಾದ ಎಲ್ಲಮ್ಮ ಅಥವಾ ಮಾರಮ್ಮೆ ಎಂಬ ಶಕ್ತಿಯ ವೇಷವನ್ನು ಹಾಕಿಕೊಂಡು ಶಿವನ ಬಳಿ ಕುಣಿಯುತ್ತಾ ಹೋದದ್ದರಿಂದಾಗಿಯೇ ಇವರಿಗೆ ಈ ಹೆಸರು

ಬಂದಿತು. ನಂತರ ವಂಶಪಾರಂಪರ್ಯವಾಗಿ ಮಾದಿಗರು ಮಾಡುತ್ತಾ ಬಂದಿರುವ ವೃತ್ತಿಗಳನ್ನು ಕೆಲವು ಶಾಸನಗಳಲ್ಲಿ ಮತ್ತು ಸಾಹಿತ್ಯ ಕೃತಿಗಳಲ್ಲಿ ಹಾಗೂ ಜನಪದ ತ್ರಿಪದಿಗಳಲ್ಲಿ ಉಲ್ಲೇಖಗೊಂಡಿವೆ. ತಲೆತಲಾಂತರದಿಂದ ಬಂದ ಮಾದಿಗರೆಲ್ಲರೂ ಚರ್ಮದ ಕೆಲಸದಲ್ಲಿ ಅಷ್ಟೇ ಅಲ್ಲ ಬೇರೆ ಬೇರೆ ವೃತ್ತಿಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿರುವದು ಕಂಡುಬರುತ್ತದೆ.

ಮಾದಿಗರು ಆಗಿನ ಕಾಲದಲ್ಲಿ ಊರಿನ ಮುಖಂಡನ ಮನೆಯಲ್ಲಿ ಅಥವಾ ಗೌಡನ ಮನೆಯಲ್ಲಿ ಮಾದಿಗರು ಜೀತದಾಳುಗಳಾಗಿ ದುಡಿಯುತ್ತಿದ್ದರು. ಏಕೆಂದರೆ ಅವರು ಬಹಳ ಬಡತನದಿಂದ ಜೀವನವನ್ನು ಸಾಗಿಸುತ್ತಿದ್ದರು. ಇದರಿಂದ ಬೇರೆಯವರ ಮನೆಯಲ್ಲಿ ಕೆಲಸಮಾಡಲು ಆಸಕ್ತರಾದರೂ, ಈ ಸಮುದಾಯದವರು ಎಲ್ಲೇ ಹೋದರೂ ಸಹ ಅವರನ್ನು ಕೀಳುಮಟ್ಟದಿಂದ ಮೇಲ್ವರ್ಗದ ಜನರು ಅವರನ್ನು ನೋಡುತ್ತಿದ್ದರು. ಆಗ ಬರುಬರುತ್ತಾ ತನ್ನ ಸ್ವಂತ ಕಾಯಕವನ್ನು ಮಾಡಲು ಸಿದ್ದರಾದರು. ಅವತ್ತಿನಿಂದ ಇವತ್ತಿನವರೆಗೂ ಸಾಹುಕಾರನ ಮನೆಯಲ್ಲಿ ಜೀತದಾಳಾಗಿ ದುಡಿಯಲು ನಿರಾಕರಿಸಿದರು. ಏಕೆಂದರೆ ತನ್ನ ಸ್ವಂತ ಕೈ ಕಸುಬನ್ನಾಗಿ ಮಾಡಿಕೊಂಡು ಜೀವನವನ್ನು ಸಾಗಿಸುತ್ತಾರೆ.

ಸಾಹಿತ್ಯ ಕೃತಿಗಳಲ್ಲಿಯೂ ಮಾದಿಗರ ಕಸಬನ್ನು ಕುರಿತು ಕೆಲವು ಉಲ್ಲೇಖಗಳಿವೆ. ಮಾದಿಗರು ತೊಗಲನ್ನು ಹದ ಮಾಡುವ ಮತ್ತು ಅದರಿಂದ ಬಾರುಗಳನ್ನು ತಯಾರಿಸುವ ಕೆಲಸವನ್ನು ಮಾಡುತ್ತಿದ್ದರು.

ಮಾದಿಗರ ಬಗ್ಗೆ ನಯಸೇನನು ಒಂದು ಮಾತನ್ನು ಹೇಳುತ್ತಾನೆ.

ಮಾದಿಗನಂತೆ ಬಾರೆತ್ತುವರ್, ಕಿಂದಪ್ಪ ವ್ರತವಿಂಗಂ ದರೆಗಿದ

ಮೊದೆಗನು ಮಗ್ಗಲ ವ್ಯಂತ್ಯಂಗ'

ಆದರೆ ಮಾದಿಗರು ಕೀಳುಮಟ್ಟದಿಂದ ಬಂದವರಾಗಿದ್ದಾರೆ ಎಂದು ಹೇಳುವುದು ಈ ಪದ್ಯದ ಆಶಯವಾಗಿದೆ. ಮಾದಿಗರು ಹರಿಗೋಲು, ಚರ್ಮದ ಪಾದರಕ್ಷೆಗಳು, ಮಿಣಿ, ಬಾರುಕೋಲು, ಮೃದಂಗ, ನಗಾರಿ, ಇತ್ಯಾದಿ ಚರ್ಮ ವಾದ್ಯಗಳನ್ನು ಈ ಸಮುದಾಯದವರು ತಯಾರಿಸುತ್ತಿದ್ದರು. ನಂತರ ಎಣ್ಣೆ ತುಪ್ಪಗಳನ್ನು ತುಂಬಲು ಉಪಯೋಗಿಸುತ್ತಿದ್ದ ಸಿದ್ದಲಿಕೆ ಬುದ್ದಲಿಕೆಗಳೆಂಬ ಚರ್ಮದ ಚೀಲಗಳನ್ನು ಉಪಯೋಗಿಸುತ್ತಿದ್ದರು. ಏಕೆಂದರೆ ಮಾದಿಗರು ಬೇರೆ ಬೇರೆ ಉಪಕಸಬುಗಳನ್ನು ಮಾಡಿಕೊಂಡು ಜೀವನ ಸಾಗಿಸುತ್ತಿದ್ದರು. ಇದರಿಂದ ಸಾಮಾಜಿಕ ಅಥವಾ ಸಮಾಜ ಸುಧಾರಣೆಯಿಂದ ನೋಡಿಕೊಂಡು ಹೋಗುತ್ತಿದ್ದರು. ಆದರೆ ವಂಶಪಾರಂಪರ್ಯದಿಂದ ಈ ವೃತ್ತಿಯನ್ನು ಮಾದಿಗರು ಮಾಡುತ್ತಿರುವುದು ಗಮನಾರ್ಹವಾಗಿದೆ. ಆದರೆ ಹೊಲೆಯರು ಎಂದೂ ಚರ್ಮದ ಕೆಲಸವನ್ನು ಮಾಡಿದವರಲ್ಲ ಅಂತಹ ನಿದರ್ಶನಗಳೂ ಕೂಡ ಎಲ್ಲಿಯೂ ಸಿಗುವುದಿಲ್ಲ. ಆದ್ದರಿಂದ ಬಹುಶಃ ಅಂಬಿಗರ ಚೌಡಯ್ಯ ಹೊಲೆಯ ಎಂಬ ಖ್ಯಾತಿಗೆ ಪಾತ್ರರಾಗಿರಬೇಕು ಎಂದು ತಿಳಿದು ಬರುತ್ತದೆ.

ಇತ್ತೀಚಿಗೆ ಆಧುನಿಕ ಮನೋರಂಜನಾ ಮಾಧ್ಯಮವಾದ ಸಿನಿಮಾಗಳ ಪ್ರಭಾವದಿಂದ ಜನಪ್ರಿಯತೆ ಕುಗ್ಗುತ್ತಾ ಬಂದಿದ್ದರಿಂದ ಮಾದಿಗರು ಬೇರೆ ಬೇರೆ ಕಸುಬುಗಳಿಗೆ ಹೋಗಿದ್ದಾರೆ. ಅನೇಕರು ಕೃಷಿ ಕೂಲಿಗಳಾಗಿದ್ದಾರೆ. ಕೆಲವರು ಹಳ್ಳಿಗಳಲ್ಲಿ ಬಯಲಾಟ ಕಲಿಸುವ ಮೇಷ್ಟ್ರುಗಳಾಗಿದ್ದಾರೆ. ನಂತರ ದನಗಳನ್ನು ಕಾಯುವರು ಆಗಿದ್ದಾರೆ, ಅನಕ್ಷರಸ್ಥರೂ ಆಗಿದ್ದಾರೆ. ತಬಲ ಮಾಡುವುದು, ಹಾರ್ಮೋನಿಯಂ ರಿಪೇರಿ ಮಾಡುವ ಕೆಲಸವನ್ನು ಇವರು ಮಾಡುತ್ತಾರೆ. ಇದರಿಂದ ಜೀವನವನ್ನು ಸಾಗಿಸುತ್ತಾರೆ.

ಒಂದು ಕಾಲಕ್ಕೆ ಮಾದಿಗರ ಆಚರಣೆಯಲ್ಲಿದ್ದ ಕಲಾನೈಪುಣ್ಯವನ್ನೇ ರಂಗಕ್ಷೇತ್ರಕ್ಕೂ ವಿಸ್ತರಿಸಿಕೊಂಡು ಆ ಮೂಲಕ ನೂರಾರು ವರ್ಷಗಳ ಕಾಲ ಜನಪದರ ಕಲ್ಪನಾ ಸಾಮ್ರಾಜ್ಯವನ್ನು ಆಳಿದ ಕಲಾಪಟುಗಳು ಇಂದು ಜೀವನ ನಿರ್ವಹಣೆಗೆ ಉಳಿದ ಗ್ರಾಮೀಣ ಬಡಜನರಂತೆಯೇ ಕಾಣಿಸುತ್ತಾರೆ. ಮಾದಿಗರಲ್ಲಿಯೇ ತಾವು ಶ್ರೇಷ್ಠರೆಂದು ಹೇಳುವ ಅದಿಜಾಂಬವರ ಪ್ರಮುಖ ವೃತ್ತಿ ಚರ್ಮವನ್ನು ಹದಮಾಡುವುದು. ಸತ್ತ ಪ್ರಾಣಿಯ ಚರ್ಮವನ್ನು ಸುಲಿಯುವುದು ಅದನ್ನು ಹದಗೊಳಸಿವುದು, ಅದರಿಂದ ಹಗ್ಗ, ಮಿಣಿ ಜತ್ತಿಗೆ ಮುಂತಾದ ಸಾಮಗ್ರಿಗಳನ್ನು ತಾವು ಸಿದ್ದಪಡಿಸಿ ರೈತರಿಗೆ ಕೊಟ್ಟು ಆಯಾ ಪಡೆಯುವುದಾಗಿದೆ ಎಂದು ಹೇಳುತ್ತಾರೆ.

ಗೌಡನ ಮನೆಯಲ್ಲಿ ಏನಾದರೂ ದನಕುರಿಗಳು ಸತ್ತರೆ, ಗೌಡನ ಒಕ್ಕಲಾದ ಮಾದಿಗರು ಆ ದನ ಕರುಗಳನ್ನು ಊರ ಹೊರಗೆ ತೆಗೆದುಕೊಂಡು ಹೋಗಿ ಅದರ ಚರ್ಮ ಬಿಡಿಸಿ, ಆ ಚರ್ಮದಿಂದ ಚಪ್ಪಲಿಗಳನ್ನು ಹಾಗೂ ರೈತರಿಗೆ ಒಕ್ಕಲುತನಕ್ಕೆ ಅವಶ್ಯಕವಾಗಿರುವ ಉಪಕರಣಗಳನ್ನು ಮಾಡುವುದರಲ್ಲಿ ಮಾದಿಗರು ನಿಪುಣರು. ನಂತರ ಎಮ್ಮೆಯ ತೊಗಲಿನಿಂದ ಎಕ್ಕಡ (ಚಪ್ಪಲಿ), ಎತ್ತು ಮತ್ತು ಹಸುವಿನ ತೊಗಲಿನಿಂದ ಜತ್ತಿಗೆ ಬಾರು, ಬಾರಕೋಲು, ಗೆಜ್ಜೆಸರ, ಹಂತಿ, ಕಣ್ಣುಗಳನ್ನು ತಯಾರಿಸುತ್ತಿದ್ದರು, ಹಾಗೂ ಕೋಣನ ಚರ್ಮದಿಂದ ಮಟ್ಟ ಮಿಣಿ, ಸಣ್ಣ ಬಾರು ಮುಂತಾದವುಗಳನ್ನು ತಯಾರಿಸುತ್ತಿದ್ದರು. ಈ ಚರ್ಮದಿಂದ ಸ್ವಲ್ಪ ಹಸಿ ಇರುವಾಗಲೇ ಮಾಡಿದರೆ ಹಲಗೆಯನ್ನು ಮಾಡಿ ನಂತರ ಅದನ್ನು ಒಣಗಿಸಿ ನಂತರ ಕಾಯಿಸಿ ಬಡಿದಾಗ ಅದರ ನಾದವು ಝೇಂಕರಿಸುವುದು. ಈ ಉಪಕರಣಗಳನ್ನು ಮಾಡಲಿಕ್ಕೆ ಮಾದಿಗರು ಕೆಲವು ಆಯುಧಗಳನ್ನೆಲ್ಲ ಮಾಡಿಕೊಂಡಿರುತ್ತಾರೆ. ಅವುಗಳೆಂದರೆ ಉಳಿ, ರಂಪಿಗೆ, ಅಡಿಗಲ್ಲು, ಗೂಟ, ಕೊಡತಿ, ಇವು ಸಹಾಯಕ ಸಲಕರಣೆಗಳಾಗಿವೆ. ಹೀಗೆ ಮಾದಿಗರು ಅನೇಕ ರೀತಿಯಿಂದ ಕಸುಬುಗಳನ್ನು ಮಾಡಿಕೊಂಡು ಜೀವನವನ್ನು ಸಾಗಿಸುತ್ತಾರೆ.

'ಮಾದಾರ ಚನ್ನಯ್ಯ ಕೈಯುಳಿ ಕತ್ತಿ ಅಡೆಗುಂಟಕ್ಕೆಡೆಯಾಡಬೇಡ' ಅರಿ ನಿಜಾತ್ಮ ರಾಮನಾಮ, ಎಂಬ ವಚನದಲ್ಲಿ ಮಾದರ ಕಸುಬಿನ ಕೆಲವು ಆಯುಧಗಳ ಉಲ್ಲೇಖ ಬರುತ್ತದೆ.

ಮಾದಿಗರಲ್ಲಿ ಎಲ್ಲರೂ ಚರ್ಮದ ಕೆಲಸವನ್ನೇ ಮಾಡುತ್ತಾರೆ. ಎಂದಲ್ಲ ಕೆಲವರು ಒಕ್ಕಲುತನ, ವ್ಯಾಪಾರ, ಕೂಲಿ ಮುಂತಾದ ಕೆಲಸಗಳಲ್ಲಿ ಮಾದಿಗರು ತೊಡಗಿರುವುದು ಕಂಡುಬರುತ್ತದೆ. ಒಂದೊಂದು ಪಂಗಡದವರು ತಮ್ಮ ತಮ್ಮ ಕಸುಬುಗಳನ್ನು ಚಾಚು ತಪ್ಪದೆ ಕೆಲಸ ಮಾಡುತ್ತಾ ಬಂದಿದ್ದಾರೆ.

೩.೯. ರಕ್ತ ಸಂಬಂಧ

ಕಣ್ಣರಿಯದಿದ್ದರೂ ಕರಳರಿಯುತ್ತದೆ ಎಂಬ ಜಾನಪದರ ಮಾತಿನಂತೆ ಮಾದಿಗರ ಸಮುದಾಯದಲ್ಲಿ ಕರಳುಬಳ್ಳಿ ಅಥವಾ ರಕ್ತ ಸಂಬಂಧಗಳಿಗೆ ಬಹಳ ಪ್ರಾಮುಖ್ಯತೆ ಇದೆ. ಈ ಸಮುದಾಯದಲ್ಲಿ ಪಿತೃಪ್ರಧಾನ ಕುಟುಂಬಗಳು ಕಂಡುಬರುವುದರಿಂದ ತಂದೆಯ ಮೂಲಕವೇ ರಕ್ತ ಸಂಬಂಧವನ್ನು ಗುರುತಿಸಿಕೊಳ್ಳುತ್ತಾರೆ. ತಂದೆಯ ನಂತರ ಗಂಡು ಸಂತತಿಯ ಮೂಲಕ ಕುಟುಂಬ, ವಂಶ, ಕುಲ, ಗೋತ್ರ, ಮನೆದೇವರು, ವಂಶಾವಳಿ, ಏಕರಕ್ತ ಸಂಬಂಧ ವಿವಾಹ ಮೊದಲಾದ ಸಾಮಾಜಿಕ ಅಂಶಗಳು ರಕ್ತಸಂಬಂಧದ ಆಧಾರದ ಮೇಲೆಯೇ ರಚಿತವಾಗಿರುತ್ತವೆ. ತಂದೆ, ತಾಯಿ, ಅಕ್ಕ, ತಂಗಿ, ಅಣ್ಣ ತಮ್ಮ, ಚಿಕ್ಕಪ್ಪ ದೊಡ್ಡಪ್ಪ, ಅತ್ತೆ, ಮಾವ ಮುಂತಾದವರ ಸುತ್ತ ಕುಟುಂಬ ಮತ್ತು ರಕ್ತ ಸಂಬಂಧ ಕೇಂದ್ರೀಕೃತವಾಗಿರುತ್ತದೆ. ನಾವೆಲ್ಲರೂ ಒಂದೇ ರಕ್ತ ಸಂಬಂಧಿಗಳು, ಒಡನಾಡಿಗಳು, ಕುಟುಂಬದವರು, ವಂಶದವರು, ನೆಂಟರು ಅಣ್ಣತಮ್ಮಗಳು, ಎಂಬ ಅಭಿಮಾನ ಮಾದಿಗ ಸಮುದಾಯದಂಥ ಬುಡಕಟ್ಟು ಮೂಲದ ಸಮೂಹಗಳಲ್ಲಿ ಪ್ರಧಾನವಾಗಿರುತ್ತದೆ.

ಒಂದು ಸಮೂಹ ಅಥವಾ ಒಂದು ಕೇರಿಯ ಸದಸ್ಯರೆಲ್ಲರೂ ರಕ್ತಸಂಬಂಧಿಗಳೇ ಆಗಿರುವುದರಿಂದ ಅವರಲ್ಲಿ ಪ್ರೀತಿ ವಿಶ್ವಾಸಗಳಿಂದ ಕೂಡಿದ ಸಹಕಾರ ಮತ್ತು ಸಂಬಂಧಗಳು ಬೆಳೆದಿರುತ್ತವೆ. ಬಹಳ ಹಿಂದೆ ಗ್ರಾಮಾಂತರ ಪ್ರದೇಶದ ಅವಿಭಕ್ತ ಕುಟುಂಬಗಳಲ್ಲಿ ಒಗ್ಗಟ್ಟು ಮತ್ತು ಐಕ್ಯತೆ ಮೂಡಲು ತಕ್ಕ ಸಂಬಂಧವೇ ಮುಖ್ಯಕಾರಣವಾಗಿರುತ್ತದೆ. ವೈವಾಹಿಕ ಜೀವನದ ಸಂಬಂಧಗಳನ್ನು ಬೆಳೆಸುವಾಗ ಒಳಪಂಗಡಗಳ ವಿವಾಹ ಅಥವಾ ಒಳಬಾಂಧವ್ಯ ವಿವಾಹ ಪದ್ಧತಿಗೆ ಹೆಚ್ಚು ಮಹತ್ವ ಕೊಡುತ್ತಾರೆ. ಅಂತರ್ಜಾತಿಯ ವಿವಾಹಕ್ಕೆ ಇವರಲ್ಲಿ ಅವಕಾಶವಿರಲಿಲ್ಲ. ಹತ್ತಿರದ ರಕ್ತ ಸಂಬಂಧದಲ್ಲಿ 'ತೆರ' ಕೊಟ್ಟು ಹೆಣ್ಣು ತರುತ್ತಾರೆ. ಆದರೂ ಬಾಲ್ಯವಿವಾಹ ಪದ್ಧತಿ ಇವರಲ್ಲಿ ಕಂಡುಬರುವುದಿಲ್ಲ. ಏಕಪತ್ನಿತ್ವ ಬಹುಪತ್ನಿತ್ವ ವಿವಾಹ ಪದ್ಧತಿ ಆಚರಣೆಯಲ್ಲಿದ್ದು, ಏಕ ಪತ್ನಿತ್ವಕ್ಕೆ ಹೆಚ್ಚು ಮಹತ್ವ ಕೊಡುತ್ತಾರೆ. ತಂದೆಯಷ್ಟೇ ಸೋದರತ್ತೆಗೆ ಗೌರವ ಕೊಡುವ ಸಂಪ್ರದಾಯ ಬೆಳೆದುಕೊಂಡು ಬಂದಿದೆ. ತಾಯಿ ಸತ್ತ ತಬ್ಬಲಿ ಮಕ್ಕಳಿಗೆ ಸೋದರತ್ತೆಯೇ ತಾಯಿ ಎಂಬ ಮಾತು ರಕ್ತ ಸಂಬಂಧದ ಪ್ರಾಧಾನ್ಯತೆಯನ್ನು ತೋರುತ್ತದೆ. 'ಕರಳು ಚುರುಕ್' ಎಂದಾಗ ಮಾತ್ರ ಕಣ್ಣಲ್ಲಿ ನೀರು ಬರುತ್ತವೆ ಎಂಬ ಮಾತು ವೈಜ್ಞಾನಿಕ ಸತ್ಯ. ಇದು ರಕ್ತ ಸಂಬಂಧದ ಮಹತ್ವವನ್ನು ತಿಳಿಯುತ್ತದೆ. ಕುಲ, ಗೋತ್ರ, ಬೇರೆಯಾದರೂ ಮೂಲತಃ ಒಂದೇ ಕುಟುಂಬದ ರಕ್ತ ಸಂಬಂಧಗಳಂತೆ ಬಾಳಿ ಬದುಕುವ ಸಂಸ್ಕೃತಿ ಮಾದಿಗ ಸಮುದಾಯದಲ್ಲಿ ಕಾಣಬಹುದು.

ಪ್ರಾಚೀನ ಭಾರತೀಯ ಸಮಾಜದಲ್ಲಿ ಬಾಲ್ಯವಿವಾಹ ಪದ್ಧತಿ ಬಂದಿದ್ದು ಈ ರಕ್ತ ಸಂಬಂಧವು ಒಂದು ಕಾರಣವಾಗಿದೆ. ಅಪ್ಪ ಹಾಕಿದ ಮರಕ್ಕೆ ನೇಣು ಹಾಕಿಕೊಳ್ಳುವಂತೆ ಹಿರಿಯ ಯಜಮಾನರು ಸಾಯುವುದರೊಳಗೆ ಮಕ್ಕಳ ಮದುವೆ ಮಾಡಬೇಕೆಂಬತತ್ವವೂ ಕೂಡ ರಕ್ತ ಸಂಬಂಧದ ಮಹತ್ವವನ್ನು ತೋರಿಸುತ್ತದೆ. ಮಾವನ ಹಕ್ಕುಗಳು, ಸ್ಥಾನಮಾನಗಳು ಮತ್ತು ಕರ್ತವ್ಯಗಳು ರಕ್ತ ಸಂಬಂಧದ ಮಹತ್ವದ

ಸಂಬಂಧವನ್ನು ತೋರಿಸುತ್ತದೆ. ಮಾನವನ ಹಕ್ಕುಗಳು ಸ್ಥಾನಮಾನಗಳು ಮತ್ತು ಕರ್ತವ್ಯಗಳು ರಕ್ತ ಸಂಬಂಧದಿಂದ ನಿರ್ಧರಿಸಲ್ಪಡುತ್ತದೆ. ಹುಟ್ಟು, ಸಾವು ಮತ್ತು ಬದುಕು, ಈ ಮೂರರಲ್ಲಿಯೂ ರಕ್ತ ಸಂಬಂಧದ ಭಾವನೆಗಳು ಪ್ರಧಾನವಾಗಿರುತ್ತವೆ. ಮಕ್ಕಳ ನಾಮಕರಣದಲ್ಲಿ ಸೋದರತ್ತೆ ತೊಟ್ಟಿಲು ಪೂಜೆ ಮಾಡುವುದು, ಸೋದರಮಾವ ಗುಗ್ಗರಿ ಕಚ್ಚಿ ಮಗುವಿಗೆ ಹೆಸರಿಡುವುದು, ಹೆಣ್ಣು ಮೈನೆರೆತಾಗ ಸೋದರ ಮಾವನು ನೀರನ್ನು ಹಾಕಿ, ಅವಳನ್ನು ಒಳಗೆ ಕರೆತರುತ್ತಾರೆ. ತದನಂತರ ತವರು ಮನೆಯವರು ಉಡುಗೊರೆ ತರುವುದು, ವಿವಾಹದಲ್ಲಿ ಸೋದರಮಾವನಿಗೆ ಪ್ರಥಮ ಆಧ್ಯತೆ ಕೊಡುವುದು, ಕುಟುಂಬದಲ್ಲಿ ಯಾರಾದರೂ ಮರಣಹೊಂದಿದಾಗ ನೆಂಟರು ಹೊಸ ಬಟ್ಟೆ ತಂದು ಹಾಕುವುದು, ಶುಭಕಾರ್ಯದಲ್ಲಿ ಮುಖ್ಯಸ್ಥರಿಗೆ ಮಹತ್ವಕೊಡುವುದು, ಹಬ್ಬ ಮತ್ತು ಜಾತ್ರೆಗಳಲ್ಲಿ ಎಲ್ಲರೂ ಒಟ್ಟಿಗೆ ಸೇರುವುದು, ಕಷ್ಟ ಸುಖಗಳಲ್ಲಿ ಭಾಗಿಯಾಗುವುದು ಮೊದಲಾದ ಅಂಶಗಳು ಕೂಡ ಈ ಜನಾಂಗದ ರಕ್ತ ಸಂಬಂಧದ ಮಹತ್ವವನ್ನು ತೋರುತ್ತವೆ.

ವೈಯಕ್ತಿಕವಾಗಿ ಎಷ್ಟೇ ದ್ವೇಷ ಅಸೂಯೆಗಳಿದ್ದರೂ ಸಾವು ನೋವಿನಲ್ಲಿ ಹತ್ತಿರ ಬರುವ ವ್ಯಕ್ತಿಗಳೆಂದರೆ ರಕ್ತ ಸಂಬಂಧಿಗಳು. ಈ ರಕ್ತ ಸಂಬಂಧದ ಆಧಾರದ ಮೇಲೆ ಕುಟುಂಬದ ಅಂತರಿಕ ಮತ್ತು ಬಾಹ್ಯ ಸಂಬಂಧಗಳು ಬೆಳೆಯಲು ಸಾಧ್ಯ. ಮಾನವನ ಅಭಿಲಾಷೆಗಳಾದ ಕುಟುಂಬದ ಸ್ಥಾಪನೆಗೆ ಮತ್ತು ವಂಶಾವಳಿಯನ್ನು ಮುಂದುವರಿಸಿಕೊಂಡು ಹೋಗಲು ರಕ್ತ ಸಂಬಂಧವು ಸಹಕಾರಿಯಾಗಿದೆ. ಇತರ ಸಾಮಾಜಿಕ ಸಂಬಂಧಗಳಂತೆ ರಕ್ತ ಸಂಬಂಧವೂ ಕೂಡ ಸಮುದಾಯದಲ್ಲೇ ಸೇರುತ್ತದೆ. ಆದ್ದರಿಂದಲೇ ಈ ಮಾದಿಗ ಸಮುದಾಯದಲ್ಲಿ ರಕ್ತ ಸಂಬಂಧದ ಪಾತ್ರ ಅಪಾರವಾಗಿದೆ.

೩.೧೧ ಕುಟುಂಬ ಪದ್ಧತಿ

ಕುಟುಂಬವು ಒಂದು ಸಾರ್ವತ್ರಿಕವಾದ ಸಂಸ್ಥೆಯಾಗಿದೆ. ಅದು ಅತ್ಯಂತ ಸರಳವಾದ ಹಾಗೂ ಸೂಕ್ಷ್ಮವಾದ ಸಮಾಜವಿದ್ದಂತೆ ಕುಟುಂಬವಿಲ್ಲದೇ ಸಮಾಜವಿಲ್ಲ. ಅದು ಮಾನವನ ಸಾಮಾಜಿಕ ಜೀವನದ ತಳಹದಿಯಾಗಿದೆ. ಕುಟುಂಬವು ರಾಜ್ಯಕ್ಕಿಂತಲೂ ಪವಿತ್ರವಾದದ್ದು ಎಂದು ಪೋಪ್ ಫಯಾಸನ್ ಹೇಳಿದ್ದಾನೆ. ನಮ್ಮ ಸಾಮಾಜಿಕ ಜೀವನಕ್ಕೆ ಒಂದು ನೆಲೆಯನ್ನು ಮತ್ತು ಸ್ಥಿರತೆಯನ್ನು ಕೊಡುವುದು ಆಗಿರುತ್ತದೆ. ಮಾನವನ ವ್ಯಕ್ತಿತ್ವ ಬೆಳೆಸುವ ಮೊದಲ ಸಂಸ್ಥೆ ಎಂದರೆ ಕುಟುಂಬ ಎಂದು ಹೇಳಬಹುದು. ಮಾನವ ಶಿಶುವಿನಷ್ಟು ಅಸಾಹಯಕ ಜೀವಿ ಬೇರೊಂದಿಲ್ಲ. ಅದನ್ನು ರಕ್ಷಿಸಿ, ಪೋಷಿಸಿ, ಅಭಿವೃದ್ಧಿ ಪಡಿಸುವ ಹಿರಿಯ ಜವಾಬ್ದಾರಿ ಕುಟುಂಬದ ಮೇಲೆ ಬಿದ್ದಿದೆ. ತಾಯಿ ಮಕ್ಕಳ ನಡುವಣ ಜೈವಿಕ ಸಂಬಂಧ ಕುಟುಂಬ ರಚನೆಗೆ ಪ್ರೇರಣೆ ಎನ್ನಲಾಗಿದೆ. ಮಗುವಿನ ಸಾಮಾಜೀಕರಣ ಕ್ರಿಯೆಯಲ್ಲಿ ತಾಯಿ ಪ್ರಧಾನ ಪಾತ್ರ ವಹಿಸುತ್ತಾಳೆ. ಅಲ್ಲದೆ ತಂದೆ ತಾಯಿಯರು ತಮ್ಮ ಮಕ್ಕಳಿಗೆ ಅಧಿಕಾರಯುತವಾಗಿಯೂ ಪ್ರೀತಿ ವಿಶ್ವಾಸಗಳಿಂದಲೂ ಸಾಮಾಜೀಕರಣಕ್ಕೆ ಒಳಪಡಿಸುತ್ತಾರೆ. ಸಾಮಾಜೀಕರಣವು ತಲೆಮಾರಿನಿಂದ

ತಲೆಮಾರುಗಳಿಗೆ ಸಾಗಿ ಬರುವ ಕ್ರಿಯೆಯಾಗಿದೆ. ಹಿರಿಯರನ್ನು ಗೌರವಿಸುವುದು, ರೂಢಿ ಸಂಪ್ರದಾಯ ಬದ್ಧತೆ, ಆಚಾರ ವಿಚಾರಗಳನ್ನು ಪಾಲಿಸುವುದು, ನೈತಿಕ ನಿಯಮಗಳನ್ನು ಪರಿಚಯ ಮಾಡಿಕೊಳ್ಳುವುದು ಮುಂತಾದ ಕ್ರಿಯೆಗಳನ್ನು ಕುಟುಂಬ ಅತ್ಯಂತ ಸರಳವಾಗಿ ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತದೆ.

ಮಾನವನ ಬಹುಮುಖ್ಯ ಮೂರು ಅವಶ್ಯಕತೆಗಳಾದ ಲೈಂಗಿಕ ತೃಪ್ತಿ, ಸಂತಾನಾಭಿಲಾಷೆ ಆರ್ಥಿಕ ಬಯಕೆಗಳನ್ನು ನಿರ್ಧಿಷ್ಟ ರೀತಿಯಲ್ಲಿ ಪೂರೈಸಿಕೊಳ್ಳಲು ಮತ್ತು ನಿಯಂತ್ರಿಸಿಕೊಳ್ಳಲು ಕುಟುಂಬವು ಸಹಾಯ ಮಾಡುತ್ತದೆ. ಕುಟುಂಬವು ಚಿಕ್ಕದಾದ ಸಾಮಾಜಿಕ ಘಟಕವಾಗಿದ್ದು ತಂದೆ. ತಾಯಿ ಮತ್ತು ಮಕ್ಕಳಿಂದ ಕೇಂದ್ರೀಕೃತವಾಗಿರುತ್ತದೆ. ಮಗುವಿನ ಜನನಕ್ಕೆ ಇದು ಪ್ರಥಮ ಸಾಮಾಜಿಕ ಪರಿಸರವಾಗುತ್ತದೆ. ಅನೇಕ ಸಮಾಜಶಾಸ್ತ್ರಜ್ಞರು ಕುಟುಂಬದ ಬಗ್ಗೆ ಅನೇಕ ವ್ಯಾಖ್ಯಾನಗಳನ್ನು ಕೊಟ್ಟಿದ್ದಾರೆ. ಸಮ್ನರ್ ಮತ್ತು ಕೆಲ್ಲರ್‌ರವರ ಪ್ರಕಾರ, ರಕ್ತ ಸಂಬಂಧಗಳಿಂದ ಕೂಡಿದ ಮತ್ತು ಕನಿಷ್ಟ ಎರಡು ತಲೆಮಾರುಗಳಿಂದ ಒಳಗೊಂಡಿರುವ ಅತೀ ಸೂಕ್ಷ ಸಾಮಾಜಿಕ ಸಂಘಟನೆಯೇ ಕುಟುಂಬ ಎಂದಿದ್ದಾರೆ. ಈಲಿಯಟ್‌ರವರ ಪ್ರಕಾರ ಕುಟುಂಬವು ಜೈವಿಕ ಘಟಕವಾಗಿದ್ದು ಗಂಡ, ಹೆಂಡತಿ, ಮತ್ತು ಮಕ್ಕಳನ್ನು ಒಳಗೊಂಡಿರುತ್ತದೆ ಎಂದಿದ್ದಾರೆ. ಅದ್ದರಿಂದ ಈ ಕುಟುಂಬವು ಸಮಾಜದ ಮೂಲಭೂತ ಘಟಕವಾಗಿರುತ್ತದೆ. ಮಾನವರೆಲ್ಲರೂ ಕುಟುಂಬ ವರ್ಗಕ್ಕೆ ಸೇರಿದವರಾಗಿರುತ್ತಾರೆ. ಇದು ಜೈವಿಕ ಘಟಕವಾಗಿದ್ದು ಸಂಸ್ಥಾನರೂಪದಲ್ಲಿ ಗಂಡ ಹೆಂಡತಿಯರಲ್ಲಿ ಲೈಂಗಿಕ ಬಾಂಧವ್ಯವನ್ನು ರೂಪಿಸುತ್ತದೆ. ಇದು ವಿಶ್ವವ್ಯಾಪಕತ್ವದ ಗುಣಲಕ್ಷಣಗಳನ್ನು ಹೊಂದಿ ಸಮಾಜದ ಎಲ್ಲಾ ಪ್ರಕಾರಗಳಲ್ಲಿ ಸಂಸ್ಥೆಯಾಗಿ ಕಾರ್ಯ ನಿರ್ವಹಿಸುತ್ತದೆ.

ಮಾದಿಗ ಸಮುದಾಯದಲ್ಲಿ ಪಿತೃಪ್ರಧಾನ ಅವಿಭಕ್ತ ಕುಟುಂಬಗಳು ಹೆಚ್ಚಾಗಿ ಕಂಡು ಬರುತ್ತವೆ. ಕುಟುಂಬದ ಪ್ರತಿಯೊಂದು ಆಗುಹೋಗುಗಳನ್ನು ಹೆಚ್ಚಾಗಿ ಪುರುಷರೇ ನೋಡಿಕೊಳ್ಳುತ್ತಾರೆ. ತಂದೆಯ ನಂತರ ಕುಟುಂಬದ ಹಿರಿಯಮಗ ಮನೆಯ ಯಜಮಾನನಾಗುತ್ತಾನೆ. ಉಳಿದ ಕುಟುಂಬದ ಸದಸ್ಯರೆಲ್ಲರೂ ಈತನಿಗೆ ಅಧೀನರಾಗಿರುತ್ತಾರೆ. ಕುಟುಂಬದ ಸಂಪೂರ್ಣ ಆಡಳಿತ ಈತನ ಮಾರ್ಗದರ್ಶನದಲ್ಲಿಯೇ ಮುಂದುವರೆಯುತ್ತದೆ. ಕುಟುಂಬದ ಮುಖ್ಯಸ್ಥನಿಗೆ 'ಯಜಮಾನ' ಎಂದು ಕರೆಯಲ್ಪಡುವ ಅವನ ಕುಟುಂಬದ ಸಮಸ್ತ ಸದಸ್ಯರ ಯೋಗಕ್ಷೇಮಕ್ಕೆ ಜವಾಬ್ದಾರನಾಗಿರುತ್ತಾನೆ. ಕುಟುಂಬದ ಆಸ್ತಿ ಸಾಮೂಹಿಕವಾಗಿರುತ್ತದೆ. ತಂದೆ ತಾಯಿ ಮರಣ ಹೊಂದಿದ ಮೇಲೆ ಅಣ್ಣ ತಮ್ಮಗಳಲ್ಲಿ ಹೊಂದಾಣಿಕೆ ಇಲ್ಲದಿದ್ದಾಗ ಆಸ್ತಿಯನ್ನು ಪಾಲುಮಾಡಿಕೊಳ್ಳುತ್ತಾರೆ. ಆದರೆ ಒಡಹುಟ್ಟಿದ ಅಣನ ತಮ್ಮಗಳಲ್ಲಿ ಪರಸ್ಪರ ಹೊಂದಾಣಿಕೆ ಕಂಡುಬರುತ್ತದೆ.

ಮಾದಿಗ ಸಮುದಾಯದಲ್ಲಿ ಹತ್ತಿರದ ರಕ್ತ ಸಂಬಂಧಗಳಲ್ಲಿ ವಿವಾಹ ಏರ್ಪಡಿಸುತ್ತಾರೆ. ಏಕಪತ್ನಿತ್ವ ಮತ್ತು ಬಹುಪತ್ನಿತ್ವ ಪದ್ಧತಿಗೆ ಹೆಚ್ಚು ಮಹತ್ವ ಕೊಡುತ್ತಾರೆ. ಕನ್ಯಾಶುಲ್ಕ ಅಥವಾ ತೆರ ಕೊಟ್ಟು ಹೆಣ್ಣು ತರುವ ಪದ್ಧತಿಗೆ ಹೆಚ್ಚು ಮಹತ್ವ ಕೊಡುತ್ತಾರೆ. ವರದಕ್ಷಿಣೆ ಪದ್ಧತಿ ಇವರಲ್ಲಿ. ಕೆಲವು ಪ್ರದೇಶಗಳಲ್ಲಿ

ಕಂಡು ಬರುತ್ತದೆ. ವಿವಾಹದ ನಂತರ ಹೆಣ್ಣು ತನ್ನ ಗಂಡನ ಮನೆಯಲ್ಲಿ ವಾಸಿಸುತ್ತಾಳೆ. ಅಂತರ್ಜಾತಿ ವಿವಾಹಕ್ಕೆ ಇವರ ಕುಟುಂಬಗಳಲ್ಲಿ ಅವಕಾಶವಿಲ್ಲ. ವಿಧವಾ ವಿವಾಹ ಅಥವಾ ಕೂಡಿಕೆ ವಿವಾಹ ಪದ್ಧತಿಗಳು ಈ ಜನಾಂಗದಲ್ಲಿ ಕಂಡು ಬರುವುದಿಲ್ಲ. ಬೇರೆ ಬೇರೆ ಕುಲದಿಂದ ಬಂದಿದ್ದ ಅಣ್ಣತಮ್ಮಂದಿರ ಹೆಂಡತಿಯರು ಅಕ್ಕತಂಗಿಯರಂತೆ ಇರುವುದನ್ನು ಇವರ ಕುಟುಂಬಗಳಲ್ಲಿ ಕಾಣಬಹುದು. ಯಾವುದೇ ಕಾರಣಕ್ಕೂ ಮೂರು ಕುಲಗಳಿಂದ ಹೆಣ್ಣು ತರುವುದಾಗಲಿ ಅಥವಾ ಕೊಡುವುದಾಗಲಿ ಮಾಡುವುದಿಲ್ಲ. ಹಿರಿಯ ಸೊಸೆಗೆ ಮೊದಲ ಆದ್ಯತೆ ಕೊಡುತ್ತಾರೆ. ಬಹು ಹಿಂದೆ ಬಾಲ್ಯ ವಿವಾಹ ಹಾಗೂ ಸತಿಸಹಗಮನ ಪದ್ಧತಿ ಅಸ್ತಿತ್ವದಲ್ಲಿತ್ತೆಂದು ತಿಳಿದು ಬರುತ್ತದೆ. ಆದರೆ ಪ್ರಸ್ತುತ ಈ ಅನಿಷ್ಟ ಪದ್ಧತಿಗಳು ಇವರ ಕುಟುಂಬದಲ್ಲಿ ಕಂಡುಬರುವುದಿಲ್ಲ. ಕೂಲಿ ಕಾರ್ಮಿಕರಾಗಿ ದುಡಿಯುವ ಕೇರಿಗಳಲ್ಲಿ ಪಶುಪಾಲನೆ ಮತ್ತು ಗಂಡು ಹೆಣ್ಣು ಎಂಬ ಬೇಧವಿಲ್ಲದೆ ಕೂಡಿ ದುಡಿಯುತ್ತಾರೆ. ಮನೆ ಕೆಲಸದ ಜೊತೆಗೆ ಹೆಣ್ಣು ಗಂಡಿಗಿಂತ ಹೆಚ್ಚು ಶ್ರಮ ಪಡುತ್ತಾಳೆ. ಕಷ್ಟ ಸುಖಗಳಲ್ಲಿ ಕುಟುಂಬದ ಎಲ್ಲಾ ಸದಸ್ಯರು ಭಾಗಿಯಾಗುತ್ತಾರೆ. ಪರಸ್ಪರ ಒಗ್ಗಟ್ಟು, ರಕ್ಷಣೆ, ಐಕ್ಯತೆ, ನಾವು ನಮ್ಮವರು ಎಂಬ ಭಾವನೆಗಳು ಪ್ರಧಾನವಾಗಿ ಕಂಡು ಬರುತ್ತವೆ. ರಕ್ತ ಸಂಬಂಧಕ್ಕೆ ವಿಶೇಷ ಮಹತ್ವ ಕೊಡುತ್ತಾರೆ. ಕೆಲವೊಂದು ಪ್ರದೇಶದ ಮಾದಿಗ ಸಮುದಾಯದ ಕುಟುಂಬಗಳಲ್ಲಿ ೧೦ ರಿಂದ ೧೫ ಜನಸಂಖ್ಯೆ ಇರುವ ಅವಿಭಕ್ತ ಕುಟುಂಬಗಳೂ ಕಂಡುಬರುತ್ತವೆ. ಕುಟುಂಬಗಳಲ್ಲಿ ಮಕ್ಕಳ ಸಂಖ್ಯೆ ಅಧಿಕವಾಗಿದೆ. ಕೆಲವೊಂದು ಕುಟುಂಬಗಳಲ್ಲಿ ಹದಿನಾಲ್ಕು ಮಕ್ಕಳನ್ನು ಹೆತ್ತ ತಾಯಂದಿರು ಕಂಡು ಬರುತ್ತಾರೆ. ಸಾಕ್ಷರತೆ ಪ್ರಮಾಣ ಅತ್ಯಂತ ಕಡಿಮೆ ಪ್ರಮಾಣದಲ್ಲಿದೆ.

ಕುಟುಂಬದ ಸದಸ್ಯರಲ್ಲಿ ಶ್ರಮ ವಿಭಜನೆಯು ಲಿಂಗ, ವಯಸ್ಸು ಮತ್ತು ಸದಸ್ಯರ ಅಂತಸ್ತಿಗೆ ತಕ್ಕಂತೆ ಹಂಚಿಕೊಂಡಿರುತ್ತಾರೆ. ಕಿರಿಯ ಸದಸ್ಯರುಹಿರಿಯರ ಮಾರ್ಗದರ್ಶನದಂತೆ ನಡೆದುಕೊಳ್ಳುತ್ತಾರೆ. ಪ್ರತಿಯೊಂದು ಕುಟುಂಬಗಳಲ್ಲಿ ಅವರದೇ ಆದಂತಹ ರೂಢಿ ಸಂಪ್ರದಾಯಗಳು, ನಂಬಿಕೆ, ಆಚರಣೆಗಳು, ವಿಧಿ ವಿಧಾನಗಳು ಕಂಡು ಬರುತ್ತವೆ. ಯಾವುದೇ ಧಾರ್ಮಿಕ ಕಾರ್ಯಗಳಲ್ಲಿ ಪೂಜಾರಿ ಮತ್ತು ದಾಸಯ್ಯಗಳಿಗೆ ವಿಶೇಷ ಮಹತ್ವ ಕೊಡುತ್ತಾರೆ. ಅತ್ಯಂತ ಸರಳ ಜೀವಗಳಾದ ಈ ಎರಡು ಸಮುದಾಯಗಳಿಗೆ ದೇವರೆಂದರೆ ಮಹಾಪ್ರಾಣ. ದೇವರು ಮತ್ತು ಧರ್ಮದ ವಿಚಾರವಾಗಿ ಕಟ್ಟು ನಿಟ್ಟಾದ ಸಂಪ್ರದಾಯ ಮತ್ತು ನಂಬಿಕೆಗಳು ಕಂಡು ಬರುತ್ತವೆ. ಹಬ್ಬ ಜಾತ್ರೆ, ಉತ್ಸವಗಳಲ್ಲಿ ಸಾಮೂಹಿಕವಾಗಿ ಪಾಲ್ಗೊಳ್ಳುತ್ತಾರೆ. 'ಕರಿಕಂಬಳಿಗೆ' ಬಹಳ ಮಹತ್ವ ಕೊಟ್ಟು ಶುಭಕಾರ್ಯದಲ್ಲಿ ಅದನ್ನು ವಿಶೇಷವಾಗಿ ಬಳಸುತ್ತಾರೆ. ಪ್ರತಿಯೊಂದು ಮನೆಯಲ್ಲಿ ಒಂದಾದರೂ 'ಕರಿಕಂಬಳಿ' ಇದ್ದೇ ಇರುತ್ತದೆ. ಮೂಲತಃ ಮಾಂಸಹಾರಿ ಸಮುದಾಯಗಳಾದರೂ ಕೋಳಿ, ಮತ್ತು ದನದ ಮಾಂಸವನ್ನು ತಿನ್ನುತ್ತಿದ್ದರು. ಈ ಸಮುದಾಯದವರು ಈಚಲು ಕಸಬರಿಕೆಯಿಂದ ಕಸಗುಡಿಸುತ್ತಿದ್ದರು. ನಂತರ ಯಾವುದೇ ಚಾಪೆಯಲ್ಲಾದರೂ ಕುಳಿತು ಕೊಳ್ಳುತ್ತಿದ್ದರು. ಆದರೆ ಮೊದಲಿಗೆ ನೆಲದ ಮೇಲೆ ಮಲಗಿ, ನೆಲದಲ್ಲಿಯೇ ಕುಳಿತುಕೊಂಡು ಮಾತನಾಡುತ್ತಿದ್ದರು.

ಮಾದಿಗ ಸಮುದಾಯಗಳು ಇತ್ತೀಚಿಗೆ ಆರ್ಥಿಕ ಕಾರಣಗಳಿಂದ ಮತ್ತು ಪಾಶ್ಚಾತ್ಯ ನಡೆನುಡಿಗಳ ಅನುಕರಣೆಯಿಂದ ಅವಿಭಕ್ತ ಕುಟುಂಬಗಳು ಒಡೆದು ಹೋಗಿ ವಿಭಕ್ತಿ ಕುಟುಂಬಗಳಾಗಿ ಪರಿವರ್ತನೆಯಾಗುತ್ತಿವೆ. ಕೈಗಾರೀಕರಣ ಮತ್ತು ನಗರೀಕರಣಗಳ ಪ್ರಭಾವದಿಂದಾಗಿ ಕೇರಿಯ ಕುಟುಂಬಗಳ ಜನಸಂಖ್ಯೆ ಕಡಿಮೆಯಾಗುತ್ತಿದೆ. ಬೇಟೆ, ಪಶುಪಾಲನೆ, ಕೃಷಿ ಕ್ಷೇತ್ರದಲ್ಲಿ ಆಸಕ್ತಿ ಕಡಿಮೆಯಾಗುತ್ತಿದೆ. ನಗರ ಪ್ರದೇಶದ ಮಾರುಕಟ್ಟೆಯಿಂದ ಹಾಲು, ತರಕಾರಿ, ಮಾಂಸ, ದವಸ-ಧಾನ್ಯ ಮೊದಲಾದ ಸಾಮಾನಗಳನ್ನು ತಂದು ಕೇರಿಯಲ್ಲಿ ತಿನ್ನುತ್ತಾರೆ. ಸಂಪರ್ಕ ಸಮೂಹ ಮಾಧ್ಯಮಗಳ ಪ್ರಭಾವದಿಂದ ಕರಿಕಂಬಳಿ ಹೋಗಿ ಉಲ್ಲನ್‌ರಗ್ಗು, ಪಂಚೆ, ಶಾಲು, ಗಡಿಯಾರ, ಪ್ಯಾಂಟು, ಷರಟು, ಚೂಡಿದಾರ, ಮತ್ತು ನೈಟಿಗಳು ಕೇರಿಗೆ ಬಂದವು. ಹೀಗೆ ನಾಗರೀಕ ಜನರ ಸಂಪರ್ಕದಿಂದ ಮೂಲ ಬುಡಕಟ್ಟು ಸಂಸ್ಕೃತಿ ಮತ್ತು ಸ್ಮೃತಿಗಳು ಮಾದಿಗರ ಸಮುದಾಯದಲ್ಲಿ ಕಣ್ಮರೆಯಾಗುತ್ತಿವೆ.

೩.೧೧ ನಂಬಿಕೆ, ವಿಧಿ-ನಿಷೇಧಗಳು

ಮಾನವನ ನಡತೆಯನ್ನು ರೂಪಿಸಲು, ನಿಯಂತ್ರಿಸಲು ಸಮಾಜವು ಸ್ಥಾಪಿಸಿರುವ ಕಟ್ಟುಪಾಡುಗಳೇ ವಿಧಿ ನಿಷೇಧಗಳು. ಇವು ಯಾವ ಸಂದರ್ಭದಲ್ಲಿ ಮನುಷ್ಯ ಏನು ಮಾಡಬೇಕು ಮತ್ತು ಏನು ಮಾಡಬಾರದು ಎಂಬುದನ್ನು ಸ್ಪಷ್ಟವಾಗಿ ತಿಳಿಸುತ್ತದೆ. ಈ ವಿಧಿ-ನಿಷೇಧ ಎನ್ನುವ ಕಲ್ಪನೆಯನ್ನು ಇಂದು ಬಹಳ ವಿಶಾಲವಾದ ಅರ್ಥದಲ್ಲಿ ಬಳಸಲಾಗುತ್ತಿದೆ. ಅದನ್ನೇ ಇಂದು ಲೋಕ ರೂಢಿಗಳು, ಸಂಪ್ರದಾಯಗಳು, ಸಂಸ್ಕಾರಗಳು, ನಂಬಿಕೆಗಳು, ಆಚರಣೆಗಳು, ಕಾನೂನು ನಿರ್ಬಂಧಗಳು ಬಳಸಲಾಗುತ್ತಿದೆ. ಇವು ಸಾಮಾಜಿಕ ನಡತೆಯ ನೀಲಿ ನಕಾಶೆಗಳಾಗಿ ಸಮಾಜದ ಸದಸ್ಯರುಗಳ ನಿರೀಕ್ಷಿತ ನಡೆತೆ ಹೇಗಿರಬೇಕು ಎಂಬುದರ ಜೊತೆಗೆ ಆದರ್ಶ ನಡತೆಯ ಬಗ್ಗೆಯೂ ಅವು ತಿಳಿಯಪಡಿಸುತ್ತದೆ. ಮಾನವ ನಿರ್ಮಿತ ಸಂಘ ಸಂಸ್ಥೆಗಳಿಗೆ, ಪಕ್ಷ ಪಂಗಡಗಳಿಗೆ, ರಾಜ್ಯ ಸರ್ಕಾರಗಳಿಗೆ, ಸಮಾಜ ಸಮುದಾಯಗಳಿಗೆ ಆಧಾರ ಸ್ತಂಭಗಳಾಗಿ ವಿಧಿ ನಿಷೇಧಗಳು ಕೆಲಸ ಮಾಡುತ್ತವೆ. ಸಾಮಾಜಿಕ ಅಂಶಗಳಾದ ಲೈಂಗಿಕತೆ, ವಿವಾಹ, ಜನನ, ಋತುಮತಿ, ಹೆರಿಗೆ, ಆಹಾರ, ಮರಣ, ವೇಷಭೂಷಣ, ದೇವರು, ಜಾತ್ರೆ, ಹಬ್ಬ, ನಾಮಕರಣ, ವೃತ್ತಿ ವಸತಿ, ನ್ಯಾಯ ಕುಟುಂಬ ಮೊದಲಾದ ಸಂಪ್ರದಾಯ ಮತ್ತು ನಂಬಿಕೆಗಳನ್ನುಆಚರಣೆಗೆ ತರುವ ಮಾನವನ ಸ್ವೇಚ್ಛಾಚಾರದ ಮೇಲೆ ಕಡಿವಾಣ ಹಾಕುವುದರ ಮೂಲಕ ಸಮೂಹದ ಅಸ್ತಿತ್ವಕ್ಕೆ ವಿಧಿ ನಿಷೇಧಗಳು ಸಹಕಾರಿಯಾಗಿವೆ. ಈ ವಿಧಿ ನಿಷೇಧಗಳು ಮಾನವನ ಸಾಮಾಜಿಕ ವ್ಯವಸ್ಥೆಗೆ ಭದ್ರತೆಯನ್ನು ಮತ್ತು ಸ್ಥಿರತೆಯನ್ನು ನೀಡುವುದರಿಂದ ಈ ಮಾದಿಗ ಸಮುದಾಯದ ಸಾಮಾಜಿಕ ಜೀವನ ಮತ್ತು ಧಾರ್ಮಿಕ ಆಚರಣೆಗಳಲ್ಲಿ ವಿಧಿ ನಿಷೇಧಗಳಿಗೆ ಹೆಚ್ಚು ಮಹತ್ವ ಕೊಟ್ಟು ಅವುಗಳಿಗೆ ಬದ್ಧರಾಗಿ ನಡೆದುಕೊಳ್ಳುತ್ತಾರೆ. ಹುಟ್ಟಿನಿಂದ ಸಾವಿನವರೆಗೂ ಹಲವು ಬಗೆಯ ಕಟ್ಟುನಿಟ್ಟಾದ ವಿಧಿ ನಿಷೇಧಗಳು ಈ ಸಮುದಾಯದಲ್ಲಿ ಕಂಡು ಬರುವುದರಿಂದ ವಿಧಿಗಳು ಮತ್ತು ನಿಷೇಧಗಳು ಎಂದು ಎರಡು ರೀತಿಯಾಗಿ ವಿಭಾಗ ಮಾಡಲಾಗಿದೆ.

ವಿಧಿಗಳು

ವಿಧಿ ಎಂದರೆ ಮಾಡಲೇಬೇಕಾದ ಆಜ್ಞೆ, ಅಥವಾ ಅನುಸರಿಸಲೇಬೇಕಾದ ಮಾರ್ಗ. ಈ ವಿಧಿ ಎಂಬ ಶಬ್ದಕ್ಕೆ ನಿಯಮ, ಆಜ್ಞೆ, ಅದೃಷ್ಟ ಲಿಖಿತ, ಹಣೆಬರಹ, ಎಂಬ ಅರ್ಥವಿದ್ದರೂ ಇಲ್ಲಿ ನಿಯಮಗಳು ಎಂಬ ಅರ್ಥದಲ್ಲಿ ಅಧ್ಯಯನಿಸಬೇಕಾಗಿದೆ. ಈ ವಿಧಿ ನಿಯಮಗಳನ್ನು ನಿಶ್ಚಯಾತ್ಮಕ ನೈತಿಕ ನಿಯಮಗಳು ಎಂಬುದಾಗಿಯೂ ಕರೆಯಬಹುದು. ಇವು ನಡತೆ. ಹೀಗೆಯೇ ಇರಬೇಕೆಂದೂ, ನಾವು ಹೀಗೆಯೇ ಮಾಡಬೇಕೆಂದೂ, ನಿಗಧಿಪಡಿಸುತ್ತವೆ. ಈ ವಿಧಿಗಳು ಮಾನವನ ಸಾಮಾಜಿಕ ಬದುಕಿಗೆ ದಾರಿ ದೀಪಗಳು ಆಗುವುದರಿಂದ ಸಮಾಜ ಮತ್ತು ಸಮೂಹ ಒಪ್ಪಿತ ನಿರೀಕ್ಷೆಗಳೇ ಆಗಿವೆ. ಒಂದು ಸಮುದಾಯದ ಕಡ್ಡಾಯ ಆಚರಣೆಗಳು ವಿಧಿಗಳಾಗಿ ಪರಿವರ್ತನೆಯಾಗುವುದರಿಂದ ಮಾದಿಗ ಸಮುದಾಯದ ಸಮೂಹಗಳಲ್ಲಿ ಆ ಜನಾಂಗಕ್ಕೆ ಸಂಬಂಧಪಟ್ಟ ಕಟ್ಟು ನಿಟ್ಟಾದ ವಿಧಿ ನಿಯಮಗಳನ್ನು ಪಾಲಿಸುವುದು ಕಂಡು ಬರುತ್ತದೆ.

ಮಾದಿಗ ಸಮುದಾಯದಲ್ಲಿ ಸತ್ತ ಮಾತಾಪಿತೃಗಳ ದಿನಕರ್ಮಗಳನ್ನು ಮಾಡಬೇಕು ಮನೆದೇವರ ವಾರದ ದಿನ ನೆಲ ಸಾರಿಸಬೇಕು. ನಂತರ ಮೈನೆರೆತ ಹೆಣ್ಣಿಗೆ ಸೋದರಮಾವನೇ ಸ್ನಾನವನ್ನು ಮಾಡಿಸಿ ಒಳಗೆ ಕರೆದುಕೊಳ್ಳುತ್ತಾನೆ. ಧಾರೆ ಮುಹೂರ್ತಕ್ಕೆ ವಧುವನ್ನು ಸೋದರಮಾವನೇ ಕರೆದು ತರಬೇಕು ನಾಮಕರಣದಲ್ಲಿ ಮಗುವಿನ ಸೋದರತ್ತೆ ತೊಟ್ಟಿಲು ಪೂಜೆ ಮಾಡುತ್ತಾಳೆ. ಗುಡಿಕಟ್ಟೆ ಮತ್ತು ಕಟ್ಟೆಮನೆಗಳ ನ್ಯಾಯ ತೀರ್ಮಾನಕ್ಕೆ ಬದ್ಧರಾಗಬೇಕು. ಹಬ್ಬ ಹರಿದಿನಗಳಲ್ಲಿ ಜಾತ್ರೆ ಉತ್ಸವಗಳಲ್ಲಿ ನೆಂಟರನ್ನು ಕರೆಯಬೇಕು. ನಂತರ ಆ ದೇವರನ್ನು (ಜಲ್ದಿಗೆ) ತೆಗೆದುಕೊಂಡು ಹೋಗಬೇಕು. ಹಾಗೂ ಜಾತ್ರೆಯ ಸಂದರ್ಭದಲ್ಲಿ ಜನರು ಅಂದರೆ ಯಜಮಾನರು ಪೇಟವನ್ನು ಸುತ್ತಬೇಕು. ಹಿರಿಯರಿಗೆ ಗೌರವ ಕೊಡಬೇಕು. ಇವೇ ಮೊದಲಾದ ಅಸಂಖ್ಯಾತ ವಿಧಿಗಳು ಮಾದಿಗ ಸಮುದಾಯಗಳಲ್ಲಿ ಕಂಡು ಬರುವುದರ ಜೊತೆಗೆ ಅವರ ಸಾಮಾಜಿಕ ಜೀವನದಲ್ಲಿ ಅನೌಪಚಾರಿಕ ನಿಯಮಗಳಾಗಿ ಕಾರ್ಯ ನಿರ್ವಹಿಸುತ್ತಿವೆ.

ನಿಷೇಧಗಳು

ನಿಷೇಧ ಎಂದರೆ ಇಂಥದನ್ನು ಮಾಡಕೂಡದು ಅಥವಾ ಇದನ್ನು ಬಹಿಷ್ಕರಿಸುವುದು ಎಂದರ್ಥ. ಈ ನಿಷೇಧ ಎಂಬ ಶಬ್ದಕ್ಕೆ ವಿರೋಧ, ಬಿಡುಗಡೆ, ಅಡ್ಡಿ, ಸಲ್ಲದು, ಎಂಬ ಅರ್ಥಗಳಿದ್ದರೂ ಇಲ್ಲಿ ಬಹಿಷ್ಕಾರಾಜ್ಞೆ ಎಂಬ ಅರ್ಥದಲ್ಲಿ ಅಧ್ಯಯನ ಮಾಡಬೇಕಾಗಿದೆ. ಈ ನಿಷೇಧಗಳನ್ನು ನಿಷೇಧಾತ್ಮಕ ನೈತಿಕ ನಿಮಯಗಳು ಎಂಬುದಾಗಿಯೂ ಕರೆಯಬಹುದು. ಸಮಾಜ ಮತ್ತು ಸಮುದಾಯಗಳು ಅಳವಡಿಸಲ್ಪಟ್ಟ ಸಾಮಾಜಿಕ ನಿಯಮಗಳೇ ನಿಷೇಧಗಳಾಗಿರುತ್ತವೆ. ಕೇರಿ, ಗ್ರಾಮ, ದೇವರು, ಧರ್ಮ, ಕುಲ ಮತ್ತು ಬೆಡಗುಗಳಿಗೆ ವಿರೋಧವಾಗಿರುವ ಯಾವುದೇ ಆಚರಣೆಗಳಿದ್ದರೂ ಮಾದಿಗ ಸಮುದಾಯದ ಸಮೂಹಗಳು ಮತ್ತು ಹೊಲೆಯ ಸಮುದಾಯಗಳು ಬಹಿಷ್ಕರಿಸುವುದರಿಂದ ಸಮುದಾಯಗಳಿಗೆ ಸಂಬಂಧಿಸಿದ ಹಲವಾರು ನಿಷೇಧಗಳನ್ನು ಈ ಜನಾಂಗಗಳಲ್ಲಿ ಕಾಣಬಹುದು.

ಸಮುದಾಯದಲ್ಲಿ ಗಂಡ ಏನಾದರೂ ಸತ್ತರೆ ಅವಳು ವಿಧವೆ ಆಗುತ್ತಾಳೆ. ಆದರೆ ಮರುವಿವಾಹ ಆಗುವಂತಿಲ್ಲ. ಏಕೆಂದರೆ ಈ ಸಮುದಾಯದಲ್ಲಿ ಆ ಮಹಿಳೆಯನ್ನು ಕೀಳು ಭಾವನೆಯಿಂದ ನೋಡುತ್ತಾರೆ ಎಂಬ ಒಂದೇ ಒಂದು ಕಾರಣಕ್ಕಾಗಿ. ಶತಮಾನಗಳ ಹಿಂದೆ ಗಂಡನ ಚಿತೆಯಲ್ಲಿಯೇ ಹೆಂಡತಿ ಸಹ ಚಿತೆ ಏರುತ್ತಿದ್ದಳು. ಆದರೆ ಈ ಪದ್ಧತಿ ಈಗಿಲ್ಲ. ಯಜಮಾನ ಅಥವಾ ಯಜಮಾನಿ ಸತ್ತರೆ ದಿನದ ಕರ್ಮಗಳನ್ನು ಹಿರಿಯ ಮಗನು ಮಾಡಬೇಕಾಗುತ್ತದೆ. ಹಾಗೂ ಕೆಲವೊಂದು ಹಬ್ಬಗಳಲ್ಲಿ ಅಂದರೆ ನಾಗಪ್ಪನ ಹಬ್ಬದಲ್ಲಿ ಗೌಲಿಪಾಯಸ ಮಾಡಬಾರದು. ದೈವದವರ ಮುಂದೆ ಸುಳ್ಳು ಹೇಳಬಾರದು. ಸೂತಕದ ಮನೆಯಲ್ಲಿ ಊಟಮಾಡಬಾರದು. ಜಾಡಿ ಅಥವಾ ಕಂಬಳಿಯ ಮೇಲೆ ಕುಳಿತುಕೊಳ್ಳಬಾರದು, ನಂತರ ರಾಶಿ ಕಣದಲ್ಲಿ ಚಪ್ಪಲಿ ಹಾಕಬಾರದು, ಧೂಳು ಸಂಜೆ ಹೊತ್ತಿನಲ್ಲಿ ಮಲಗಬಾರದು ಎಂಬುದಾಗಿ ನಿಷೇಧವಿರುವುದು ತಿಳಿದು ಬರುತ್ತದೆ. ಮೈನೆರೆದಾಗ ಮಂಗಳ ಕಾರ್ಯ ಮಾಡಬೇಕು ಹೀಗೆ ಹಲವಾರು ಆಜ್ಞೆಗಳನ್ನು ಈ ಸಮುದಾಯದಲ್ಲಿ ಕಾಣಬಹುದಾಗಿದೆ. ಮಾದಿಗ ಸಮುದಾಯದಲ್ಲಿ ಇಂತಹ ಹಲವಾರು ನಂಬಿಕೆಗಳು, ಆಚರಣೆಗಳು, ವಿಧಿನಿಷೇಧಗಳನ್ನು ಇಂದಿಗೂ ಉಳಿಸಿಕೊಂಡು ಬಂದಿರುವುದನ್ನು ಕಾಣಬಹುದು.

* ರಾತ್ರಿಹೊತ್ತು ಕಸ ಹೊಡೆಯುವುದು ಮತ್ತು ಕಸವನ್ನು ಹೊರಹಾಕುವಂತಿಲ್ಲ. ಯಾಕೆಂದರೆ ಲಕ್ಷ್ಮಿ ಹೊರ ಹೋಗುತ್ತಾಳೆ ಎಂಬ ನಂಬಿಕೆ.
* ಯಾವುದೇ ಶುಭಕಾರ್ಯವಿದ್ದರೆ ಮುತ್ತೈದೆಯರು ಮುಂದಾಗಿ ಮಾಡಬೇಕು
* ಐದು ಜನ ಮುತ್ತೈದೆಯರು ಮದುವೆಯ ಸುರಗಿ ಕಾರ್ಯದಲ್ಲಿ ಕಳಸ ಬೆಳಗಬೇಕು.
* ಮದುಮಗ ಕೈಯಲ್ಲಿ ನಿಂಬೆಹಣ್ಣನ್ನು ಚುಚ್ಚಿದ ಚಾಕು ಹಿಡಿದುಕೊಂಡಿರಬೇಕು.
* ಮದುಮಗ ಕುಲದೇವರಿಗೆ ನಮಸ್ಕಾರ ಮಾಡಬೇಕು.
* ಋತುಮತಿಯಾದ ಹೆಣ್ಣುಮಗಳು ಮನೆಯಲ್ಲಿ ಪ್ರತ್ಯೇಕ ಸ್ಥಳ ಅಥವಾ ಮೂಲೆಯಲ್ಲಿ ಕುಳಿತುಕೊಳ್ಳಬೇಕು.
* ಋತಿಮತಿ ಹಾಗೂ ಬಾಣಂತಿಯರು ಮಲಗುವ ತಲೆಯ ಹಿಂಬದಿಯಲ್ಲಿ ಕುಡುಗೋಲು, ಚಪ್ಪಲಿ, ಅಥವಾ ಕಸಬರಿಕೆ ಇಟ್ಟುಕೊಂಡಿರಬೇಕು. ಯಾಕೆಂದರೆ ಯಾವುದೇ ದುಷ್ಟಶಕ್ತಿ ಹತ್ತಿರ ಸುಳಿಯುವುದಿಲ್ಲ.
* ಬಿಸಿನೀರಿನಿಂದ ಸ್ನಾನ ಮಾಡುವದು ಗರ್ಭಿಣಿ ಮಹಿಳೆಯ ಆರೋಗ್ಯಕ್ಕೆ ಉತ್ತಮ.
* ಹುಟ್ಟಿದ ಮಗುವಿಗೆ ಎಣ್ಣೆ ಸ್ನಾನ ಮಾಡಿಸಬೇಕು.
* ಮನೆಯ ಮಾಳಿಗೆ ಮೀರಿ ಅಥವಾ ಮನೆಯ ಮುಂದುಗಡೆ ಕಾಗೆ ಕೂಗಿದರೆ ಅತಿಥಿಗಳು ಬರುತ್ತಾರೆ ಎಂಬ ನಂಬಿಕೆ.

* ಯಾವುದೇ ವಿಷಯ ಮಾತನಾಡುವಾಗ ಹಲ್ಲಿ ಲೊಚಗುಟ್ಟಿದರೆ ಮಾತನಾಡುವ ಮಾತು ಸತ್ಯವಾಗುತ್ತಿದೆ.
* ಮಂಗಳವಾರ ಮಗಳು ತವರಿನಿಂದ ಗಂಡನ ಮನೆಗೆ ಹೋಗಬಾರದು
* ಶುಕ್ರವಾರ ಮನೆಯ ಸೊಸೆಯು ತವರಿಗೆ ಹೋಗಬಾರದು.
* ದೇವರಲ್ಲಿ ಹೂ ಕೇಳಿದಾಗ ಬಲಗಡೆಯಿಂದ ಕೊಟ್ಟರೆ ಕೆಲಸ ಯಶಸ್ವಿಯಾಗುತ್ತದೆ.
* ದೈವವು ಹೂವನ್ನು ಪ್ರಸಾದವಾಗಿ ಎಡಗಡೆ ಭಾಗದಿಂದ ಕೊಟ್ಟರೆ ಅದು ಅಶುಭದ ಸಂಕೇತ.
* ಹೆಣ್ಣು ಮಗಳು ತುಂಬಿದ ನೀರಿನ ಕೊಡ ಹೊತ್ತುಕೊಂಡು ಬಂದರೆ ಅದು ಶುಭಸೂಚಕ.
* ದೇವಸ್ಥಾನದ ಒಳಗಡೆ ಪಾದರಕ್ಷೆಗಳನ್ನು ಹಾಕಿಕೊಂಡು ಹೋಗಬಾರದು.
* ಕಟ್ಟಿಗೆ ಹೊರೆ ಹೊತ್ತುಕೊಂಡು ಬಂದರೆ ಶುಭಕಾರ್ಯಗಳಿಗೆ ಹೋಗುವಂತಿಲ್ಲ.
* ಬಂಜೆ ಮಹಿಳೆ ಎದುರು ತಾಯಂದಿರು ಬಂದರೆ ತಮ್ಮ ಮಗುವಿಗೆ ಹಾಲು ಕುಡಿಸುವಂತಿಲ್ಲ.
* ಚಪ್ಪಲಿಗಳನ್ನು ಎಮ್ಮೆ ಚರ್ಮದಿಂದ ಮಾತ್ರ ಸಿದ್ಧಪಡಿಸಬೇಕು. ಏಕೆಂದರೆ ಎತ್ತು ಮತ್ತು ಆಕಳನ್ನು ಬಸವಣ್ಣನೆಂಬ ದೇವತಾ ನಂಬಿಕೆ ಇವರಲ್ಲಿದೆ.
* ಬೆಳಿಗ್ಗೆ ಚಪ್ಪಲಿ ಕೆಲಸ ಪ್ರಾರಂಭಿಸುವ ಪೂರ್ವದಲ್ಲಿ ಕಸಬಿನ ಸಲಕರಣೆಗಳನ್ನು ದೇವರೆಂದು ಬಾವಿಸುವರು ಅಂತೆಯೇ ಕೆಲಸಕ್ಕೆ ಮೊದಲು ಅವುಗಳನ್ನು ಪೂಜಿಸುವರು.
* ಅಮವಾಸ್ಯೆಯ ದಿನದಂದು ಹಳೆಯ ಚಪ್ಪಲಿ ರಿಪೇರಿ ಮಾಡುವುದಿಲ್ಲ. ಏಕೆಂದರೆ ಅನಿಷ್ಟ ವಸ್ತು (ಲಿಂಬೆಹಣ್ಣು, ಉಪ್ಪು, ಕಟ್ಟಿಗೆ, ಮೆಣಸಿನಕಾಯಿ, ಇತ್ಯಾದಿ) ಗಳನ್ನು ಅಂದು ತುಳಿದು ಬಂದಿದ್ದಾರೆ ಇದರಿಂದ ಅ ಅನಿಷ್ಟ ತಮಗೆ ತಗಲೀತು ಎಂಬ ನಂಬಿಕೆಯಿಂದ ಅಂದಿನ ದಿನ ಹಳೆ ಚಪ್ಪಲಿ ರಿಪೇರಿ ಮಾಡುವುದಿಲ್ಲ.
* ಸಣ್ಣ ಮಕ್ಕಳಿಗೆ ದೇಹದ ಮೇಲೆ ಗಾಯವಾದಾಗ ಕುರಿಯ ಚರ್ಮವನ್ನೆ ಕೊರಳಿಗೆ ಕಟ್ಟುತ್ತಾರೆ. ಇದು ತಾಯತದ ಆಕಾರದಲ್ಲಿರುತ್ತದೆ. ಚರ್ಮವನ್ನು ಎಳೆಗಳಾಗಿಯೂ ಕಟ್ಟುತ್ತಾರೆ. ಈ ಗಾಯಗಳಿಗೆ 'ಪೈನ್' ಎನ್ನುತ್ತಾರೆ.
* ಹೊಕ್ಕಳು ಬಳ್ಳಿಯನ್ನು ಸಣ್ಣದಾದ ಚರ್ಮದ ಚೀಲದಲ್ಲಿ ಹೊಲಿದು ಕೂಸಿನ ಕೊರಳಲ್ಲಿ ಕಟ್ಟುವರು. ಇದರಿಂದ ಕೂಸು ದಿನವಡೀ ಉತ್ಸಾಹ ಉಲ್ಲಾಸ ಭರಿತವಾಗಿರುತ್ತದೆಂದು ನಂಬಿಕೆ ಇದೆ.

೩.೧೨. ಮಾದಿಗ ಬೆಡಗುಗಳು (ಕುಲಗಳು)

ಬೇರೆ ಬೇರೆ ಜಾತಿಯ ಗುಂಪಿನವರಲ್ಲಿ ಕುಲಗೋತ್ರಗಳು ಕಂಡುಬರುವಂತೆ ಮಾದಿಗರಲ್ಲಿಯೂ ಸಹ ಕಂಡುಬರುತ್ತವೆ. ಸಾಮಾನ್ಯವಾಗಿ ಕುಲಗೋತ್ರಗಳು ಮತ್ತು ಬೆಡುಗುಗಳು ಸಮುದಾಯವೊಂದರ ಅಂತರ್‌ಸಂಬಂಧಗಳಿಗೆ ಅತ್ಯಾವಶ್ಯಕವಾಗಿ ಬೇಕಾಗುತ್ತವೆ. ಅಂದರೆ ಸಂಬಂಧವನ್ನು ಬೆಳಸಿಕೊಳ್ಳುವಾಗ ಹಾಗೂ ಮಧ್ಯ ಹೆಣ್ಣನ್ನು ಕೊಡುವ ತೆಗೆದುಕೊಳ್ಳುವ ಕಾರ್ಯ ಮಾಡುವುದಿಲ್ಲ. ಏಕೆಂದರೆ ಅವರು ಅಣ್ಣ ತಮ್ಮಂದಿರಾಗುತ್ತಾರೆ. ಇದರಿಂದಾಗಿ ತಮಗೆ ಸಮಾನವಾದ ಬೇರೆ ಕುಲದವರೊಂದಿಗೆ ಸಂಬಂಧವನ್ನು ಹೆಚ್ಚಾಗಿ ಬೆಳೆಸುತ್ತಾರೆ. ಇಂತಹ ಪದ್ಧತಿ ಮಾದಿಗ ಸಮುದಾಯದಲ್ಲಿ ಮಾತ್ರವಲ್ಲದೆ ಎಲ್ಲಾ ಬುಡಕಟ್ಟು ಮೂಲದ ಸಮುದಾಯಗಳಲ್ಲೂ ಕಂಡು ಬರುತ್ತದೆ.

ಇಲ್ಲಿ ಅಂದರೆ ಮಾದಿಗರಲ್ಲಿ ಹಲವಾರು ಕುಲಗೋತ್ರ ಮತ್ತು ಬೆಡಗುಗಳನ್ನು ಕಾಣುತ್ತೇವೆ. ಅವುಗಳನ್ನು ಈ ಕೆಳಗಿನಂತೆ ನೋಡಬಹುದು.

೧. ಐವಳ್ಳಿ
೨. ಭಂಡಾರಿ
೩. ಛಿಮಿಲರು ಇರುವೆ
೪. ಎನಿಮಲರು.
೫. ಮೀನಿಂಗಲಾರು
೬. ಭೂಮಲಾರು
೭. ಕುರಿಯರು
೮. ಎಗ್‌ಡೇರು
೯. ಮೇಚಿಗರು
೧೦. ಆಸೆಲಾರು
೧೧. ಸೆಡುಪೋತಲರು
೧೨. ಮಚ್ಚೇಲರು
೧೩. ಸನ್ನಕ್ಕಿಯರು
೧೪. ಕತ್ತರು
೧೫. ಜವದಾರರು
೧೬. ಚತ್ರೆರು

ಇವಲ್ಲದೇ ಮಾದಿಗರಲ್ಲಿ ಇನ್ನು ಕೆಲವು ಬೆಡಗುಗಳು ಕಂಡುಬರುತ್ತವೆ. ಮುಂಡ್ಲಾರು, ಸಾಕೆಪಳ್ಳು, ಮಂಗಾಣಿಕೆ, ಆನೆಯವರು, ಆಲದವರು, ಮಾಳಿಗೆಯವರು ಮುಂತಾದವುಗಳು ಕಂಡು ಬರುತ್ತವೆ. ಈ ಬೆಡಗುಗಳನ್ನು ಸೂಕ್ಷ್ಮವಾಗಿ ನೋಡದಾಗ ಇವು ಪ್ರಾಣಿ ಪಕ್ಷಿ ಗಿಡಗಳ ಸಂಕೇತಗಳನ್ನು ಹೊಂದಿರುವುದು ನಮಗೆ ತಿಳಿದು ಬರುತ್ತದೆ. ಮಾದಿಗರಲ್ಲಿ ಕೆಲವು ಅವರವರ ಹಿರಿಯರ ಹೆಸರುಗಳನ್ನು ಇಟ್ಟುಕೊಳ್ಳುತ್ತಿದ್ದರು. ಉದಾ : ಹರಳಯ್ಯನ ಕುಲದವರು, ಚನ್ನಯ್ಯನ ಕುಲದವರು, ಕರಡಿ ಗುಂಪಿನವರು, ಕಟ್ಟೆಪ್ಪನ ಗುಂಪಿನವರು ಇತ್ಯಾದಿ.

೩.೧೩. ಒಳಪಂಗಡಗಳು

ಒಳ ಪಂಗಡಗಳು ಎಂದ ಕೂಡಲೆ ನಮಗೆ ನೆನಪಾಗುವುದು ಅವರು ಮಾಡುವಮತಹ ವೃತ್ತಿಗಳು. ಆದರೆ ಮಾದಗರಲ್ಲಿಯೂ ಕೂಡಾ ಇತರೆ ಜಾತಿಗಳಲ್ಲಿರುವಂತೆ ಅನೇಕ ಒಳಪಂಗಡಗಳು ಕಂಡು ಬರುತ್ತವೆ. ಈ ಪಂಗಡಗಳು ಬಹುಶಃ ಅವರು ಆಡುವಂತಹ ಭಾಷೆ, ಮಾಡುತ್ತಿರುವ ವೃತ್ತಿ, ಬದುಕುತ್ತಿರುವ ರೀತಿ–ನೀತಿ, ಮತ್ತು ನಡವಳಿಕೆಯ ಮೇಲೆ ರಚನೆಯಾಗಿರುತ್ತದೆ. ಮಾದಿಗರಲ್ಲಿ ಬಹುತೇಕರು ಕನ್ನಡವನ್ನೇ ಹೆಚ್ಚಾಗಿ ಮಾತನಾಡುತ್ತಾರೆ. ಆದರೆ ಇತ್ತೀಚಿಗೆ ಕನ್ನಡ ಮತ್ತು ತೆಲುಗು ಮಿಶ್ರಿತ ಭಾಷೆಯನ್ನು ಮಾತನಾಡುವುದನ್ನು ರೂಢಿಸಿಕೊಂಡಿದ್ದಾರೆ. ಬಹುಶಃ ಇದು ತೆಲುಗು ಮಾತೃಭಾಷೆಯನ್ನಾಗುಳ್ಳ ಇತರೆ ಸಮುದಾಯಗಳೊಂದಿಗೆ ಒಡನಾಟ, ಸಂಪರ್ಕಗಳಿಂದ ಬಂದಿರಬಹುದು. ಆದ್ದರಿಂದ ಮಾದಿಗರು ಮಾತನಾಡುತ್ತಿರುವಂತಹ ಭಾಷೆಯನ್ನಾಧರಿಸಿ ಕೆಲವು ಒಳಪಂಗಡಗಳನ್ನು ಎರಡು ಭಾಗವಾಗಿ ವಿಂಗಡಿಸಬಹುದು. ಅದರಲ್ಲಿ ಮುಖ್ಯವಾಗಿ ಕನ್ನಡ ಮಾತನಾಡುವವರದು ಕನ್ನಡ ಮಾದಿಗ ಎಂದೂ, ತೆಲುಗು ಮಾತನಾಡುವ ಮಾದಿಗರನ್ನು ತೆಲುಗು ಮಾದಿಗರು ಎಂದು ಎರಡು ಭಾಗವಾಗಿ ವಿಂಗಡಿಸಬಹುದಾಗಿದೆ.

ಒಟ್ಟಾರೆಯಾಗಿ ಮಾದಿಗರಲ್ಲಿ ಬರುವಂತಹ ಪಂಗಡ ಅಥವಾ ಗುಂಪುಗಳನ್ನು ಅನೇಕ ಭಾಗಗಳಾಗಿ ವಿಂಗಡಿಸಬಹುದು. ಮಾದಿಗರು ಚಪ್ಪಲಿಯನ್ನು ಹೊಲೆಯುವಾಗ ಜನರು ನೇರವಾಗಿ ಅವನನ್ನು ಮಾದಿಗ ಎಂದು ಗುರುತಿಸುತ್ತಾರೆ. ನಂತರ ಬೂಟು ಪಾಲೀಸು ಮಾಡುವವನನ್ನು ಸಹ ಮಾದಿಗನೆಂದು ಕರೆಯಲಾಗುತ್ತದೆ. ಏಕೆಂದರೆ ಅವನ ಕೈಯಲ್ಲಿ ದನದ ಚರ್ಮ ಇರುವುದರಿಂದ ಜನರು ಅವನನ್ನು ಮಾದಿಗ ಎಂದು ಪರಿಗಣಿಸುತ್ತಾರೆ ಎಂದು ಹೇಳಬಹುದಾಗಿದೆ.

೩.೧೪. ವೃತ್ತಿ

ಮಾದಿಗ ಎಂದ ಕೂಡಲೇ ನಮಗೆ ನೆನಪಿಗೆ ಬರುವುದು ಚಪ್ಪಲಿ ಹೊಲೆಯುವ ವೃತ್ತಿ. ಮಾದಿಗರು ಬೇರೆ ಬೇರೆ ವೃತ್ತಿಗಳನ್ನೂ ಮಾಡುತ್ತಾರೆ. ಚರ್ಮವನ್ನು ಹದಗೊಳಿಸುವುದು, ಇತರ ಸಮುದಾಯಗಳಲ್ಲಿ ಯಾರಾದರೂ ಸತ್ತಾಗ ಸಾವಿನ ಸುದ್ದಿಯನ್ನು ತಲುಪಿಸುವ ಕಾರ್ಯವನ್ನು ಮಾಡುತ್ತಿದ್ದರು. ಪ್ರಸ್ತುತ ಜೀವನಾಧಾರಕ್ಕಾರಿ ಬೇರೆ ಬೇರೆ ವೃತ್ತಿಗಳನ್ನು ಅವಲಂಬಿಸುತ್ತಿದ್ದಾರೆ.

* * *

ಅಧ್ಯಾಯ : 4

ಮಾದಿಗ ಸಮುದಾಯದ ಆಚರಣೆಗಳು

ಮಾನವರು ತಮ್ಮ ಮೂಲಭೂತ ಅವಶ್ಯಕತೆಗಳಾದ ಆಹಾರ, ವಸತಿ, ಆಶ್ರಯಗಳಿಗಾಗಿ ಪ್ರಕೃತಿಯ ಜತೆ ಸೆಣಿಸುತ್ತ ಅದನ್ನು ಪಳಗಿಸುತ್ತ ಉತ್ಪಾದನೆಯ ಉಪಕರಣಗಳನ್ನು ನಿರ್ಮಿಸಿದರು. ಈ ಶೋಧವು ಚಾರಿತ್ರಿಕವಾಗಿ ಕ್ರಾಂತಿಕಾರಕವಾಗಿತ್ತು. ಇದರಿಂದ ದೇಹಶ್ರಮ ಕಡಿಮೆಯಾಗಿ, ವಿರಾಮ ಸಿಕ್ಕು, ಬುದ್ಧಿಶಕ್ತಿಯು ಹೆಚ್ಚು ಕೆಲಸ ಮಾಡತೊಡಗಿತು. ಅವರು ಆಲೋಚನಾ ಜೀವಿಗಳಾದರು ಹೀಗಾಗಿ ಅವರ ಪ್ರಜ್ಞೆಯು ಅವರ ಪರಿಸರದಲ್ಲಿ ಉತ್ಪಾದನೆಗಾಗಿ ನಡೆಸುತ್ತಿದ್ದ ಚಟುವಟಿಕೆಗಳ ಭಾಗವಾಯಿತು. ಮಾನವ ಪ್ರಜ್ಞೆಯನ್ನು ರೂಪಿಸಲು ಕಾರಣವಾಗಿರುವ ಆರ್ಥಿಕ ಚಟುವಟಿಕೆಗಳ ಈ ಭೌತಿಕ ಪರಿಸರವೇ ಮೂಲರಚನೆ. ಇದರ ಅಡಿಪಾಯದ ಮೇಲೆ ಕಲೆ. ಸಾಹಿತ್ಯ, ತತ್ವಚಿಂತನೆ, ಧಾರ್ಮಿಕ ಆಚರಣೆ, ಬೌದ್ಧಿಕ ವಿಚಾರ, ನೈತಿಕಮೌಲ್ಯ, ತತ್ವಶಾಸ್ತ್ರ ಇತ್ಯಾದಿಗಳ ಲೋಕ ರೂಪುಗೊಳ್ಳುತ್ತಿವೆ. ಇದೇ ಮೇಲುಗೈಯಾದ ಸಂಸ್ಕೃತಿ. ಇದು ಮೂಲ ರಚನೆಯ ಪ್ರತಿಬಿಂಬ ಆಗಿರುವುದರಿಂದ ಅಲ್ಲಾಗುವ ಬದಲಾವಣೆ ಇಲ್ಲೂ ಪರಿಣಾಮ ತರುತ್ತಿದೆ.

ಸಂಸ್ಕೃತಿಯು ಮಾನವನ ಜೀವನವನ್ನು ರೂಪಿಸುವಲ್ಲಿ ಮಹತ್ವದ ಸ್ಥಾನವನ್ನು ಪಡೆದುಕೊಂಡಿದೆ. ಮಾನವನ ಬದುಕು ಸಲೀಸಾಗಿ, ಶಿಸ್ತುಬದ್ಧವಾಗಿ ಸಾಗಬೇಕಾದರೆ ಈ ಸಂಸ್ಕೃತಿಯು ಅವಶ್ಯಕ. ಆಯಾ ಸಮುದಾಯಗಳ ಸಂಸ್ಕೃತಿ ವಿಭಿನ್ನ ರೀತಿಯಲ್ಲಿ ರೂಪುಗೊಳ್ಳುತ್ತವೆ. ಆಚರಿಸುವಂತಹ ಆಚರಣೆ, ಪೂಜಾವಿಧಾನ, ಸಂಪ್ರದಾಯ ಹೀಗೆ ಹಲವಾರು ಅಂಶಗಳಿಂದ ಅವಲೋಕಿಸಿದಾಗ ಒಂದು ಸಮುದಾಯದ ಸಂಸ್ಕೃತಿ ಮತ್ತೊಂದು ಸಮುದಾಯದವರ ಸಂಸ್ಕೃತಿಗೆ ತಕ್ಕಮಟ್ಟಿಗೆ ಬದಲಾವಣೆಯನ್ನು ಕಾಣಬಹುದು. ಮೇಲ್ವರ್ಗದ ಜನಸಮುದಾಯದವರು ಪೂಜಾಕಾರ್ಯಕ್ರಮಗಳನ್ನು ಕೈಗೊಳ್ಳುವಂತಾದ ಸಂದರ್ಭದಲ್ಲಿ ಆಚರಿಸುವಂತಹ ರೀತಿ ನೀತಿ ಅದೇ ಧಾರ್ಮಿಕ ವಿಧಿ ವಿಧಾನಗಳನ್ನು ತಳ ಸಮುದಾಯದವರು ಆಚರಿಸುವಂತಹ ವಿಧಾನ ವ್ಯತ್ಯಾಸ ಕಂಡುಬರುತ್ತದೆ. ಆದರೆ ಕಾರ್ಯವೈಖರಿ ಮಾತ್ರ ಒಂದೆಯಾಗಿರುತ್ತದೆ.

ಸಂಸ್ಕೃತಿ ಎಂದರೆ ಭೌತಿಕ ಮತ್ತು ಅಭೌತಿಕವಾದ ಅಂಶಗಳನ್ನು ಒಳಗೊಂಡಂಥ ಹಾಗೂ ಸಮಾಜದಲ್ಲಿ ಅಸ್ತಿತ್ವಕ್ಕೆ ಬಂದಂತೆ ಒಂದು ವ್ಯವಸ್ಥೆಯಾಗಿದೆ. ಇಲ್ಲಿ ಸಂಸ್ಕೃತಿ ಮತ್ತು ಸಮಾಜದ ನಡುವೆ

ಇರುವ ಸಂದರ್ಭದ ಸ್ವರೂಪ ಏಕಮುಖವಾದುದಲ್ಲ, ಸಂಸ್ಕೃತಿ ಸಮಾಜದ ರೀತಿ ನೀತಿಗಳನ್ನು ಜನ ಜೀವನವನ್ನು ಪ್ರಭಾವಿಸುತ್ತದೆ. ಸಂಸ್ಕೃತಿ ಯಾವುದೇ ವ್ಯಕ್ತಿಯ ಹುಟ್ಟಿನಿಂದ ಕರಗತವಾಗಿ ಬಂದಿರುವಂತಹದು ಅಲ್ಲ, ಕಲಿಕೆಯಿಂದ ಬಂದಿರುವುದಾಗಿದೆ. ಇದರಿಂದಾಗಿ ಸಂಸ್ಕೃತಿಯ ವ್ಯವಸ್ಥೆಯು ಜೀವನದುದ್ದಕ್ಕೂ ಸಾಗುತ್ತ ಹೋಗುತ್ತಿದೆ. ಯಾವುದೇ ಸಮಾಜವು ತಾನು ಆದರ್ಶಪ್ರಾಯವೆಂದು ಎತ್ತಿ ಹಿಡಿಯವ ಮೌಲ್ಯಗಳಿಂದ ಹಾಗೂ ಆಚರಣೆಗಳನ್ನು ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ ವರ್ಗಾಯಿಸುತ್ತದೆ. ಸಮಾಜವು ಸಂಸ್ಕೃತಿಯನ್ನು ಉಳಿಸಿಕೊಂಡು ಬರುತ್ತದೆ. ಮತ್ತು ಸಂಸ್ಕೃತಿಯು ತನ್ನ ನಿರಂತರತೆಯನ್ನು ಕಾಯ್ದುಕೊಂಡು ಬರುತ್ತಿದೆ.

ವ್ಯಕ್ತಿಯು ಸಂಘ ಜೀವಿಯಾಗಿದ್ದರಿಂದ ಸಂಸ್ಕೃತಿಯನ್ನು ರೂಪಿಸಿಕೊಳ್ಳುವುದಕ್ಕೆ ಸಾಧ್ಯವಾಗಿದೆ. ಇದರಿಂದಾಗಿ ವ್ಯಕ್ತಿಯ ನಡವಳಿಕೆಯನ್ನು ಪರಿಚಯಿಸುವ ಅನೇಕ ಪ್ರಸಂಗಗಳು ಬದುಕಿನುದ್ದಕ್ಕೂ ಕಂಡುಬರುತ್ತಿದೆ. ಸಮುದಾಯದ ಜೀವನಕ್ಕೆ ತಕ್ಕಂತೆ ಅದರ ಸಂಸ್ಕೃತಿ ರೂಪಗೊಂಡಿರುತ್ತದೆ. ಇಂತಹ ಸಮುದಾಯಗಳಲ್ಲಿ ಮಗು ಹುಟ್ಟುವಿಕೆಯಿಂದ ಪ್ರೌಢ ಹಂತ, ಮದುವೆ ಮತ್ತು ಸಾವು ಇವುಗಳಲ್ಲಿ ಆಚರಿಸುವ ಪದ್ಧತಿಗಳು ವಿಶಿಷ್ಟ ಪೂರ್ಣವಾದವುಗಳಾಗಿವೆ. ಸಮುದಾಯಗಳ ಜೀವನದ ರೀತಿ ನೀತಿಗಳು ಅವರು ಕೈಗೊಳ್ಳುವ ಧಾರ್ಮಿಕ, ಶೈಕ್ಷಣಿಕ ಆರ್ಥಿಕ, ರಾಜಕೀಯ ಇನ್ನಿತರ ಅನೇಕ ಕ್ಷೇತ್ರಗಳ ಬಗೆಗೆ ಸಂಸ್ಕೃತಿಯು ಪ್ರತಿಬಿಂಬವಾಗಿರುತ್ತಿದೆ. ಯಾವುದೇ ಸಮುದಾಯವಿರಲಿ ಅದಕ್ಕೆ ಒಂದು ಸಂಸ್ಕೃತಿ ಬೇಕು. ಅದು ಇಲ್ಲದಿದ್ದರೆ, ಆ ಸಮುದಾಯವು ಸಮಾಜದಲ್ಲಿ ಉನ್ನತ ಸ್ಥಾನಮಾನ ಪಡೆಯಲು ಅನರ್ಹವಾಗುತ್ತದೆ. ಸಂಸ್ಕೃತಿ ಇಲ್ಲದಿದ್ದರೆ ಸಮುದಾಯಗಳ ಮತ್ತು ಅದರಲ್ಲಿ ಜೀವಿಸುವವರು ಅಪಕ್ವ ಅಪರಿಪೂರ್ಣರಾಗುತ್ತಾರೆ. ಆದ್ದರಿಂದ ಸಂಸ್ಕೃತಿ ಎಂಬುದು ನಿರಂತರ ಘಟಿಸುವಂತ ಒಂದು ಪ್ರಕ್ರಿಯೆಯಾಗಿದೆ.

ಈ ಎಲ್ಲಾ ಅಂಶಗಳಿಂದ ತಿಳಿಯುವದೇನೆಂದರೆ ಸಂಸ್ಕೃತಿಯು ನಿಂತ ನೀರಲ್ಲ. ಅದೊಂದು ನಿರಂತರವಾಗಿ ಹರಿಯುತ್ತಿರುವ ಪ್ರವಾಹವಾಗಿದೆ. ಈ ಹಿನ್ನಲೆಯಲ್ಲಿ ಅನೇಕ ವಿದ್ವಾಂಸರು, ಪಂಡಿತರು ಸಮಾಜ ಮತ್ತು ಸಂಸ್ಕೃತಿಯ ಬಗ್ಗೆ ಕಾಳಜಿ ಹೊಂದಿ ತಮ್ಮದೇ ಆದ ರೀತಿಯಲ್ಲಿ ವಿಶ್ಲೇಷಿಸಿದ್ದಾರೆ.

ಒಂದು ಕಡೆ ಬರಗೂರು ರಾಮಚಂದ್ರಪ್ಪನವರು ದಲಿತರ ಸಂಸ್ಕೃತಿ ಕುರಿತು ಈ ರೀತಿಯಲ್ಲಿ ಹೇಳುತ್ತಾರೆ. 'ದಲಿತರು ಸಾಂಸ್ಕೃತಿಕವಾಗಿ ಬಹಳಷ್ಟು ಶ್ರೀಮಂತರು. ಆದರೆ ಸಾಮಾಜಿಕವಾಗಿ ಆರ್ಥಿಕವಾಗಿ ಬಹಳಷ್ಟು ಬಡವರಾಗಿದ್ದಾರೆ'.

ಆಚರಣೆಗಳು :

ಆಚರಣೆಗಳು ಮನುಷ್ಯನ ದಿನನಿತ್ಯದ ಬದುಕಿನ ಅಂಗವಾಗಿವೆ. ಮತ್ತು ಕ್ರಿಯೆಯ ಮೂಲಕ ವಿಶಿಷ್ಟ ಸ್ಥಾನಮಾನವನ್ನು ಪಡೆದುಕೊಳ್ಳುತ್ತಿವೆ. ಯಾವುದೇ ದೇಶದ ಜನಾಂಗದ ಸಂಸ್ಕೃತಿಯ ಘೋಷಣೆಗಳಿಗೆ ನಾಗರೀಕತೆಯ ಬೆಳವಣಿಗೆಗೆ ಆಚರಣೆಗಳು ಪ್ರಮುಖವಾಗಿವೆ. ಇವುಗಳು ಆದಿಮಾನವನ ಜೊತೆಯಲ್ಲಿ

ಬಂದಿದ್ದು ದೈವಿಕ ಸ್ವರೂಪದ ಬೆಳಕಿನಲ್ಲೆ ಸೃಷ್ಟಿಗೊಂಡಿವೆ. ಜನಪದ ಸಂಸ್ಕೃತಿಯ ಮೂಲ ಬೇರುಗಳಾದ ನಂಬಿಕೆಗಳಿಂದ ಆಚರಣೆಗಳು, ಪದ್ಧತಿಗಳು, ಸಂಪ್ರದಾಯಗಳು, ನಡವಳಿಕೆಗಳು ಬೆಳೆದು ಬಂದಿದ್ದು ಜಾನಪದದ ವ್ಯಾಪಕ ಅಧ್ಯಯನದಲ್ಲಿ ಪ್ರಮುಖ ಸ್ಥಾನ ಪಡೆದುಕೊಳ್ಳುತ್ತಿವೆ.

ಪ್ರಕೃತಿಯ ಮಡಿಲಲ್ಲಿ ಬದುಕಬೇಕಾಗಿದ್ದ ಮಾನವ ಭಯ ಭಕ್ತಿಗಳಿಂದ ಮತ್ತು ಮನಸ್ಸಿನ ಅಸ್ಥಿರ ಭಾವನೆಗಳಿಂದ ದೈವಿಕ ನಂಬಿಕೆಗಳನ್ನು ಆಚರಣೆಯ ಕ್ರಮದಲ್ಲಿ ಉಳಿಸಿಕೊಂಡಿದ್ದಾನೆ. ಅಗೋಚರವಾದ ಶಕ್ತಿಗಳನ್ನು ವಶಪಡಿಸಿಕೊಳ್ಳಲು, ಅವುಗಳ ಕ್ರೂರ ವೃತ್ತಿಯಿಂದ ಪಾರಾಗಲು ಅವುಗಳ ಬಗ್ಗೆ ಇರುವ ನಂಬಿಕೆ. ಭಯ, ಭಕ್ತಿಗಳನ್ನೊಳಗೊಂಡ ಆಚರಣೆಗಳು ಅವುಗಳನ್ನು ತೃಪ್ತಿಪಡಿಸುವ ಸಲುವಾಗಿ ಬೆಳೆದುಕೊಂಡು ಬಂದಿದೆ. ಈ ಕಾರಣದಿಂದ ಇವುಗಳು ನಮ್ಮ ಸಂಸ್ಕೃತಿಯ ಭಾಗಗಳಾಗಿಯೇ ಪರಿಗಣಿತವಾಗಿದೆ. ಹಾಗೆಯೇ ವ್ಯಕ್ತಿಯ ವ್ಯಕ್ತಿತ್ವ ಪರಿಸರದಲ್ಲಿ ಪ್ರವೇಶಿಸಿ ಅವನ ಜೀವಂತಿಕೆ ಹೆಜ್ಜೆಗಳನ್ನು ದೈಹಿಕ ಹಾಗೂ ಮಾನಸಿಕ ನೆಲೆಗಳಲ್ಲಿ ಗುರುತಿಸಿಕೊಳ್ಳಲು ಸಹಾಯಕವಾಗಿದೆ.

ಮಾದಿಗ ಸಮುದಾಯದವರು ವಿಶಿಷ್ಟವಾದ ಆಚರಣೆಗಳನ್ನು ಆಚರಿಸುವುದು ಕಂಡು ಬರುತ್ತಿದೆ. ಈ ಸಮುದಾಯದವರು ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ದೈವಗಳನ್ನು ಪೂಜಿಸುತ್ತಾರೆ. ಕೆಲವಡೆ ಸ್ತ್ರೀ ದೇವತೆಯನ್ನು ತಮ್ಮ ಮನೆಯ ದೇವರಾಗಿ ಪೂಜಿಸಿದರೆ ಇನ್ನು ಕೆಲವಡೆ ಪುರುಷ ದೇವರನ್ನು ತಮ್ಮ ಮನೆಯ ದೇವರನ್ನಾಗಿ ಪೂಜಿಸುವರು. ಕೊಪ್ಪಳ ನಗರದ ಮಾದಿಗ ಸಮುದಾಯದವರು ಸ್ತ್ರೀ ದೇವತೆಯನ್ನು ಪೂಜಿಸುತ್ತಾರೆ. ಶ್ರೀಕ್ಷೇತ್ರ ಹುಲಿಗಿದೇವಿ, ಗಾಳೆಮ್ಮದೇವಿ, ಸ್ವಾರೆಮ್ಮದೇವಿ ಇನ್ನಿತರ ಸ್ತ್ರೀದೇವರನ್ನು ಪೂಜಿಸುತ್ತಾರೆ.

೪.೧ ಜೀವನಾವರ್ತನ ಆಚರಣೆಗಳು :

ಜೀವನಾವರ್ತನವು ಮನುಷ್ಯನ ಹುಟ್ಟಿನಿಂದ ಪ್ರಾರಂಭವಾಗಿ ಸಾವಿನಲ್ಲಿ ಕೊನೆಗೊಳ್ಳುತ್ತದೆ. ಇವುಗಳ ನಡುವೆ ಅನೇಕ ಹಂತಗಳಿರುತ್ತವೆ. ಇಂತಹ ಸಂದರ್ಭದಲ್ಲಿ ನಡೆಸುವ ಆಚರಣೆಗಳನ್ನು ವಿಧಿಗಳು ಅಥವಾ ಪರಿವರ್ತನೆಯ ವಿಧಗಳೆಂದು ಕರೆಯುತ್ತಾರೆ. ಇಂತಹ ವಿಧಿ ಆಚರಣೆಗಳು ಕಾಲದಿಂದ ಕಾಲಕ್ಕೆ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿರುತ್ತಾ ಹೋಗುತ್ತವೆ.

ಹುಟ್ಟಿನ ಆಚರಣೆ, ನಾಮಕರಣ, ಮೈನೆರೆಯುವಿಕೆ, ಮದುವೆ, ಸೀಮಂತ ಮತ್ತು ಸಾವಿನ ಆಚರಣೆ ಹೀಗೆ ವೈವಿಧ್ಯಮಯ ಸಮಾಜವು ಒಂದು ವ್ಯಕ್ತಿಯನ್ನು ಅಂಗೀಕರಿಸುವಂತೆ ಮಾಡುವಲ್ಲಿ ಈ ಜೀವನಾವರ್ತನದ ವಿಧಿ ಆಚರಣೆಗಳು ನೆರವಾಗುತ್ತವೆ. ಈ ಸಂದರ್ಭದಲ್ಲಿ ನಡೆಸುವ ಆಚರಣೆಗಳು ವ್ಯಕ್ತಿಯ ಭೌತಿಕ, ಸಾಮಾಜಿಕ ಸ್ಥಿತಿಗತಿಯಲ್ಲಿ ಬದಲಾವಣೆಯನ್ನು ತರುತ್ತದೆ.

೪.೧.೧ ಜನನ :

ಸಾಮಾನ್ಯವಾಗಿ ಎಲ್ಲ ಜನಾಂಗಗಳಲ್ಲಿಯೂ ಹುಟ್ಟು, ಸಾವಿನ ಆಚರಣೆಗಳು ಕಂಡುಬರುತ್ತಿವೆ. ಗರ್ಭಧರಿಸಿ ಒಂಭತ್ತು ತಿಂಗಳ ಬಳಿಕ ಹೆರಿಗೆಯಾಗುವಾಗ ಸೂಲಗಿತ್ತಿ ಬಂದು ಹೆರಿಗೆಯನ್ನು ಮಾಡಿಸಿ ಕೂಸಿನ ಮಾಸವನ್ನು ಒಂದು ಪಾತ್ರೆಯಲ್ಲಿ ಹಾಕಿಮುಚ್ಚುವರು. ದನದ ಕೊಟ್ಟಿಗೆ ಇಲ್ಲದವರು ಮನೆಯ ಹಿತ್ತಲಲ್ಲಿ ಮುಚ್ಚುವರು. ಕೂಸನ್ನು ಸ್ವಚ್ಛವಾಗಿ ತೊಳೆದು, ಮೃದುವಾದ ಬಟ್ಟೆಯಿಂದ ಮೈ ಒರೆಸುವುದು ಮತ್ತು ತಾಯಿಗೂ ನೀರನ್ನು ಹಾಕುವರು. ತಾಯಿ ಮತ್ತು ಮಗುವನ್ನು ಪ್ರತ್ಯೇಕವಾದ ಕೋಣೆಯೊಳಗೆ ಮೃದುವಾದ ಹಾಸಿಗೆಯಲ್ಲಿ ಮಲಗಿಸುವರು. ಯಾವುದೇ ಸೋಂಕು ಆಗಬಾರದೆಂದು ಪ್ರತ್ಯೇಕ ಕೋಣೆಯಲ್ಲಿ ಮಲಗಿಸುವರು. ಹೆರಿಗೆಯ ನಂತರ ಸೂಲಗಿತಿಯನ್ನು ಹೊಸ ಸೀರೆ ಉಡಿಸಿ ಎಲೆ-ಅಡಿಕೆ ಉಡಿಯಲ್ಲಿ ದಕ್ಷಿಣೆ ಹಾಕಿ ಕಳುಹಿಸುವರು. ಬಾಣಂತಿಗೆ ತೇವಾಂಶರಹಿತದಿಂದ ಬೆಚ್ಚಗಿಡಲು ದಿನಕ್ಕೆ ಎರಡು ಸಾರಿ ಶೀತದಿಂದ ರಕ್ಷಿಸಲು ಕಬ್ಬಿಣದ ಬುಟ್ಟಿಯೊಳಕ್ಕೆ ಬೆಂಕಿ ಕಾವು ಹಾಕಿ ಕೊಡಿಸುವರು. ಅದರಂತೆ ಕೂಸಿಗೆ ಪ್ರತಿದಿನ ಎಣ್ಣೆ ಸವರಿ ಬಿಸಿ ನೀರಿನಿಂದ ಸ್ನಾನ ಮಾಡಿಸುವರು. ಮಗು ಹುಟ್ಟಿದ ಜಾತಕವನ್ನು ಕೇಳುವರು. ಆಗಲೇ ಮಗುವಿನ ಹುಟ್ಟಿದ ನಕ್ಷತ್ರ, ಕುಲ, ಗೋತ್ರ, ರಾಶಿ, ಜನ್ಮನಾಮ ಮುಂತಾದವನ್ನು ಜೋತಿಷ್ಯಗಳಿಂದ ಬರೆಯಿಸಿ ಇಡುತ್ತಾರೆ.

೪.೧.೨ ಸೂತಕ :

ಮಗು ಹುಟ್ಟಿ ಐದು ದಿನಗಳ ಮೇಲೆ ಸೂತಕವನ್ನು ಹೋಗಲಾಡಿಸಲು ಮನೆಯನ್ನು ಸಂಪೂರ್ಣವಾಗಿ ಸಾರಿಸಿ ಗೋಮೂತ್ರವನ್ನು ಸಿಂಪಡಿಸುವರು. ಸಾವಿನ ಸಂದರ್ಭದಲ್ಲಿಯ ಹೊಲೆಗಿಂತ ಹೆತ್ತಾಗಿನ ಹೊಲೆಯು ಹೆಚ್ಚು ಗಾಢವಾದುದು ಎಂಬ ನಂಬಿಕೆ ಇದೆ. ಅದಕ್ಕಾಗಿಯೇ ಮನೆಯ ಎಲ್ಲಾ ಹಾಸಿಗೆ ಹೊದಿಕೆಗಳನ್ನು ಸ್ವಚ್ಛಗೊಳಿಸುವರು, ನಂತರ ಪೂಜೆಯನ್ನು ಮಾಡುವರು. ಇಂತಹ ಸೂತಕದ ದಿನಗಳಲ್ಲಿ ಮನೆಯಲ್ಲಿ ಶುಭಕಾರ್ಯಗಳು ನಡೆಯುವುದಿಲ್ಲ. ದೇವರಿಗೆ ಹಣ್ಣು-ಕಾಯಿ, ಕರ್ಪೂರ ನಡೆಯುವದಿಲ್ಲ. ಹಬ್ಬ ಹರಿದಿನಗಳಲ್ಲಿ ಮಗು ಜನಿಸಿದರೆ ಮನೆಯಲ್ಲಿ ಹಬ್ಬ ಆಚರಿಸುವುದಿಲ್ಲ.

೪.೧.೩ ನಾಮಕರಣ ಅಥವಾ ಹೆಸರಿಡುವುದು :

ಮಾದಿಗ ಸಮುದಾಯದವರ ಮನೆತನಗಳಲ್ಲಿ ನಿರ್ಧಿಷ್ಟವಾಗಿ ಹನ್ನೆರಡು, ಹದಿಮೂರು, ಇಪ್ಪತ್ತೊಂದು, ದಿನಗಳಲ್ಲಿ ಹೆಸರಿಡುವ ಪದ್ಧತಿ ಇದೆ. ಈ ಕಾರ್ಯ ಮಾಡುವಾಗಲೂ ಮನೆಯನ್ನು ಶುಚಿಗೊಳಿಸುತ್ತಾರೆ. ತಮ್ಮ ಸಮುದಾಯದ ಹಾಗೂ ಅಕ್ಕಪಕ್ಕದ ಹೆಣ್ಣು ಮಕ್ಕಳನ್ನು ಈ ಕಾರ್ಯಕ್ಕೆ ಕರೆಯುತ್ತಾರೆ. ಈ ತೊಟ್ಟಿಲು ಕಾರ್ಯಕ್ಕೆ ಕೆಲ ಆಹಾರ ಸಾಮಾಗ್ರಿಗಳು ಬೇಕಾಗುತ್ತವೆ. ಕಡಲೆ ಮತ್ತು ಜೋಳವನ್ನು ಕುದಿಸಿ ಎರಡೂ ಸೇರಿಸಿ ಸೋಸಿ ಒಂದು ಅರಿವೆಯಲ್ಲಿ ಗಂಟನ್ನು ಕಟ್ಟಿ ತೊಟ್ಟಿಲೊಳಗೆ ಇಡುತ್ತಾರೆ. ಇವುಗಳಿಗೆ

ಶೆಟ್ಟಿಕವ್ವನ ಗುಗ್ಗರಿ ಎಂದು ಹೇಳುವರು ಮಗುವಿಗೆ ಸೋದರತ್ತೆಯು ಹೆಸರಿಡಬೇಕೆಂಬ ವಾಡಿಕೆಯಿದೆ. ಹೆಸರನ್ನು ಇಟ್ಟಮೇಲೆ ತೊಟ್ಟಿಲೊಳಗೆ ಇಟ್ಟು ಆ ಗುಗ್ಗರಿಯ ಗಂಟು ಕೈಯಿಂದ ಮುಟ್ಟದೆ ಬಾಯಿಯಿಂದ ಹಿಡಿದು ಮೇಲಕ್ಕೆ ತೆಗೆದುಕೊಳ್ಳಬೇಕು.

ಮಗುವಿಗೆ ಹೆಸರಿಡುವಾಗ ಮೊದಲು ಮನೆಯ ದೇವರ ಹೆಸರನ್ನು ಇಟ್ಟು, ನಂತರ ಮನೆಯ ಹಿರಿಯರ ಹೆಸರಿಟ್ಟು ಜನ್ಮದ ಹೆಸರು ಇಡುತ್ತಾರೆ. ಆ ಮೇಲೆ ಕರೆಯುವ ಹೆಸರಿನಿಂದ ಸಂಭೋದಿಸುವುದುಂಟು. ಈ ತೊಟ್ಟಿಲು ಕಾರ್ಯಕ್ಕೆ ಮುತ್ತೈದೆಯರು, ಸಂಬಂಧಿಕರು, ಸ್ನೇಹಿತರನ್ನು ಸಂಬಂಧಿಕರ ನೆರೆ ಹೊರೆಯವರು, ಸ್ನೇಹಿತರನ್ನು ಆಹ್ವಾನಿಸುತ್ತಾರೆ. ತೊಟ್ಟಿಲ ಒಂದು ಬದಿಗೆ ಮಗುವಿನ ತಾಯಿಯನ್ನು ಕುಳ್ಳಿರಿಸಿರುತ್ತಾರೆ. ತೊಟ್ಟಿಲದ ಕೆಳಗೆ ಗುಗ್ಗರಿಯನ್ನು ಹಾಕಿ ನೀರು ತುಂಬಿದ ಚರಿಗೆಯನ್ನು ಇಟ್ಟು ಅದಕ್ಕೆ ಆ ಬಾಣಂತಿಯ ತಾಳಿಯನ್ನು ಹಾಕಿ ಅದರ ಪಕ್ಕದಲ್ಲಿ ಒಂದು ಕಣವನ್ನು ಇಟ್ಟು ದೀಪವನ್ನು ಹಚ್ಚುತ್ತಾರೆ. ಇಷ್ಟೆಲ್ಲ ಮಾಡಿಕೊಂಡು ಸಂತೋಷದಿಂದ ಹಾಡುತ್ತ ಮಗುವನ್ನು ತೊಟ್ಟಿಲೊಳಗೆ ಮಲಗಿಸಿ ಜೋಗುಳದ ಹಾಡನ್ನು ಹೇಳುವರು. ಮಾದಿಗರ ಸಮುದಾಯದವರು ಈ ಕಾರ್ಯಕ್ರಮದಲ್ಲಿ ಮಾಂಸದ ಅಡಿಗೆ ಮಾಡುವ ವಾಡಿಕೆಯೂ ಇದೆ. ಕೆಲವರು ಸಸ್ಯಹಾರದ ಅಡಿಗೆ ಮಾಡಿ ಬಂದಂತಹ ಅತಿಥಿಗಳಿಗೆ ಊಟ ಮಾಡಿಸುತ್ತಾರೆ.

೪.೧.೪ ಋತುಮತಿ :

ಸ್ತ್ರೀಯು ತಾರುಣ್ಯದ ಹೊಸ್ತಿಲು ಮುಟ್ಟಿದಳು ಎನ್ನುವುದಕ್ಕೆ ಋತುಮತಿ ಎನ್ನುವರು. ಈ ಋತುಮತಿ ಎನ್ನುವದಕ್ಕೆ ಪ್ರದೇಶಗಳಿಗನುಗುಣವಾಗಿ ಪರ್ಯಾಯ ಶಬ್ದವನ್ನು ಬಳಸಿಕೊಳ್ಳುತ್ತಾರೆ. ಮೈನೆರೆದವರು, ದೊಡ್ಡವಳಾದವಳು, ಹರೆಯಕ್ಕೆ ಬಂದಳು, ಮದುವೆಗೆ ಬಂದವಳು ಎಂದು ಮುಂತಾಗಿ ಹೇಳುವರು. ಕೊಪ್ಪಳ ಭಾಗದಲ್ಲಿ ಸಾಮಾನ್ಯವಾಗಿ ದೊಡ್ಡವಳಾಗಿದ್ದಾಳೆ ಎಂಬ ಪದವನ್ನು ಬಳಸುವರು.

ಋತುಮತಿಯಾದ ಮನೆಯನ್ನು ಸೂತಕವೆಂದು ಭಾವಿಸಿ ವಾರ, ನಕ್ಷತ್ರ, ದಿನ ಇವೆಲ್ಲವನ್ನು ಜೋತಿಷ್ಯರ ಹತ್ತಿರ ಕೇಳಿಬರುತ್ತಾರೆ. ಮೈನೆರೆದ ಕನ್ಯೆಯನ್ನು ಮನೆಯ ಒಂದು ಬದಿಯಲ್ಲಿಯೇ ಕೂರಿಸುತ್ತಾರೆ. ದೇವರ ಮನೆ ಅಥವಾ ಕೋಣೆಯೊಳಗೆ ಅವಳು ಹೋಗುವಂತಿಲ್ಲ. ಪ್ರತಿದಿನ ಬೇವಿನ ತಪ್ಪಲದ ರಸ, ಅರಿಶಿಣ ಮತ್ತು ಎಣ್ಣೆಯನ್ನು ಹಚ್ಚಿ ಸ್ನಾನಮಾಡಿಸಿ, ಮಡಿಯಾದ ಬಟ್ಟೆ ತೊಡಿಸುವರು. ಊಟಕ್ಕೆ ಸಿಹಿ ಅಡುಗೆ, ಕೊಬ್ಬರಿ, ಬೆಲ್ಲ ತುಪ್ಪ ಮತ್ತಿತರ ಪದಾರ್ಥಗಳನ್ನು ಅವಳಿಗೆ ಕೊಡುವರು, ಮನೆಯ ಅಕ್ಕ ಪಕ್ಕದವರು, ಬಂಧು ಬಳಗದವರು ನಾನಾ ತರಹದ ಸಿಹಿ ಅಡಿಗೆ ಮಾಡಿ ಖರ್ಚಿಕಾಯಿ, ಕಡುಬು ತಯಾರಿಸಿ ತಂದು ಆ ಮನೆಯವರಿಗೆ ಊಟ ಮಾಡಿಸುವ ಪದ್ಧತಿಯಿದೆ. ಸಂಜೆಯ ವೇಳೆಗೆ ಅವಳನ್ನು ಅಲಂಕಾರ ಮಾಡಿ ಮಂಟಪದಲ್ಲಿ ಅವಳನ್ನು ಕೂಡಿಸಿ ಬಂಧು-ಬಳಗವನ್ನು ಕರೆದು ಹಿರಿಯ ಹೆಂಗಸರನ್ನು

ಕರೆದು ಸೋಬಾನ ಪದಗಳನ್ನು ಹಾಡಿಸುವರು. ಆಗ ಮೈನೆರೆದ ಹೆಣ್ಣು ಆ ಪದಗಳಲ್ಲಿರುವ ಒಳ್ಳೆಯ ನೀತಿ, ರೀತಿ ನಡವಳಿಕೆಗಳನ್ನು ಆಕೆಯ ಜೀವನ ಪರ್ಯಂತ ಪಾಲಿಸಲು ನೆನಪಿನಲ್ಲಿಟ್ಟು ಕೊಳ್ಳುವಳು. ಕೊನೆಗೆ ಅವಳಿಗೆ ಆರತಿ ಬೆಳಗಿಸುವರು. ಬಂದ ಕೇರಿಯ ಮಹಿಳೆಯರಿಗೆ ಚಹಾ, ಅಡಿಕೆ–ಎಲೆ ಹಂಚುವರು.

ಹೀಗೆ ಋತುಮತಿಯಾದವಳನ್ನು ಮನೆಯವರ ಶಕ್ತ್ಯಾನುಸಾರ ೫, ೭, ೯, ೧೧, ೨೧ದಿನಗಳ ವರಗೆ ಕೂಡಿಸುವರು. ಕೊನೆಯ ದಿನದಂದು ಬಂಧುಬಳಗದವರನ್ನು ಕರೆಯಿಸಿ ಸಿಹಿ ಅಡುಗೆ ಮಾಡಿ ಊಟಕ್ಕೆ ನೀಡುವರು. ಈ ಸಮುದಾಯದ ಕೆಲವೊಂದು ಮನೆಗಳಲ್ಲಿ ಈ ಕಾರ್ಯದಲ್ಲಿ ಮಾಂಸದ ಊಟವನ್ನು ಮಾಡುತ್ತಾರೆ. ಒಟ್ಟಾರೆ ಈ ಕಾರ್ಯದ ಉದ್ದೇಶ ಏನೆಂಬುದನ್ನು ಸಮುದಾಯಕ್ಕೆ ತಿಳಿಸುವುದಾಗಿದೆ. ಹಾಗೂ ಹೆಣ್ಣನ್ನು ಯಾವುದೇ ದೋಷವಿಲ್ಲದೆ ದೈಹಿಕವಾಗಿ ಯೋಗ್ಯಳನ್ನಾಗಿ ಮಾಡುವುದಾಗಿದೆ.

೪.೧.೫ ಮದುವೆ :

ವಿವಾಹ ಅಥವಾ ಮದುವೆ ಎಂಬುದು ಮಾನವನ ಜೀವನದ ಪ್ರಮುಖ ಘಟ್ಟವಾಗಿದೆ. ಸಮಾಜದಲ್ಲಿಯ ಎರಡು ಕುಟುಂಬಗಳ ನಡುವಿನ ಬೆಸುಗೆಯ ಕೊಂಡಿಯಾಗಿದೆ. ಮೂಲ ಉದ್ದೇಶದಿಂದ ಕುಟುಂಬದ ವಿಸ್ತಾರ ಬೆಳಯುತ್ತದೆ. ಸಾಮಾನ್ಯವಾಗಿ ತಂದೆಯ ಸಹೋದರಿಯ ಮಗಳೊಂದಿಗೆ ತಾಯಿಯ ಸಹೋದರನ ಮಗಳೊಂದಿಗೆ ಅಕ್ಕನ ಮಗಳೊಂದಿಗೆ ಮದುವೆಯ ಸಂಬಂಧಗಳು ನಡೆಯುತ್ತವೆ. ಪ್ರೌಢವಿವಾಹ ಪದ್ಧತಿಯು ರೂಢಿಯಲ್ಲಿದ್ದು, ಪರಸ್ಪರ ವಿಚಾರ ವಿನಿಮಯದಿಂದ ಮದುವೆಗಳು ನಿಶ್ಚಯವಾಗುತ್ತವೆ. ಏಕಪತ್ನಿತ್ವ ಮತ್ತು ಏಕಪತಿತ್ವ ಪದ್ಧತಿಯು ರೂಢಿಯಲ್ಲಿದೆ. ಹೆಣ್ಣು ಮಗಳಿಗೆ ಕುಂಕುಮ, ತಾಳಿ, ಕಿವಿಯೋಲೆ, ಮೂಗುತಿ, ಕಾಲುಂಗರ, ಬಳೆಗಳು ಇವು ಮದುವೆಯಲ್ಲಿ ಧರಿಸುವ ಚಿನ್ನದ ಬೆಳ್ಳಿಯ ಆಭರಣಗಳಾಗಿವೆ. ಸ್ತ್ರೀ ಪುರುಷರಿಬ್ಬರೂ ಮರುವಿವಾಹ ಮಾಡಿಕೊಳ್ಳುವ ಅವಕಾಶ ಇರುತ್ತದೆ.

ವಧು ವರರ ಆಯ್ಕೆ :

ಹೆಣ್ಣಿರುವ ಮನೆಗೆ ಗಂಡಿರುವವರು ಕನ್ಯೆ ನೋಡಲು ಬರುವ ಪದ್ಧತಿಯೂ ಈ ಜನಾಂಗದವರಲ್ಲಿದೆ. ಮತ್ತು ಜಾತಿ, ಬೆಡಗು, ಕಂಕಣಬಲ, ಮತ್ತು ದೇವರುಗಳ ಬಗೆಗೆ ತಿಳಿದುಕೊಂಡು ತಮಗೂ ಅವರಿಗೂ ಸರಿ ಬಂದರೆ ಹೇಳಿ ಕಳಿಸುವರು. ಬೆಡಗುಗಳು ಎರಡೂ ಒಂದೇ ಆಗಿರಬಾರದು ಎಂಬ ಪದ್ಧತಿ ಇಲ್ಲಿ ಕಂಡುಬರುತ್ತದೆ. ಏಕೆಂದರೆ ಒಂದೇ ಬೆಡಗಿನವರು ಸಹೋದರತೆಯ ರಕ್ತ ಸಂಬಂಧಿಗಳಾಗುತ್ತಾರೆ ಎಂಬ ನಂಬಿಕೆ ಇವರಲ್ಲಿದೆ. ಗಂಡು ಹೆಣ್ಣಿನ ಬಗೆಗೆ ಪಂಚಾಂಗದಲ್ಲಿ ಸಾಲಾವಳಿ ನೋಡಿಕೊಂಡು ಅದರಲ್ಲಿ ಒಳ್ಳೆಯ ಅಂಶಗಳು, ಗುಣಗಳು, ಬಂದರೆ ಮಾತ್ರ ಕನ್ಯೆ ನೋಡಲು ಹೋಗುವರು.

ವಧುವಿಗೆ ಹಣ್ಣು ಕಾಯಿ ಉಡಿಯಲ್ಲಿ ಇಡುವುದು :

ಗಂಡಿನ ಕಡೆಯವರು ವಧುನೋಡಲು ಬಂದಾಗ ಗಂಡಿನ ಕಡೆಯ ಮಹಿಳೆಯರು ಒಳಗಡೆ ಕರೆದು ಕಣ್ಣು, ಕೈ ಬೆರಳು, ಕಾಲು ಬೆರಳುಗಳನ್ನು ನೋಡುತ್ತಾರೆ. ಅಂಗಹೀನತೆ ಕಂಡು ಬಂದರೆ ಮದುವೆಗೆ ಒಪ್ಪುವುದಿಲ್ಲ. ಸರಿಯಿದ್ದರೆ ಮದುವೆಗೆ ಒಪ್ಪಿಕೊಂಡು ವಧುವಿನ ಉಡಿಯಲ್ಲಿ ಬಾಳೆಹಣ್ಣು, ಹೂ, ಎಲೆ–ಅಡಿಕೆ, ಹಾಕಿ ಉಡಿತುಂಬುತ್ತಾರೆ. ಇದಕ್ಕೆ ಹಣ್ಣು ಕಾಯಿ ಇಡುವುದು ಎಂದು ಕರೆಯುತ್ತಾರೆ.

ಬೀಗತನ ಬೆಳೆಸುವುದು :

ಗಂಡಿನ ಕಡೆಯವರಿಗೆ ಹೆಣ್ಣು ಮನಸ್ಸಿಗೆ ಬಂದರೆ ಊರಿನ ಅಥವಾ ಕೇರಿಯ ಪಂಚರು, ಹಿರಿಯರು ಸಮ್ಮುಖದಲ್ಲಿ ಮಾತುಕತೆ ನಡೆಸಿ, ಬಾಯಿಗೆ ಸಕ್ಕರೆಯನ್ನು ಹಾಕುತ್ತಾರೆ. ಬಾಯಲ್ಲಿ ಸಕ್ಕರೆ ಹಾಕಿದರೆ ಬೀಗತನವಾದಂತೆ. ಇದೇ ವೇಳೆಯಲ್ಲಿ ಹೆಣ್ಣಿನವರು ಗಂಡಿನವರಿಗೆ ಕೊಡಬೇಕಾದ ವರದಕ್ಷಿಣೆ ವರೋಪಚಾರ, ಯಾರ ಕಡೆಗೆ ಮದುವೆ ಮಾಡುವದು, ಮದುವೆಯ ದಿನ ತಾರೀಖು ಇತ್ಯಾದಿಗಳಲ್ಲವೂ ಇಲ್ಲಿಯೇ ನಿರ್ಧಾರವಾಗುತ್ತದೆ.

ಮದುವೆಯ ಆಚರಣೆಗಳು :

ಮದುವೆಗಳು ಯಾವಾಗಲೂ ಕಾರ್ತಿಕಮಾಸ, ವಸಂತಮಾಸ, ಮತ್ತು ಜೇಷ್ಠಮಾಸಗಳಲ್ಲಿಯೇ ನಡೆಯುತ್ತವೆ. ಒಳ್ಳೆಯ ಶುಭದಿನದಂದು, ಮದುವೆಯ ಕಾರ್ಯಗಳನ್ನು ಆರಂಭಿಸುತ್ತಾರೆ. ಕೊನೆಯ ಗಂಡು ಮಗನ ಮದುವೆಯನ್ನು ಕೊನೆಗೆ ಮಾಡಬಾರದೆಂಬ ನಂಬಿಕೆ ಈ ಜನಾಂಗದಲ್ಲಿದೆ. ಏಕೆಂದರೆ ಕೊನೆಯ ಮಗನಿಗೆ ಕಡೆಗಣಿಸಿದಂತಾಗುತ್ತದೆಂಬ ನಂಬಿಕೆಯಿಂದ ಹಿರಿಮಗನ ಮದುವೆಯ ಸಮಯದಲ್ಲಿ ಕೊನೆಯ ಗಂಡುಮಗನಿಗೆ ಆ ಸಂದರ್ಭದಲ್ಲಿ ಮದುವೆಯ ನಿಯಮ ಮಾಡುವ ಪದ್ಧತಿ ಇದೆ.

ಲಗ್ನದ ಕಾರ್ಯ :

ಮದುವೆಯ ಪೂರ್ವದಲ್ಲಿ ಲಗ್ನದಕಾರ್ಯ ಮಾಡುವ ಪದ್ಧತಿ ರೂಢಿಯಲ್ಲಿದೆ. ಈ ಲಗ್ನದ ಕಾರ್ಯಮಾಡುವಾಗ ಹಿರಿಯರ ಪೂಜೆ ಮಾಡುವ ವಾಡಿಕೆಯಿದೆ. ಈ ಪೂಜೆಗೆ ಕೆಲವರು ಕುರಿಯನ್ನು ಬಲಿಕೊಡುತ್ತಾರೆ. ಇನ್ನೂ ಕೆಲವರು ಪ್ರತ್ಯೇಕ ಮಾಂಸವನ್ನು ಖರೀದಿಸಿ ತಂದು ಅಡಿಗೆ ಮಾಡುತ್ತಾರೆ. ಈ ಹಿರಿಯರ ಪೂಜೆ ಮಾಡುವಾಗ ಎಲ್ಲಮ್ಮ, ಗಾಳೆಮ್ಮ, ಹುಲಿಗೆಮ್ಮ, ಸ್ವಾರಮ್ಮ, ಪರುಶುರಾಮ ದೇವರ ಬೆಳ್ಳಿಯ ಮುಖವನ್ನು ಮಾಡಿಸಿ ಹಾಗೂ ಮನೆಯ ಹಿರಿಯರು ತೀರಿಕೊಂಡಿದ್ದರೆ, ಅವರ ಮುಖವನ್ನು ಬೆಳ್ಳಿಯಿಂದ ಮಾಡಿಸಿ ಹಾಲು ತುಪ್ಪದಲ್ಲಿ ತೊಳೆದು ಪೂಜೆ ಮಾಡುವರು. ಕಂಚಿನ ಬಟ್ಟಲಿನಲ್ಲಿ ಅನ್ನ, ಚಪಾತಿ, ಮಾಂಸ, ಬೆಲ್ಲ ಇಟ್ಟು ಎಡೆ ಮಾಡುತ್ತಾರೆ.

ಲಗ್ನಪತ್ರ ಕಟ್ಟಿಸುವುದು :

ವಿವಾಹದ ಎರಡು ದಿನ ಮೊದಲು ಗುರು ಹಿರಿಯರು ಮತ್ತು ಮನೆಯ ಯಜಮಾನರ ಸಮ್ಮುಖದಲ್ಲಿ ಲಗ್ನ ಪತ್ರಿಕೆ ಬರೆಯಿಸಿ ಒಂದು ಹೊಸ ಕೆಂಪು ಬಟ್ಟೆಯಲ್ಲಿ ಧಾನ್ಯ, ಕೊಬ್ಬರಿ, ಉತ್ತತ್ತಿ ಅರಿಷಣ, ಎಲೆ, ಕುಂಕುಮವನ್ನು ಜಗಲಿಯ ಮೇಲಿಟ್ಟು ಪೂಜೆ ಮಾಡುವರು.

ಸುರಗಿನೀರು ಹಾಕುವುದು :

ಅರಿಷಿಣ ಹಚ್ಚಿದ ನಂತರ ನಾಲ್ಕು ದಿಕ್ಕಿಗೆ ನಾಲ್ಕು ನೀರು ತುಂಬಿದ ಚರಿಗೆ ಅಥವಾ ಮಣ್ಣಿನ ಮಡಿಕೆಗಳನ್ನು ಇಟ್ಟು ಅವುಗಳಿಗೆ ನೂಲಿನ ದಾರದ ಎಳೆಯನ್ನು ಸುತ್ತುವರು. ಈ ದಾರವನ್ನು ಐದು ಎಳೆಯಾಗಿ ಸುತ್ತುವರು. ಜೊತೆಗೆ ಕಳಸವು ಮಡಿಕೆಯ ಜೊತೆಗೆ ಇರುತ್ತದೆ. ಇದರಲ್ಲಿ ಸಮಂಗಲೆಯರೆ ಹೆಚ್ಚಾಗಿ ಭಾಗವಹಿಸುವರು. ವಧುವರರಿಗೆ ತಲೆಯ ಮೇಲೆ ಎಣ್ಣೆಯನ್ನು ಹಾಕಿ ತುಂಬಿದ ಕೊಡದಿಂದ ನೀರನ್ನು ಹಾಕಿ ಸ್ನಾನ ಮಾಡಿಸುವರು, ನಂತರ ವರನಿಗೆ ಉಡಲು ಪಂಚೆ ಅಂಗಿ ಗಾಂಧೀಟೊಪಿಗೆ ಧರಿಸಲು ಕೊಡುವರು. ವಧುವಿಗೆ ಅರಿಷಿಣದ ಸೀರೆಯನ್ನು (ಅರಿಷಿಣದ ಪತ್ತಲು) ಉಡಿಸುವರು. ಇದರಲ್ಲಿ ಯಾರು ಬೇಗನೆ ಬಟ್ಟೆಧರಿಸುವರೋ ಅವರು ಒಳ್ಳೆಯ ಚಟುವಟಿಕೆಯರೆಂದು ತುಂಬಿದ ಜನರು ವಿನೋದಕ್ಕಾಗಿ ತೀರ್ಮಾನಿಸುತ್ತಾರೆ. ನಂತರ ಕೈಗಳಿಗೆ ಕಂಕಣಗಳನ್ನು ಕಟ್ಟಿ ಒಳಗೆ ಕರೆದುಕೊಳ್ಳುತ್ತಾರೆ.

ತಾಳಿ ಪೋಣಿಸುವುದು :

ವಧು ಮತ್ತು ವರ ಸೇರಿಕೊಂಡು ಬಿಳಿನೂಲಿನ ದಾರದಲ್ಲಿ ಬಂಗಾರದ ತಾಳಿ ಹಾಗೂ ಕರಿಮಣಿಯನ್ನು ಪೋಣಿಸುವ ಪದ್ಧತಿ ಇವರಲ್ಲಿದೆ. ನಂತರ ವಧುವರರಿಗೆ ಮುತ್ತಿನ ಅಥವಾ ಬೆಂಡಿನ ಬಾಸಿಂಗವನ್ನು ಕಟ್ಟಿ ವರನಿಂದ ವಧುವಿಗೆ ತಾಳಿಯನ್ನು ಕಟ್ಟಿಸಿ ಅಕ್ಷತೆ (ಅಕ್ಕಿಕಾಳು) ಹಾಕುವರು. ಇದಕ್ಕೆ ಒಳಗಿನ ಅಕ್ಕಿಕಾಳು ಎಂದು ಹೇಳುವರು. ನಂತರ ವಧುವರರು ಹಿರಿಯರಿಗೆ ಹಾಗೂ ದೇವರಿಗೆ ನಮಸ್ಕರಿಸಿ ಹೊರಗೆ ಹಂದರದಲ್ಲಿ ಹಾಕಿದ ಮಂಟಪಕ್ಕೆ ಕರೆತಂದು ಕುಳ್ಳಿರಿಸುವರು. ಇಲ್ಲಿ ಸಾಮೂಹಿಕ ಅಕ್ಕಿಕಾಳು ಕಾರ್ಯಕ್ರಮ ನಡೆಯುತ್ತದೆ. ವಧುವರರ ತಲೆಯ ಮೇಲೆ ಅಕ್ಕಿಕಾಳು ಹಾಕಿ ಶುಭಾಶಯ ಹೇಳುತ್ತ ವಧುವಿಗೆ ವರನ ಹೆಸರು ಕೇಳುವುದು, ವರನಿಗೆ ವಧುವಿನ ಹೆಸರು ಕೇಳುವುದು ಇತ್ಯಾದಿ ಕಾರ್ಯಕ್ರಮಗಳು ನಡೆಯುತ್ತವೆ. ಈ ಕಾರ್ಯಮುಗಿದ ನಂತರ ಮದುಮಕ್ಕಳು (ವಧು ವರರ) ಬಾಸಿಂಗವನ್ನು ಬಿಚ್ಚುವರು. ಅವರನ್ನು ಮನೆಯ ದೇವರ ಜಗಲಿಗೆ ಕರೆದುಕೊಂಡು ಹೋಗಿ ನಮಸ್ಕಾರ ಮಾಡಲು ಹೇಳುವರು.

ಹೀಗೆ ಹಲವಾರು ಮದುವೆಯ ಆಚರಣೆಗಳು ಈ ಜನರಲ್ಲಿ ಕಂಡು ಬರುತ್ತವೆ. ಮದುವೆಯಾದ ದಿನ ಹಂದರದ ದೀಪವನ್ನು ನೋಡಬಾರದೆಂಬ ನಂಬಿಕೆಯೂ ಇದೆ. ಮತ್ತು ಮದುವೆಯಾದ ಒಂದು

ವರ್ಷದವರೆಗೆ ಕಸಬರಿಗೆ ಹಾಗೂ ಉಪ್ಪನ್ನು ಖರೀದಿಸುವಂತಿಲ್ಲ. ಮನೆಗೆ ಸುಣ್ಣ ಬಣ್ಣವನ್ನು ಹಚ್ಚುವುದಿಲ್ಲ. ಇಂತಹ ವಿವಿಧ ನಂಬಿಕೆಗಳು ಈ ಮಾದಿಗ ಸಮುದಾಯದವರಲ್ಲಿ ಕಂಡು ಬರುತ್ತವೆ.

ಗೃಹ ಪ್ರವೇಶ :

ಅಂದರೆ ಹೊಸ ಮೊದಲಗಿತ್ತಿಗೆ ಮನೆ ತುಂಬಿಸಿಕೊಳ್ಳುವುದು ಮದುವೆಯ ದಿನವೇ. ಮದುವೆಯ ಮನೆಯವರು ಅನೇಕ ವಿಧಿ ವಿಧಾನಗಳೊಂದಿಗೆ ವಧುವನ್ನು ವರನ ಮನೆಗೆ ತುಂಬಿಸಿಕೊಳ್ಳುವರು ವರನ ಮನೆಯ ಹೊಸ್ತಿಲು ಮೇಲೆ ಒಂದು ಸೇರನ್ನು ಇಟ್ಟು ಅದರೊಳಗೆ ಅಕ್ಕಿ ಮೇಲೆ ಬೆಲ್ಲದ ತುಂಡನ್ನು ಇಟ್ಟು ವಧುವು ಬಲಗಾಲನಿಂದ ಅದನ್ನು ಒದ್ದು ಮನೆಯೊಳಗೆ ಹೋಗುವಳು. ಮತ್ತು ಹೊಸ್ತಿಲಿಗೆ ಎರಡು ಮಳೆಯನ್ನು ಬಡಿಯುವರು.

೪.೧.೬ ಸೀಮಂತ (ಕುಬಸದ ಕಾರ್ಯ)

ಚೊಚ್ಚಲ ಬಸುರಿಯಾದರೆ ಕುಬಸಮಾಡುವ ಕಾರ್ಯಕ್ಕೆ ಸೀಮಂತ ಎನ್ನುವರು. ತವರಿನಲ್ಲಿರುವ ಮಗಳಿಗೆ ಬಯಕೆಯ ಬುತ್ತಿತರುವ ಸಂಪ್ರದಾಯವಿದೆ. ಗಂಡು ಹೆಣ್ಣನ್ನು ಅಲಂಕರಿಸಿದ ಮಂಟಪದಲ್ಲಿ ಕೂಡ್ರಿಸಿ ಮಹಿಳೆಯರು ಆರತಿ ಎತ್ತುವರು. ಪದ ಹಾಡುವರು, ನಂತರ ಸಂಬಂಧಿಕರಿಗೆ ನೆರೆಹೊರೆಯವರಿಗೆ ಆ ದಿನ ಸಿಹಿ ಊಟ ಹಾಕುವರು. ನಂತರ ತವರಿನವರು ಮಗಳನ್ನು ಹೆರಿಗೆಗಾಗಿ ತವರಿಗೆ ಕರೆದುಕೊಂಡು ಹೋಗುವರು. ಈ ಪದ್ಧತಿ ಈ ಸಮುದಾಯದಲ್ಲಿ ಕಂಡು ಬರುತ್ತದೆ.

೪.೧.೭ ಮರಣ (ಸಂಸ್ಕಾರ ಮತ್ತು ವಿಧಿವಿಧಾನಗಳು)

ಸಾಮಾನ್ಯವಾಗಿ ಎಲ್ಲಾ ಜಾತಿಯಲ್ಲಿ ಕಂಡು ಬರುವಂತ ಮಾದಿಗ ಸಮುದಾಯದವರಲ್ಲಿಯೂ ಸತ್ತ ವ್ಯಕ್ತಿಯ ಶವವನ್ನು ಹೂಳುವ, ಮಣ್ಣು ಮಾಡುವ, ಸುಡುವ ಎರಡು ಪದ್ಧತಿಗಳಿವೆ. ಇವರಲ್ಲಿ ಸತ್ತ ತಕ್ಷಣ ಮೈತೊಳೆದು, ಗೋಡೆಗೆ ಕುಳ್ಳಿರಿಸಿ, ಕುತ್ತಿಗೆಗೆ ಎರಡು ಕತ್ತರಿ ಆಕಾರದ ಬಿದಿರಿನ ಕಟ್ಟಿಗೆಗಳನ್ನು ಕಟ್ಟುವರು. ಈ ಜನಾಂಗದಲ್ಲಿ ಮದುವೆಯಾದವರನ್ನು ಗೋಡೆಗೆ ಕುಳ್ಳಿಸುತ್ತಾರೆ. ಮದುವೆಯಾಗದವರನ್ನು ನೆಲದ ಮೇಲೆ ಮಲಗಿಸುವರು. ನಂತರ ಹೂಮಾಲೆ ಹಾಕಿ ಪೂಜೆ ಮಾಡುವರು. ಗಂಡ ಸತ್ತಾಗ ಹೆಂಡತಿಯಿದ್ದರೆ ಅವಳಿಗೆ ಅವಳ ತವರು ಮನೆಯವರು ಬಂಧು ಬಳಗದವರು ಹೊಸ ಸೀರೆಯನ್ನು ತಂದು ಉಡಿಸುವರು. ಭಜನೆ ಮೇಳವನ್ನು ಕರೆಯಿಸಿ ಭಜನೆ ಮಾಡಲು ಹೇಳುವರು. ಈ ಸಂದರ್ಭದಲ್ಲಿ ಬಾರಿಸುವ ವಾದ್ಯದ ನಾದವು ಬೇರೆಯೇ ಆಗಿರುತ್ತದೆ.

ಸತ್ತ ಸುದ್ದಿ ತಲುಪಿದ ಬಳಿಕ ಎಲ್ಲಾ ಬಂಧು ಬಳಗದವರು, ಸಂಬಂಧಿಕರು ಬಂದು ಹೂಮಾಲೆ ಹಾಕಿ ಪೂಜೆ ಮಾಡುವರು ತದನಂತರ ಸ್ಮಶಾನಕ್ಕೆ ಒಯ್ಯುವುದು. ಒಯ್ಯುವಾಗ ಪಟಾಕಿ ಹಾರಿಸುತ್ತ,

ಭಜನೇ ಹಾಡುತ್ತ, ಹೆಣವನ್ನು ಹೊತ್ತುಕೊಂಡು ಹೋಗುವರು. ಸತ್ತ ವ್ಯಕ್ತಿಯು ಮದುವೆಯಾಗಿದ್ದರೆ ಕುಳ್ಳಿರಿಸಿ ಮಂಟಪದಲ್ಲಿ ಒಯ್ಯುವರು. ಮದುವೆಯಾಗದಿದ್ದರೆ ಉದ್ದವಾದ ಬಿದಿರಿನ ಚಟ್ಟದ ಮೇಲೆ (ಸಿದಗಿ) ಮಲಗಿಸಿಕೊಂಡು ಹೋಗುವರು. ವ್ಯಕ್ತಿ ಸತ್ತ ವೇಳೆಯು ಸರಿ ಇರದಿದ್ದರೆ, ಒಂದೊಂದು ಸಾರಿ ಮನೆಯನ್ನು ಬಿಡುವಂತಹ ಪ್ರಸಂಗಗಳು ಬರುತ್ತವೆ. ಮನೆಗೆ ಕೀಲಿ ಹಾಕಿ ಬಾಗಿಲಿಗೆ ಮುಳ್ಳನ್ನು ಇಡುವ ಪ್ರಸಂಗಗಳು ಬರುತ್ತವೆ. ಸ್ಮಶಾನಕ್ಕೆ ಒಯ್ಯುವಾಗ ವೀಳ್ಯದೆಲೆ, ನವಣೆಕಾಳು ಮತ್ತು ಚುರುಮುರಿ (ಮಂಡಾಳು) ಗಳನ್ನು ತೂರುತ್ತಾರೆ. ದಾರಿಯುದ್ದಕ್ಕೂ ಹೆಣದ ಹಿಂದಿನಿಂದ ಸಜ್ಜೆ ಅಥವಾ ನವಣೆಯನ್ನು ಚೆಲ್ಲುತ್ತಾ ಹೋಗುವರು. ಇದಕ್ಕೆ ಕಾರಣವೇನೆಂದರೆ ಸತ್ತ ವ್ಯಕ್ತಿಯು ದೆವ್ವವಾಗಿ ಬರಬಾರದು ಮತ್ತು ಚಲ್ಲುತ್ತ ಬಂದ ಕಾಳುಗಳನ್ನು ಆ ದೆವ್ವವು ಒಂದು ಕಾಳೂ ಬಿಡದಂತೆ ಬೆಳಗಾಗುವದರೊಳಗಾಗಿ ಆರಿಸಿಕೊಂಡು ಬರಬೇಕು. ಆದರೆ ಅದಕ್ಕೆ ಎಲ್ಲ ಕಾಳು ಆರಿಸಲಿಕ್ಕೆ ಆಗುವದಿಲ್ಲ. ಎಣಿಸಲಿಕ್ಕಂತೂ ಆಗೋದೆ ಇಲ್ಲ, ಒಟ್ಟಾರೆ ಸತ್ತ ವ್ಯಕ್ತಿಯು ಒಂದು ವೇಳೆ ದೆವ್ವ ವಾಗಿದ್ದಲ್ಲಿ ಕಾಟಕೊಡದಿರಲೆಂದು ಹೆಣದ ಹಿಂದೆ ಸಜ್ಜೆ ಅಥವಾ ನವಣೆಗಳನ್ನು ಚಲ್ಲುತ್ತ ಹೋಗಬೇಕೆಂಬ ನಂಬಿಕೆ ಈ ಜನರಲ್ಲಿದೆ.

ಸ್ಮಶಾನಕ್ಕೆ ತಲುಪಿದ ನಂತರ ಕಟ್ಟಿಗೆಗಳನ್ನು ಚೌಕಾಕಾರವಾಗಿ ಇಟ್ಟು ಅದರ ಮೇಲೆ ಹೆಣವನ್ನು ಹಾಕಿ ಕುಂಕುಮ, ಹಚ್ಚಿ ನೆರೆದ ಜನರಿಗೆ ಕರಿಕೆ, ಹೂ ಕೊಟ್ಟು ಪೂಜೆ ಮಾಡುತ್ತಾರೆ. ನಂತರ ಎಲ್ಲರೂ ಹೆಣದ ಮೇಲೆ ಕರಿಕೆ ಹೂ ಹಾಕಿ ನಮಸ್ಕರಿಸುವರು. ಇದಾದ ನಂತರ ಹೆಣದ ಮೇಲೆ ಕಟ್ಟಿಗೆಯನ್ನಿಟ್ಟು ಚಿತೆಗೆ ಅಗ್ನಿಸ್ಪರ್ಷ ಮಾಡಿಸುವರು.

ಇದಾದ ನಂತರ ಅಲ್ಲಿಗೆ ಬಂದನಂತರ ಜನರೆಲ್ಲರೂ ಹಣವನ್ನು ಕೂಡಿಸಕೊಂಡು, ಮರಳಿ ಬರುವಾಗ ಸತ್ತ ವ್ಯಕ್ತಿಯ ಮನೆಯ ಜನರಿಗೆ ಚಹವನ್ನು ಕುಡಿಸುವರು. ಇದಕ್ಕೆ ಇಸಬಾಯಿತೊಳೆಸುವುದು ಎನ್ನುವರು. ಈ ಪದ್ಧತಿ ಕೆಲವು ಕಡೆಗಳಲ್ಲಿ ಮಾತ್ರ ಇದೆ. ನಂತರ ಎಲ್ಲರೂ ತಮ್ಮ ತಮ್ಮ ಮನೆಗೆ ಹೋಗಿ ಹೊರಗಡೆಯೇ ಸ್ನಾನ ಮಾಡಿ ಮನೆಯೊಳಗೆ ಹೋಗುವರು.

ಸೂತಕ :

ಮಾನಸಿಕ ಆಘಾತದಿಂದ ಚೇತರಿಸಿಕೊಂಡು ಸಾಮಾನ್ಯ ಜೀವನಸ್ಥಿತಿಗೆ ಬರುವ ಅವಧಿಯನ್ನು ಸಾಮಾನ್ಯವಾಗಿ ಸೂತಕದ ದಿನಗಳೆಂದು ಪರಿಗಣಿಸಲಾಗುತ್ತದೆ. ಮಾದಿಗ ಸಮುದಾಯದವರು ಸಾಮಾನ್ಯವಾಗಿ ಎಲ್ಲ ಕಡೆಗೂ ಈ ಸೂತಕದ ಅವಧಿ ಒಂದೇ ತರನಾಗಿದೆ. ವ್ಯಕ್ತಿ ಸತ್ತು ಮೂರುದಿನಕ್ಕೆ ಸೂತಕ ಎನ್ನುತ್ತಾರೆ. ಸತ್ತವ್ಯಕ್ತಿಯು ಜೀವಂತವಿದ್ದಾಗ ತಿನ್ನುತ್ತಿದ್ದ ತಿಂಡಿ ಪದಾರ್ಥಗಳನ್ನು ಇಟ್ಟು ಮನೆಯಲ್ಲಿ ನೀರು ತುಂಬಿದ ಚರಿಗೆ ಇಟ್ಟು ಮಡಿಮಾಡಿ ಧೂಪ ಹಾಕುವರು. ಇದಕ್ಕೆ ಲೋಬಾನ ಹಾಕುವುದು ಎನ್ನುವರು. ತೀರಿಕೊಂಡ ಮೂರನೆ ದಿನಕ್ಕೆ ನಸುಕಿನಲ್ಲಿಯೇ ಎದ್ದು ಸ್ಮಶಾನಕ್ಕೆ ಹೋಗಿ ಮಣ್ಣುಮಾಡಿ

ಬಂದ ಅಥವಾ ಸುಟ್ಟು ಬಂದ ಸ್ಥಳದಲ್ಲಿ ಆತನು ತಿನ್ನುತ್ತಿದ್ದ ಎಲ್ಲಾ ಪದಾರ್ಥಗಳನ್ನು ಇಟ್ಟು ನೀರು ಮತ್ತು ಹಾಲನ್ನು ಇಟ್ಟು ಪೂಜೆ ಮಾಡುವರು. ಪೂಜೆ ಮಾಡಿ ಸ್ವಲ್ಪದೂರ ನಿಲ್ಲುತ್ತಾರೆ. ಏಕೆಂದರೆ ಅಲ್ಲಿ ಕಾಗೆಗಳು ಬಂದು ತಂದ ಅನೇಕ ಪದಾರ್ಥಗಳಲ್ಲಿ ಯಾವುದಾದರೂ ಒಂದು ಪದಾರ್ಥ ಮುಟ್ಟುತ್ತಿದ್ದರೇ (ತಿನ್ನುತ್ತಿದೆ) ಯಾವ ಪದಾರ್ಥ ಮೊದಲು ಮುಟ್ಟುತ್ತದಯೋ ಆ ಪದಾರ್ಥವು ಸತ್ತ ವ್ಯಕ್ತಿಗೆ ಇಷ್ಟವಾದುದೆಂಬ ನಂಬಿಕೆ ಇವರಲ್ಲಿದೆ.

ದೈವದಲ್ಲಿ ಹಾಕಿಕೊಳ್ಳುವುದು (ಒಳಗೆತೆಗೆದುಕೊಳ್ಳುವುದು)

ಸತ್ತವ್ಯಕ್ತಿಯ ಆತ್ಮಕ್ಕೆ ಶಾಂತಿ ಸಿಗಲೆಂದು ಒಂದು ತಿಂಗಳು ತುಂಬುವದರೊಳಗೆ ಒಳ್ಳೆಯ ದಿನನೋಡಿ ಪೂಜೆಮಾಡುವುದಕ್ಕೆ ದೈವದಲ್ಲಿ ಹಾಕಿಕೊಳ್ಳುವುದು ಎನ್ನುವರು. ಆ ದಿನ ಮನೆಯನ್ನು ಸುಣ್ಣ ಬಣ್ಣದಿಂದ ಸಾರಿಸಿ ಗೋಮೂತ್ರವನ್ನು ಮನೆ ತುಂಬ ಚಿಮ್ಮಿಸಿ, ಹಾಸಿಗೆ, ಹೊದಿಕೆಗಳನ್ನು ಸ್ವಚ್ಚಗೊಳಿಸುವರು. ಈ ಪೂಜೆ ಮಾಡುವಾಗ ಬೆಳ್ಳಿಯ ಮುಖವನ್ನು ಮಾಡಿಸುವರು ಗಂಡು ಸತ್ತರೆ ಪರಶುರಾಮನ ಮುಖ, ಹೆಣ್ಣು ಸತ್ತರೆ ಯಲ್ಲಮ್ಮ, ಹುಲಿಗೆಮ್ಮ ಅಥವಾ ಗಾಳೆಮ್ಮ ದೇವಿಯ ಮುಖ ಮಾಡಿಸಿಟ್ಟು, ತುಂಬಿದ ಚರಿಗೆಗೆ ವಸ್ತ್ರವನ್ನು ಇಟ್ಟು ಹೂ ಹಾರ ಹಾಕಿ ಹಣ್ಣು ಹಂಪಲ, ಕರಿದ ಪದಾರ್ಥ, ತಿಂಡಿ ತಿನಿಸುಗಳನ್ನು ಇಟ್ಟು ಪೂಜಿಸುವರು. ಸತ್ತವರು ದೈವವಾದರೆಂಬ ನಂಬಿಕೆ ಈ ಆಚರಣೆ ಹಿಂದಿನ ವಿಶೇಷವಾಗಿದೆ. ಸತ್ತ ವ್ಯಕ್ತಿ ಯಾವ ಆಹಾರವನ್ನು ಬಹಳ ಇಷ್ಟ ಪಡುತ್ತಿದನೋ ಆ ಆಹಾರವನ್ನು ಪೂಜೆಗೆ ಇಡುವರು. ಈ ಪೂಜೆಯ ದಿನ ಕೆಲವು ಮನೆಗಳಲ್ಲಿ ಸಿಹಿ ಅಡಿಗೆ ಮಾಡಿದರೆ, ಕೆಲವು ಮನೆಗಳಲ್ಲಿ ಕುರಿ ಅಥವಾ ಕೋಳಿಯ ಮಾಂಸದೊಂದಿಗೆ ಪೂಜೆ ಮಾಡುತ್ತಾರೆ. ಹೀಗೆ ಬಂಧು ಬಳಗದವರು ಸಂಬಂಧಿಕರೆಲ್ಲರೂ ಬಂದು ಲೋಬಾನ (ಧೂಪ) ಹಾಕಿ ಊಟ ಮಾಡುವರು.

ಹಿರಿಯರ ಹಬ್ಬ :

ಸತ್ತವ್ಯಕ್ತಿಯು ಕನಸಿನಲ್ಲಿ ಬರದಿರಲಿ, ದೆವ್ವವಾಗಿ ಕಾಡದಿರಲಿ ಎಂದು ಸತ್ತವ್ಯಕ್ತಿಯ ಆತ್ಮಕ್ಕೆ ಶಾಂತಿ ಸಿಗಲೆಂದು ಪ್ರತಿವರ್ಷ ನಿರ್ಧಿಷ್ಟಪಡಿಸಿದ ದಿನದಂದು, ಮಾಡುವ ಪೂಜೆಗೆ ಹಿರಿಯರ ಹಬ್ಬವೆನ್ನುತ್ತಾರೆ. ಈ ಹಬ್ಬವು ಪ್ರಾದೇಶಿಕವಾಗಿ ತಮ್ಮ ಹಿರಿಯರು ನಡೆದುಕೊಂಡು ಬಂದದಾರಿಯನ್ನು ಅವಲಂಬಿಸಿರುತ್ತದೆ. ಕೆಲವರು ದೀಪಾವಳಿ ಪಾಡ್ಯ ದಿನದಂದು ಹಿರಿಯರ ಹಬ್ಬ ಮಾಡಿದರೆ, ಕೆಲವರು ಯುಗಾದಿ ಹಬ್ಬದಂದು, ಇನ್ನು ಕೆಲವರು ತುಳಿಸಿ ವಿವಾಹದಂದು ಈ ಹಬ್ಬವನ್ನು, ಇನ್ನು ಕೆಲವರು ತುಳಿಸಿ ವಿವಾಹದಂದು ಈ ಹಬ್ಬವನ್ನು ಮಾಡುತ್ತಾರೆ. ಹೀಗೆ ಹಲವಾರು ರೀತಿ ನೀತಿ ನಂಬಿಕೆ ವಿಧಿ ವಿಧಾನಗಳು, ಸಂಸ್ಕಾರಗಳು ತಲತಲಾಂತರದಿಂದ ಸಾಗಿಕೊಂಡು ಬಂದಿವೆ. ಈ ತರನಾದ ಕ್ರಿಯೆಗಳನ್ನು ಅವಲೋಕಿಸಿದಾಗ ಇವುಗಳಲ್ಲಿಯ ಸಂಸ್ಕೃತಿಯ ಒಳನೋಟಗಳು ಹುದುಗಿರುವುದನ್ನು ಕಾಣಬಹುದು.

೪.೨ ವಾರ್ಷಿಕಾವರ್ತನದ ಆಚರಣೆಗಳು :

ಮಾದಿಗ ಸಮುದಾಯದವರು ತಮ್ಮ ಒಳತಿಗಾಗಿ ಸುಖ ಸಂತೋಷಕ್ಕಾಗಿ ಬಾಳಿನಲ್ಲಿ ಬದಲಾವಣೆಗಾಗಿ, ಸಾಧನೆಯಿಂದ ಸಿದ್ದಿಯತ್ತ ಸಾಗುವುದಕ್ಕಾಗಿ, ಸಮಾಜದ ಸಂಘಟನೆಗಾಗಿ ಹಾಗೂ ಆತ್ಮೀಯರೊಂದಿಗೆ ಬೆರೆಯಲಿಕ್ಕಾಗಿ ಹಲವು ಹಬ್ಬ ಹರಿದಿನಗಳನ್ನು ಆಚರಿಸುತ್ತ ಬಂದಿದ್ದಾರೆ. ದೈಹಿಕ ಶ್ರಮವನ್ನು ನಂಬಿ ಬದುಕುತ್ತಿರುವ ಮಾದಿಗ ಸಮುದಾಯದವರು ಇಂಥ ಹಬ್ಬ ಹರಿದಿನಗಳಲ್ಲಿ ಸ್ವಲ್ಪ ದೇಹದಂಡನೆಗೆ ಬಿಡುವು ಕೊಟ್ಟು, ಬಂಧು-ಬಾಂಧವರೊಂದಿಗೆ, ಆತ್ಮೀಯರೊಂದಿಗೆ ಬೆರೆತು ತಮ್ಮ ಕಷ್ಟಗಳನ್ನು ದೂರಮಾಡಿ ಸಂತೋಷದಿಂದ ಇರುತ್ತಾರೆ.

ಸಾಮಾನ್ಯವಾಗಿ ಯಾವುದೇ ಹಬ್ಬವಿರಲಿ ಹೆಣ್ಣುಮಕ್ಕಳು ಮನೆಯನ್ನು ಸ್ವಚ್ಛಗೊಳಿಸಿ ಮನೆಯ ಮುಂದೆ ಬಣ್ಣ ಬಣ್ಣದ ರಂಗೋಲಿ ಹಾಕುವರು. ಬಾಗಿಲುಗಳಿಗೆ ಮಾವಿನ ತೋರಣಗಳನ್ನು ಕಟ್ಟುವುದು ಮಕ್ಕಳಿಗೆ ಹಿರಿಯರು ಹೊಸ ಬಟ್ಟೆ ತೊಡುವುದು ಕಂಡು ಬರುತ್ತದೆ. ಆ ದಿನ ಮನೆಯಲ್ಲಿ ವಿವಿಧ ತರಹದ ಸಿಹಿ ಊಟ ಸಿದ್ಧವಾಗಿರುತ್ತದೆ. ಬಂಧು-ಬಾಂಧವರೊಂದಿಗೆ ಅದನ್ನು ಊಟ ಮಾಡಿ ಖುಷಿ ಪಡುತ್ತಾರೆ.

೪.೨.೧ ಯುಗಾದಿ :

ಪವಿತ್ರ ಯುಗಾದಿ ಹಬ್ಬವನ್ನು ಮೇಲ್ಜಾತಿಯವರು ಆಚರಿಸುವಂತೆ ಮಾದಿಗ ಸಮುದಾಯದವರು ಆಚರಿಸುತ್ತಾರೆ. ಹಬ್ಬ ಬರುವ ಮೊದಲೇ ಮನೆಗಳಿಗೆ ಸುಣ್ಣ ಬಣ್ಣ ಬಳಿದು ಸ್ವಚ್ಚಗೊಳಿಸುತ್ತಾರೆ. ಬಾಗಿಲುಗಳಿಗೆ ಮಾವಿನ ತೋರಣಕಟ್ಟಿರುತ್ತಾರೆ. ಮನೆಮುಂದೆ ಅಂಗಳದಲ್ಲಿ ಬಣ್ಣ ಬಣ್ಣದ ರಂಗೋಲಿ ಬಿಡಿಸಿರುತ್ತಾರೆ. ಕೊಪ್ಪಳ ನಗರದ ಮಾದಿಗರ ಕೇರಿಯಲ್ಲಿ ಆಂಜನೇಯನ ಗುಡಿಯ ದೇವಸ್ಥಾನದ ಮುಂದೆ ಒಂದು ಹೊಂಡ ಇದೆ. ಈ ಯುಗಾದಿ ದಿನದಂದು ಅದಕ್ಕೆ ತುಂಬಾ ನೀರು ಬಿಟ್ಟು ಮೇಲೆ ಹಂದರ ತರಹದಲ್ಲಿ ಚಪ್ಪರಹಾಕಿ ಅದರ ಮಧ್ಯದಲ್ಲಿ ಒಂದು ತೆಂಗಿನ ಕಾಯಿಯನ್ನು ಕಟ್ಟಿರುತ್ತಾರೆ. ಯುವಕರು ತಮ್ಮ ತಮ್ಮ ಮನೆಯಿಂದ ಒಂದೊಂದು ತಾಮ್ರದ ಕೊಡ ತಂದು ದೇವಸ್ಥಾನದ ಒಳಗೆ ಇಟ್ಟು ಹೊಂಡದ ಸುತ್ತಲೂ ನಿಂತು ಅದಕ್ಕೆ ಪೂಜೆ ಮಾಡುತ್ತಾರೆ. ಅನಂತರ ಚಪ್ಪರಕ್ಕೆ ಕಟ್ಟಿರುವ ತೆಂಗಿನ ಕಾಯಿಯನ್ನು ಒಬ್ಬೊಬ್ಬರು ಹರಿಯಲು ಪ್ರಯತ್ನಿಸುತ್ತಾರೆ. ಬಹಳಷ್ಟು ಎತ್ತರಕ್ಕೆ ಅದನ್ನು ಕಟ್ಟಿರುತ್ತಾರೆ. ಅಷ್ಟು ಬೇಗನೆ ಅದು ಯಾರಿಗು ಸಿಗುವುದಿಲ್ಲ. ಅದನ್ನು ನೋಡಲು ಕೇರಿಯ ಎಲ್ಲಾ ಜನರು ಮಕ್ಕಳು ನೆರೆದಿರುತ್ತಾರೆ.

ಈ ಹಬ್ಬದ ಮಾರನೆಯ ದಿನವನ್ನು 'ಕರಿ'ಯಂದು ಕರೆಯುತ್ತಾರೆ. ಅಂದು ಕೆಲವರು ಸಿಹಿ ಊಟ ಮಾಡಿದರೆ ಇನ್ನು ಕೆಲವರು ಮಾಂಸದ ಅಡಿಗೆ ಮಾಡುವರು. ಮಾದಿಗರು ಹೆಚ್ಚಾಗಿ ಮಾಂಸದ ಅಡಿಗೆಯನ್ನು ಮಾಡುತ್ತಾರೆ. ಈ ಯುಗಾದಿಯ 'ಕರಿ'ದಿನದಂದು ಯಾವುದೇ ಒಳ್ಳೆಯ ಅಥವಾ ಕೆಟ್ಟ ಘಟನೆಗಳು ಸಂಭವಿಸಿದರೆ ವರ್ಷಪೂರ್ತಿ ಕೆಟ್ಟದ್ದು ಅಥವಾ ಒಳ್ಳೆಯದಾಗುತ್ತದೆ ಎಂದು ನಂಬುತ್ತಾರೆ.

೪.೨.೨ ಹೋಳಿ ಹಬ್ಬ :

ಹೋಳಿ ಹಬ್ಬವನ್ನು ಮಾದಿಗ ಸಮುದಾಯದವರು ಆಚರಿಸುತ್ತಾರೆ. ಬಣ್ಣದ ದಿನ ಮಕ್ಕಳು ದೊಡ್ಡವರು ಬಣ್ಣವನ್ನು ಒಬ್ಬರಿಗೊಬ್ಬರು ಹಚ್ಚುತ್ತಾ ಹಲಗೆಯನ್ನು ಬಾರಿಸುತ್ತಾ ಹೊಯ್ಕೊಳುತ್ತಾ ತಿರುಗಾಡುವರು. ಬಣ್ಣ ಹಾಕುವ ದಿನದ ಮುಂಚಿನ ದಿನದ ರಾತ್ರಿ ಕಾಮ ರತಿ ದೇವಿಯ ಮೂರ್ತಿಯನ್ನು ತಲೆಮೇಲೆ ಹೊತ್ತುಕೊಂಡು ಕೂಡಿಸಿಟ್ಟ ಸಗಣಿ, ಕುಳ್ಳು, ಕಟ್ಟಿಗೆಗಳಿಗೆ ಎರಡು ಸುತ್ತು ಪ್ರದಕ್ಷಿಣಿ ಹಾಕಿ ಮೂರ್ತಿಯನ್ನು ಇಟ್ಟು ಬೆಂಕಿ ಹಚ್ಚುವರು.

ಬಣ್ಣ ಹಾಕುವ ದಿನದಂದು ಮಕ್ಕಳು ಯುವಕರು ಕೇರಿಯ ಮನೆ ಮನೆಗಳಿಗೆ ಹೋಯ್ಕಳ್ಳುತ್ತಾ ತೆರಳಿ ದುಡ್ಡನ್ನು ತೆಗೆದುಕೊಳ್ಳುತ್ತಾರೆ. ಮತ್ತು ವಯಸ್ಸಾದ ಮುದುಕರು, ಮನರಂಜನೆಗಾಗಿ ಅವಾಚ್ಯ ಶಬ್ದಗಳಿಂದ ಕೂಡಿದ ಪದಗಳನ್ನು ಹಾಡುತ್ತಾರೆ.

೪.೨.೩ ಮಹಾನವಮಿ :

ಈ ಹಬ್ಬವು ಹಬ್ಬಗಳಲ್ಲಿಯೇ ಅತ್ಯಂತ ಪ್ರಮುಖ ಮತ್ತು ಪವಿತ್ರವಾದ ಹಬ್ಬ. ಈ ಹಬ್ಬವನ್ನು ದಸರಾ, ನವರಾತ್ರಿ, ಮಹಾನವಮಿ, ವಿಜಯದಶಮಿ ನಾಡಹಬ್ಬವೆಂದು ವಿವಿಧ ರೀತಿಯಲ್ಲಿ ಕರೆಯುತ್ತಾರೆ. ಈ ಹಬ್ಬವು ಒಂಭತ್ತು ದಿನಗಳವರಗೆ ನಡೆಯುವುದು. ಕೊನೆಯ ದಿನ ಆಯುಧ ಪೂಜೆ ನಡೆಯುತ್ತಿದೆ. ಕೊಡ್ಲಿ, ಕುಡುಗೋಲು, ಸಲಿಕೆ, ಗುದ್ದಲಿ, ಭರ್ಚಿ ಇನ್ನಿತರ ದಿನನಿತ್ಯ ಬಳಸುವ ವಸ್ತುಗಳನ್ನು ದೇವ್ರ ಜಗಲಿ ಹತ್ತಿರ ಇಟ್ಟು, ಹೂವು ಬನ್ನಿಯನ್ನಿಟ್ಟು ಪೂಜೆ ಮಾಡುವರು. ವಿಜಯದಶಮಿಯ ದಿನ ಸಂಜೆಗೆ (ಕತ್ತಲಾದ ಬಳಿಕ) ಕೇರಿಯ ಪ್ರಮುಖರು ಸೇರಿ ಭಜನೆ ವಾಧ್ಯಗಳೊಂದಿಗೆ ಗಾಳೆಮ್ಮ, ದೇವಿ, ಹಾಗು ಸ್ವಾರಮ್ಮದೇವಿಯರನ್ನು ಪಲ್ಲಕ್ಕಿಯಲ್ಲಿ ಕುಳ್ಳಿರಿಸಿಕೊಂಡು ಬನ್ನಿಗಿಡಕ್ಕೆ ಬನ್ನಿಮುಡಿಯಲು ಹೋಗುವರು.

೪.೨.೪ ದೀಪಾವಳಿ :

ಮಾದಿಗರು ಆಚರಿಸುವ ಹಬ್ಬಗಳಲ್ಲಿಯೇ ದೀಪಾವಳಿ ಹಬ್ಬವು ಪ್ರಮುಖವಾಗಿರುವಂತಹದು. ಈ ಹಬ್ಬದಲ್ಲಿ ಮನೆಗೆ ಸುಣ್ಣ ಬಣ್ಣದಿಂದ ಅಲಂಕರಿಸಿ ಸಾರಿಸಿ, ಸ್ವಚ್ಛಗೊಳಿಸುವರು. ಮಕ್ಕಳಿಗೆ ಹೊಸ ಬಟ್ಟೆಕೊಡಿಸುವರು. ಮನೆಯಲ್ಲಿ ಹಾಸಿಗೆ ಹೊದಿಕೆಗಳನ್ನು ಸ್ವಚ್ಛಗೊಳಿಸುವರು.

ಈ ಹಬ್ಬವು ವೈಭವ ಪೂರಿತವಾಗಿರುವುದರಿಂದ ಸಂಜೆ ವೇಳೆಗೆ ದೇವಸ್ಥಾನಗಳಲ್ಲಿ, ಮನೆಯ ಬಾಗಿಲುಗಳಲ್ಲಿ ಸಾಲು ಸಾಲಾಗಿ ಎಣ್ಣೆ ದೀಪಗಳನ್ನು ಹಚ್ಚುವರು. ಈ ಜನಾಂಗದಲ್ಲಿ ಹೆಚ್ಚಾಗಿ ದೀಪಾವಳಿ ಹಬ್ಬದ ದಿನ ಕೋಳಿಯನ್ನು ಬಲಿ ಕೊಡುವರು. ಇದಕ್ಕೆ 'ಬಲಿಪಾಡ್ಯ' ವೆನ್ನುವರು. ಈ ಹಬ್ಬದ ದಿನ ಸುಂದರ ವಾತಾವರಣ. ಪಟಾಕಿ ಹಾರಿಸುವರು. ವಿಶಿಷ್ಟವಾದ ಸಿಹಿ ಭೋಜನ ಅಂದರೆ ಹೋಳಿಗೆ, ಪಾಯಸ, ಮಸಾಲೆ ಅನ್ನ ಇತ್ಯಾದಿಗಳನ್ನು ತಯಾರಿಸಿ ಪೂಜೆ ಮಾಡುತ್ತಾರೆ.

೪.೨.೫ ನಾಗರ ಪಂಚಮಿ :

ಈ ಹಬ್ಬವು ಶ್ರಾವಣ ಶುದ್ಧ ಪಂಚಮಿಯಂದು ಆಚರಿಸಲ್ಪಡುತ್ತದೆ. ಮಳೆಯ ವಾತಾವರಣ ದಲ್ಲಿ ಜೋಕಾಲಿಯಲ್ಲಿ ಮಕ್ಕಳು, ಹಿರಿಯರು ಆಡುತ್ತಾರೆ. ಮನೆಗಳಲ್ಲಿ ಹಬ್ಬಕ್ಕೆ ಮೊದಲೇ ನಾಗಪ್ಪನ ನೈವೇದ್ಯಕ್ಕೆ ಅರಳು, ಹರಳಿಟ್ಟು, ತಂಬಿಟ್ಟು ಹಾಗೂ ವಿಧ ವಿಧದ ಉಂಡಿಗಳು, ಖರ್ಚಿಕಾಯಿ, ಚಕ್ಕಲಿಗಳನ್ನು ತಯಾರಿಸುತ್ತಾರೆ. ನಾಗರ ಪಂಚಮಿ ಎರಡು ದಿನಗಳ ಹಬ್ಬ. ಮೊದಲನೆಯದು ನಾಗಚೌತಿ. ಈ ದಿನ ಮಣ್ಣಿನಿಂದ ಮಾಡಿದ ನಾಗನನ್ನು ದೇವರ ಜಗುಲಿಯ ಮೇಲಿಟ್ಟು ಹಾಲನ್ನು ಹಾಕಿಬೆಲ್ಲ ಬೆರೆಸಿದ ನೀರು ಅಥವಾ ಹಾಲು ಎರೆಯುವುದು. ನಾಗನಿಂದ ತಮಗೆ ಯಾವುದೇ ಆಪತ್ತು ಬರಬಾರದೆಂದು ಈ ಪೂಜೆ ಮಾಡುವರು. ನಾಗಪ್ಪನಿಗೆ ಹಾಲೆರೆಯುವಾಗ ಮನೆಯವರೆಲ್ಲರು ದೇವರ ಪಾಲು, ಅಣ್ಣನ ಪಾಲು, ಅಕ್ಕಂದಿರ ಪಾಲು, ಬಂಧುಗಳ ಪಾಲು, ಎಂದು ಹೇಳುತ್ತಾರೆ.

ಎರಡನೇ ದಿನ ನಾಗರ ಪಂಚಮಿ. ಕಲ್ಲನಾಗರನಿಗೆ ಹಾಲನ್ನೆರೆದು ಪೂಜಿಸುವರು. ಅಲ್ಲದೆ ಅಂದು ಕುದಿಸಿದ ಕಡಬ (ಕುಚ್ಚಕಡಬು)ನ್ನು ನಾಗಪ್ಪನಿಗೆ ವಿಶೇಷ ನೈವೇದ್ಯವನ್ನಾಗಿ ಮಾಡುವರು. ಈ ರೀತಿಯಾಗಿ ಪೂಜೆ ಮಾಡಿದ ನಂತರ ಹೆಣ್ಣು ಮಕ್ಕಳು ಹಾಗೂ ಗಂಡುಮಕ್ಕಳು ಸೇರಿಕೊಂಡು ಹೊರಬಯಲಿನ ಮರಗಳಿಗೆ ಕಟ್ಟಿದ ಜೋಕಾಲಿಯನ್ನು ಆಡಲಿಕ್ಕೆ ಹೋಗುವರು. ಪ್ರತಿಯೊಬ್ಬರು ವರ್ಷಕ್ಕೊಮ್ಮೆಯಾದರೂ ಜೋಕಾಲಿ ಆಡಬೇಕೆಂದು ನಂಬಿಕೆ ಈ ಜನಾಂಗದಲ್ಲಿದೆ.

೪.೨.೬ ಮೊಹರಂ :

ಹಿಂದೂ–ಮುಸ್ಲೀಂ ಬಾಂಧವರು ಸೇರಿಕೊಂಡು ಆಚರಿಸುವ ಹಬ್ಬ 'ಮೊಹರಂ' ಪವಿತ್ರ ಹಬ್ಬವಾಗಿದೆ. ೧೩೦೦ವರ್ಷಗಳ ಹಿಂದೆ ಹಜರತ್ ಇಮೂಮ್ ಹುಸೇನರು ಸತ್ಯಕ್ಕಾಗಿ ಧರ್ಮರಕ್ಷಣೆಗಾಗಿ ಅರಬುಸ್ತಾನದ ಕರ್ಬಲಾ ಮರಭೂಮಿಯಲ್ಲಿ ಪ್ರಾಣಕೊಟ್ಟ ಕಥೆಯೇ ಈ ಮೊಹರಂ. ಹಬ್ಬವಾಗಿದೆ. ಮಾದಿಗ ಜನಾಂಗದವರು ಈ ಹಬ್ಬ ಆಚರಿಸುತ್ತಾರೆ. ಈ ಹಬ್ಬದಲ್ಲಿ ಕುರಿಬಲಿ ಪದ್ಧತಿ ಇದೆ. ಮಾದಿಗರು ಈ ಪದ್ಧತಿಯನ್ನು ನಡೆಸಿಕೊಂಡು ಬರುತ್ತಿದ್ದಾರೆ. ರೋಗದಿಂದ ಬಳಲುತ್ತಿದ್ದವರು, ಮಕ್ಕಳಾಗದವರು ಮತ್ತು ದೈಹಿಕ, ಮಾನಸಿಕ ಸಮಸ್ಯೆಗಳನ್ನು ಎದುರಿಸುತ್ತಿರುವವರು, ಹರಕೆ ಹೊತ್ತು ದೇವರಿಗೆ ಕುರಿ ಬಲಿಕೊಡುತ್ತಾರೆ.

ಈ ಹಬ್ಬದ ಹತ್ತನೆಯ ದಿನ ಕೊನೆಯ ದಿನವಾಗಿರುತ್ತದೆ. ಅಂದು ಎಲ್ಲಾ ದೇವರುಗಳು ಮೆರವಣಿಗೆಯ ಮೂಲಕ ವಾಧ್ಯಗಳೊಂದಿಗೆ ಹೊರಗೆ ತೆರಳುತ್ತಾರೆ. ಅಲ್ಲಿ ದೇವರಿಗೆ ಹಾಕಲಾದ ಹೂಗಳನ್ನು ತೆಗೆದು ಹೊಳೆಯಲ್ಲಿ ಹಾಕಿ ದೇವರ ಹಸ್ತರೂಪದ ಮುಖಗಳನ್ನು ಬಟ್ಟೆಗಳಲ್ಲಿ ಕಟ್ಟಿಕೊಂಡು ಮರಳಿ ಬಂದರೆ ಮೊಹರಂ ಹಬ್ಬವು ಕೊನೆಗೊಳ್ಳುವುದು.

ವಿಶೇಷ ಆಚರಣೆಗಳು :

ಈ ವಿಶೇಷವಾದ ಆಚರಣೆಗಳನ್ನು ಪ್ರಾದೇಶಿಕತೆಗೆ ಅನುಗುಣವಾಗಿ ವಿಶಿಷ್ಟವಾದ ರೀತಿಯಲ್ಲಿ ಆಚರಿಸುವುದು ಕಂಡುಬರುತ್ತದೆ. ಪ್ರತಿಯೊಂದು ಗ್ರಾಮದಲ್ಲಿಯ ಗ್ರಾಮದೇವತೆ, ಕುಲದೇವತೆಯ ಆಚರಣೆ ಇದ್ದೇ ಇರುತ್ತದೆ. ಈ ಗ್ರಾಮದೇವತೆಯ ಮೂಲಗಳು, ಬಗೆಗಳು, ಆಚರಣೆಗಳು ವೈಶಿಷ್ಟಪೂರ್ಣವಾಗಿವೆ. ಬೇರು, ಹಣ್ಣುಗಳು, ಬೇಟೆಯಾಡಿದ ಪ್ರಾಣಿಗಳನ್ನು ತಿಂದು ಅಡವಿಯಲ್ಲಿ ಬದುಕುತ್ತಿದ್ದ ಮಾನವನು ಕಲ್ಲನ್ನು ಕಟ್ಟಿಗೆಯನ್ನು ಹೆಣ್ಣಿನ ಆಕಾರ ಮಾಡಿ ಕಡೆದು, ಕೆತ್ತಿಪೂಜಿಸುವುದನ್ನು ಮುಂದೆ ಕೃಷಿಗಾಗಿ ಗ್ರಾಮಸೇರಿ ನಂತರವೂ ಆ ಆರಾಧನೆ ಮುಂದುವರೆಸಿದನು. ಮನೆ ನೋಡಿಕೊಳ್ಳಲು ಮನೆ ಹೆಂಡತಿ ತಾಯಿ ಇರುವಂತೆ ಗ್ರಾಮನೋಡಿಕೊಳ್ಳಲು ಊರ ಮಧ್ಯದ ಗ್ರಾಮದೇವತೆ ಇರಬೇಕೆಂದು ಯೋಚಿಸಿದರು. ಹಿಂದೆ ತಾವು ಅಡವಿಯಲ್ಲಿ ಪೂಜಿಸುತ್ತಿದ್ದ ಯಲ್ಲಮ್ಮ, ಗಾಳೆಮ್ಮ, ಸ್ವಾರೆಮ್ಮ, ದುರ್ಗವ್ವ, ದ್ಯಾಮವ್ವ, ಕರವ್ವ, ಮರಗವ್ವ, ಚೌಡವ್ವ, ಚೌಡವ್ವ ಮುಂತಾದ ಶಕ್ತಿದೇವತೆಗಳನ್ನು ಊರಿಗೆ ತಂದು, ಊರ ಮಧ್ಯದಲ್ಲಿ ಸ್ಥಾಪಿಸಿ ಪೂಜೆ ಜಾತ್ರೆ ಉತ್ಸವಗಳನ್ನು ಆರಂಭಿಸಿದರು. ಪ್ರಸ್ತುತ ಮಾದಗ ಜನಾಂಗದ ಆರಾಧ್ಯ ದೈವಗಳಾಗಿ ಈ ಹೆಣ್ಣು ದೇವತೆಗಳು ಜಾತಿ ವಿಧಿಸಿದ ಕಟ್ಟುಪಾಡಿನಲ್ಲಿ ಪೂಜೆಗೊಳ್ಳುತ್ತಿರುವರು.

ವಾರ ಹಿಡಿಯುವುದು :

ವಾರಹಿಡಿಯುವದು ಎಂದರೆ ಒಂದು ವರ್ಷದಲ್ಲಿ ಒಂದು ನಿರ್ದಿಷ್ಟ ಅವಧಿಯ ಮಂಗಳವಾರ ಹಾಗೂ ಶುಕ್ರವಾರ ಸೇರಿಸಿ ಒಟ್ಟು ಐದು ವಾರ ಒಂದು ಅವಧಿಯಲ್ಲಿ ದೇವಿಯನ್ನ ಪೂಜೆ ಮಾಡುವದು. ಈ ದಿನಗಳಲ್ಲಿ ಮಂಗಳವಾರ ಹಾಗೂ ಶುಕ್ರವಾರ ಸಾಯಂಕಾಲದ ಹೊತ್ತಿಗೆ ಪೂಜೆ ಮಾಡುತ್ತಾರೆ. ಅಂದು ನೈವೇಧ್ಯಕ್ಕಾಗಿ ಜೋಳದ ಅಂಬಲಿಯನ್ನು ಮಾತ್ರ ಮಾಡುವರು. ಅಂಬಲಿ ಮಾಡಲಿಕ್ಕೆ ಜೋಳದ ಹಿಟ್ಟನ್ನು ಓಣಿಯ ಪ್ರತಿಯೊಂದು ಮನೆಯಿಂದ ತರಿಸಲಾಗುತ್ತದೆ. ಹೀಗೆ ತಂದ ಹಿಟ್ಟನ್ನು ನೈವೇದ್ಯಕ್ಕೆ ಬಳಸಿಕೊಂಡು ಉಳಿದಂತ ಹಿಟ್ಟನ್ನು ಹಾಗಿಯೇ ಕೂಡಿಟ್ಟ ಕೊನೆಯ ವಾರದಂದು (ಶುಕ್ರವಾರ) ಕೇರಿ ಅಥವಾ ಓಣಿ ದೇವಿಯ ಜಾತ್ರೆ ಮಾಡುತ್ತಾರೆ. ಅಂದು ಗುಡಿಗೆ ಚಪ್ಪರವನ್ನು ಹಾಕಿ ತಳಿರು ತೋರಣಗಳಿಂದ ಶೃಂಗರಿಸಿ ವಿಶೇಷವಾಗಿ ಆರಾಧನೆ ಮಾಡುವರು. ಅಂದರೆ ಈ ಆರಾಧನೆ ವಿಶೇಷವಾಗಿ ಮಾಡುವಲ್ಲಿ ಅಂದರೆ ದೇವಿಯನ್ನುಒಳಗೊಂಡು ಊರಿನ ಪ್ರಮುಖ ದೇವ-ದೇವತೆಗಳನ್ನು ಪೂಜಿಸುವರು. ಈ ಎಲ್ಲಾ ದೇವರುಗಳ ಗುಡಿಗಳ ಗುಡಿಗೆ ದೀಪ ಹಚ್ಚಲು ಎಣ್ಣೆಯನ್ನು ಕೊಡುವರು. ಎಣ್ಣೆಯನ್ನು ಕೊಡಲು ಹೋಗುವಾಗ ಡೊಳ್ಳು ಬಾರಿಸುವವರು ಮುಂದೆ ಹೊರಟಿರುತ್ತಾರೆ. ಅವರ ಹಿಂದೆ ಓಣಿ ಮಹಿಳೆಯರು ಮಂಗಳಾರತಿಯನ್ನು ಹಿಡಿದುಕೊಂಡು ಇನ್ನುಳಿದವರು ಹಣ್ಣು, ಹಂಪಲು, ಹೂ, ಕಾಯಿ, ಕರ್ಪೂರಗಳನ್ನು ತೆಗೆದುಕೊಂಡು ಹೋಗಿ ದೇವಿಗೆ ಪೂಜೆಸಲ್ಲಿಸುವರು.

ಕುರಿ, ಕೋಳಿ ಬಲಿಕೊಡುವುದು.

ಎಲ್ಲ ದೇವರುಗಳಿಗೆ ಪೂಜೆ ಸಲ್ಲಿಸಿ ಸಾಯಂಕಾಲದ ಹೊತ್ತಿಗೆ ದೇವಿಯ ಗುಡಿಗೆ ಮರಳಿ ಬಂದ ನಂತರ ದೇವಿಗೆ ಕೋಳಿಯ ಬಲಿ ನಡೆಯುತ್ತದೆ. ಬಲಿ ನೀಡಲು ಮುಸ್ಲಿಂ ಜನಾಂಗಕ್ಕೆ ಮಾತ್ರ ಸಾಂಪ್ರದಾಯಿಕ ಹಕ್ಕಿದ್ದರೂ ಸಹಿತ, ಮಾದಿಗ ಕೇರಿ ಅಥವಾ ಓಣಿಯಲ್ಲಿ ಮಾದಿನ ಜನಾಂಗವೇ ತಾವು ಆರಾಧಿಸುವ ದೇವರಿಗೆ ಬಲಿ ಸಮರ್ಪಿಸುವುದು ರೂಢಿಯಲ್ಲಿದೆ. ಬಲಿಕೊಟ್ಟ ಕುರಿಕೋಳಿಯ ರುಂಡವನ್ನು ದೇವಿಯ ಮುಂದೆ ಇಟ್ಟು ಉಳಿದ ಭಾಗದ ಮಾಂಸವನ್ನು ಅಡುಗೆ ಮಾಡಿ ದೇವಿಗೆ ನೈವೇದ್ಯ ಮಾಡುತ್ತಾರೆ. ಇಷ್ಟೆಲ್ಲ ಮುಗಿದ ಬಳಿಕ ರಾತ್ರಿ ಹೊತ್ತಿಗೆ ಡೊಳ್ಳು ಭಜನೆ ಹಾಡು ಇತರ ಸಾಂಪ್ರದಾಯಿಕ ಕಾರ್ಯಕ್ರಮಗಳು ನಡೆಯುತ್ತವೆ.

ನಿರ್ದಿಷ್ಟ ದೈವದ ಪ್ರೀತ್ಯಾರ್ಥವಾಗಿ ಪ್ರಾಣಿಗಳನ್ನು ಕೊಲ್ಲುವಿಕೆ ಜನಪದ ಬದುಕಿಗೆ ಹೊಸದಲ್ಲ. ದುಷ್ಟ ದೇವತೆಗಳಿಂದ ವ್ಯಕ್ತಿಗೆ ಅಥವಾ ಕುಟುಂಬಕ್ಕೆ ಅಥವಾ ಊರಿಗೆ ಅಪಾಯವಾಗದಿರಲಿ ಎಂಬ ನಂಬಿಕೆಯೇ ಬಲಿಗೆ ಹಿನ್ನಲೆಯಾಗಿದೆ. ಅಂಥ ದುಷ್ಟ ದೇವತೆಯ ಹೆಸರನ್ನು ಉಚ್ಚರಿಸಿದರೂ ಅಪಾಯವಿದೆ ಎಂಬ ಅತಿರೇಕದ ನಂಬಿಕೆಯಿಂದ ಅದನ್ನು ಅಡ್ಡ ಹೆಸರಿನಿಂದ ಕರೆಯುವರು.

ಜಾತ್ರೆಗಳು

ಮಾದಿಗರು ಇತರ ಜನಾಂಗಗಳಂತೆ ಸಾಮಾನ್ಯವಾಗಿ ಎಲ್ಲ ಜಾತ್ರೆಗಳಲ್ಲಿ ಪಾಲ್ಗೊಳ್ಳುತ್ತಾರೆ. ಕೊಪ್ಪಳ ಜಿಲ್ಲೆಯ ಪ್ರಸಿದ್ಧ ಜಾತ್ರೆಯಲ್ಲೊಂದಾದ ಶ್ರೀ ಗವಿಸಿದ್ದೇಶ್ವರ ಜಾತ್ರೆಯನ್ನು ಅತ್ಯಂತ ಅದ್ಭುತ ರೀತಿಯಲ್ಲಿ ಆಚರಿಸುತ್ತಾರೆ. ಪ್ರತಿ ವರ್ಷವು ಈ ಜಾತ್ರೆ ಜನವರಿ ತಿಂಗಳಲ್ಲಿ ಬರುವುದು. ಈ ಜಾತ್ರೆಯ ಸಂದರ್ಭದಲ್ಲಿ ಇತರ ಜನಾಂಗದವರಂತೆ ಮಾದಿಗರು ತಮ್ಮ ಮನೆಗಳನ್ನು ಸುಣ್ಣ-ಬಣ್ಣಗಳಿಂದ ಬಳಿದು ಅಲಂಕರಿಸುತ್ತಾರೆ. ಹಾಸಿಗೆ, ಹೊದಿಕೆಗಳನ್ನು ಸ್ವಚ್ಛಗೊಳಿಸುತ್ತಾರೆ. ಮನೆಯಲ್ಲಿ ಮಕ್ಕಳಿಗೆ, ಹಿರಿಯರಿಗೆ ಹೊಸ ಬಟ್ಟೆಗಳನ್ನು ಹೊಲಿಸುವುದು ಸಾಮಾನ್ಯವಾಗಿರುತ್ತದೆ. ಒಂದು ತಿಂಗಳವರಗೆ ಈ ಜಾತ್ರೆಯು ನಡೆಯುತ್ತಿದೆ.

ಹುಲಿಗೆಮ್ಮ : ಕೊಪ್ಪಳ ತಾಲೂಕಿನ ಹುಲಿಗೆಮ್ಮ ದೇವಿ ಬಹುತೇಕ ಮಾದಿಗರ ಮನೆಯ ದೇವರು. ವಿಶೇಷವಾಗಿ ಇವರು ಭಾರತ ಹುಣ್ಣಿಮೆ, ಶೀಗಿಹುಣ್ಣಿಮೆಗಳಲ್ಲಿ ನಡೆಯುವ ಜಾತ್ರೆಗಳಲ್ಲಿ ತಪ್ಪದೇ ಪಾಲ್ಗೊಳ್ಳುತ್ತಾರೆ. ಹುಣ್ಣಿಮೆ ಮುಗಿದು ಎಂಟನೇ ದಿನಕ್ಕೆ ಅಲ್ಲಿಗೆ ಹೋಗಿ ಅಲ್ಲಿ ಅಡುಗೆ ಮಾಡಿ ಹಡಲಿಗೆ (ಪಡ್ಡಲಿಗೆ) ಯನ್ನು ತುಂಬಿಸುತ್ತಾರೆ. ಅದರಲ್ಲಿ ಕಡಬು, ಅನ್ನ, ಬೆಲ್ಲ, ಎಲೆ, ಅಡಿಕೆ, ಗಜ್ಜರಿ, ಉಳ್ಳಾಗಡ್ಡಿಸೊಪ್ಪು, ಬದನೆಕಾಯಿ, ಅರಿಶಿಣ, ಉತ್ತತ್ತಿ, ಬಾಳೆಹಣ್ಣು ಹಾಗೂ ನಾಣ್ಯಗಳನ್ನು ಹಾಕಿ ಜೋಗತಿಯನ್ನು ಕರೆಯಿಸಿ ಪೂಜೆ ಮಾಡುವರು. ಜೋಗತಿಯರು 'ಎಕ್ಕಯ್ಯ ಜೋಗಯ್ಯ ಎಕ್ಕಯ್ಯ ಜೋಗಯ್ಯ ನಿನ್ನಾಲ್ಕುದೋ... ಉಧೋ' ಎನ್ನುತ್ತಾ ದೇವರಿಗೆ ಚೌರಿ ಬೀಸುತ್ತ ಪೂಜೆ ಮಾಡುವರು. ಇದಕ್ಕೆ 'ಜೋಗ ಹಾಕುವುದು' ಎನ್ನುತ್ತಾರೆ. ಈ ಎಲ್ಲಾ ಕಾರ್ಯಕ್ಕೆ 'ಹುಣ್ಣಿಮೆ ಮಾಡುವುದು' ಎಂದು ಕರೆಯುತ್ತಾರೆ.

ಗಾಳೆಮ್ಮ : ಮಾದಿಗ ಸಮುದಾಯದವರು ಆರಾಧಿಸುವ ಮತ್ತೊಂದು ದೇವಿ ಎಂದರೆ ಗಾಳೆಮ್ಮದೇವಿ. ಈ ದೇವಿಗೆ ಕುರಿ, ಕೋಳಿ, ಬಲಿಕೊಡುವ ಸಂಪ್ರದಾಯವನ್ನು ರೂಢಿಸಿಕೊಂಡಿದ್ದಾರೆ. ಕೊಪ್ಪಳ ತಾಲೂಕಿನ ಹೊಸಪೇಟೆ ರಸ್ತೆಯಲ್ಲಿರುವ ಗಾಳೆಮ್ಮನಗುಡಿಗೆ ಕೊಪ್ಪಳ ನಗರದ ಮಾದಿಗರು ಭಕ್ತಿಯಿಂದ ನಡೆದುಕೊಳ್ಳುತ್ತಾರೆ. ಇವರುಗಳ ಮನೆಯಲ್ಲಿ ಯಾವುದೇ ಶುಭಕಾರ್ಯ ನಡೆದರು ವಿಶೇಷವಾಗಿ ಮದುವೆಯ ಸಂದರ್ಭದಲ್ಲಿ ಗಾಳೆಮ್ಮದೇವಿಗೆ ಕುರಿ, ಕೋಳಿಯನ್ನು ಬಲಿಕೊಟ್ಟು (ಹರಕೆನೀಡಿ) ನಂತರವೇ ಮುಂದಿನ ಕಾರ್ಯಗಳನ್ನು ಮಾಡುವರು. ಹರಕೆ ಕೊಡುವ ದಿನ ಮನೆಯನ್ನು ಶುಚಿಗೊಳಿಸಿ ಮನೆಯವರೆಲ್ಲ ಸ್ನಾನಮಾಡಿ ಶುಭ್ರವಾದ ಬಟ್ಟೆಯನ್ನು ತೊಟ್ಟು ಹಣ್ಣು ಕಾಯಿಗಳ ಜೊತೆಗೆ ತಾವು ತಂದ ಹರಕೆಯ ಕುರಿಯನ್ನು ಗಾಳೆಮ್ಮ ದೇವಿಯ ಗುಡಿಗೆ ತೆಗೆದುಕೊಂಡು ಹೋಗಿ ದೇವಿಗೆ ಪೂಜೆ ಸಲ್ಲಿಸಿದ ಮೇಲೆ ಆ ಕುರಿಯ ಕೊರಳಿನಲ್ಲಿ ಹೂವಿನ ಹಾರವನ್ನು ಹಾಕಿ ದೇವಸ್ಥಾನದಲ್ಲಿ ಪ್ರದಕ್ಷಿಣೆ ಹಾಕಿಸಿ ದೇವಿಗೆ ಹರಕೆ ಸಲ್ಲಿಸುತ್ತಾರೆ. ನಂತರ ಹೂ, ಹಣ್ಣು, ದಂಡಿ, ಸೀರೆಗಳಿಂದ ಅಲಂಕರಿಸಿ ಕಾಯಿ ಕರ್ಪೂರಗಳಿಂದ ಪೂಜೆ ಸಲ್ಲಿಸಿ ಪೂಜಾರಿಯಾದವರು ಆ ಕುರಿಯನ್ನು ಪೂಜಿಸಿ ಬ್ಯಾಟಿಯನ್ನು ನೀಡಲು ಸಮ್ಮತಿಸುತ್ತಾರೆ. ನಂತರ ಅದನ್ನು ತೆಗೆದುಕೊಂಡು ಹೊರಗಡೆ ಕೊಯ್ದು ಚರ್ಮ, ಮಾಂಸವನ್ನು ಬೇರ್ಪಡಿಸಿ ಮಾಂಸದ ಅಡುಗೆ ಮಾಡಿ ದೇವಿಗೆ ನೈವೇದ್ಯ ಮಾಡಿ ತಾವು ಊಟ ಮಾಡಿಬರುತ್ತಾರೆ.

ಮೈಲಾರಲಿಂಗನ ಜಾತ್ರೆ : ಪ್ರತಿವರ್ಷ ಮಾಘ ಮಾಸದಲ್ಲಿ ಮೈಲಾರಲಿಂಗನ ಕಾರಣೀಕೋತ್ಸವ ನಡೆಯುವ ಸಮಯದಲ್ಲಿ ಕೊಪ್ಪಳ ನಗರದ ಮಾದಿಗರಲ್ಲಿ ಕೆಲವರು ಜಾತ್ರೆಗೆ ಹೋಗಿ ಮೈಲಾರಲಿಂಗನ ದರುಶನ ಪಡೆದು ಪೂಜೆಸಲ್ಲಿಸುತ್ತಾರೆ. ನಂತರ ಹಿಂತಿರುಗಿ ಬಂದ ಬಳಿಕ, ಜಾತ್ರೆಯಿಂದ ತಾವು ತಂದ ಎಲ್ಲಾ ಸಾಮಾನುಗಳನ್ನು ಇಟ್ಟು ಪೂಜೆ ಮಾಡುತ್ತಾರೆ. ಇದಕ್ಕೆ 'ಬೆಳಕು ಹೊರಡಿಸುವುದು' ಎಂದು ಕರೆಯುತ್ತಾರೆ.

* * *

ಅಧ್ಯಾಯ : 5

ಆರ್ಥಿಕ, ಶೈಕ್ಷಣಿಕ ಹಾಗೂ ರಾಜಕೀಯ ಜೀವನ

ಆರ್ಥಿಕ ಜೀವನ :

ಯಾವುದೇ ಒಂದು ಸಮೂಹ ಅಸ್ತಿತ್ವದಲ್ಲಿ ಉಳಿಯಲು ಆರ್ಥಿಕರಂಗ ಪ್ರಧಾನ ಪಾತ್ರವಹಿಸುತ್ತದೆ. ಅವರ ಆರ್ಥಿಕ ವ್ಯವಸ್ಥೆಯು ಆ ಸಮುದಾಯದವರು ನಿರ್ವಹಿಸುವ ಕುಲಕಸಬು ಇತರ ವೃತ್ತಿಗಳನ್ನು ಅವಲಂಭಿಸಿರುತ್ತದೆ. ಮಾದಿಗ ಸಮುದಾಯದವರು ಹುಟ್ಟಿನಿಂದಲೇ ಕಸುಬನ್ನಾಧಾರಿತ ಜನಾಂಗವಾಗಿದ್ದು ಇವರ ಮೂಲ ಕಸಬು ಚರ್ಮಗಾರಿಕೆ, ಪಾದರಕ್ಷೆಗಳನ್ನು ತಯಾರಿಸುವುದಾಗಿದೆ. ಪಾದರಕ್ಷೆ ತಯಾರಿಕಾ ಪೂರಕ ಸಾಮಾಗ್ರಿ ಹಾಗೂ ಪಾದರಕ್ಷೆಗಳ ಮಾರಾಟ ಇವರ ಆರ್ಥಿಕ ಸ್ಥಿತಿಯ ಮೂಲವಾಗಿದೆ. ಹಿಂದಿನ ಕಾಲದಲ್ಲಿ ಹೆಚ್ಚಾಗಿ ಈ ಸಮುದಾಯದವರು ಮನೆಯಲ್ಲಿಯೇ ಪಾದರಕ್ಷೆಗಳನ್ನು ತಯಾರಿಸಿ ಮಾರಾಟ ಮಾಡುತ್ತಿದ್ದರು. ಮಾರಾಟದಿಂದ ಬಂದ ಅಲ್ಪ ಹಣವನ್ನು ತಮ್ಮ ಜೀವನೋಪಾಯಕ್ಕಾಗಿ ಬಳಸುತ್ತಿದ್ದರು. ಮುಂದೆ ಕ್ರಮೇಣವಾಗಿ ಸಣ್ಣ ಸಣ್ಣ ಅಂಗಡಿಗಳನ್ನು ತೆರೆದು ಈ ಮೂಲಕ ಪಾದರಕ್ಷೆಗಳ ತಯಾರಿಕೆಯಲ್ಲಿ ತೊಡಗಿಕೊಂಡರು. ಮನೆಯಲ್ಲಿ ಪಾದರಕ್ಷೆಗಳನ್ನು ತಯಾರಿಸುವ ಪದ್ಧತಿಯನ್ನು ಇಂದಿಗೂ ನಾವು ಹಳ್ಳಿಯ ಪ್ರದೇಶದಲ್ಲಿಯ ಮಾದಿಗ ಸಮುದಾಯದವರಲ್ಲಿ ಕಾಣಬಹುದು. ಆದರೆ ನಿಜಾಮರ ಕಾಲದಿಂದಲೂ ಕೊಪ್ಪಳ ನಗರವು ಒಂದು ಪ್ರಮುಖ ವ್ಯಾಪಾರ ಕೇಂದ್ರವಾಗಿದ್ದರಿಂದ ಮಾದಿಗ ಸಮುದಾಯವರು ಪಾದರಕ್ಷೆ ತಯಾರಿಸುತ್ತಿದ್ದ ಮೂಲ ವೃತ್ತಿಗೆ ಪೆಟ್ಟು ಬಿದ್ದಿತು. ದೊಡ್ಡ ದೊಡ್ಡ ನಗರಗಳಲ್ಲಿ ಕಂಪನಿಗಳಿಂದ ತಯಾರಾದ ಪಾದರಕ್ಷೆಗಳು ಕೊಪ್ಪಳ ನಗರಕ್ಕೆ ಬಂದು ಇಲ್ಲಿ ವ್ಯಾಪಾರವಾಗುತ್ತಿದ್ದರಿಂದ ಆಧುನಿಕ ಹೊಸ ಹೊಸ ಶೈಲಿಯ ಪಾದರಕ್ಷೆಗಳಿಗೆ ಜನರು ಮಾರು ಹೋಗಿ ಈ ಸಮುದಾಯದವರು ತಯಾರಿಸುತ್ತಿದ್ದ ಪಾದರಕ್ಷೆಗಳನ್ನು ಕೇಳುವವರೆ ಇಲ್ಲದಂತೆ ಆಯಿತು. ಇದಕ್ಕೆ ಪರ್ಯಾಯವಾಗಿ ಈ ಸಮುದಾಯದವರು ಜೀವನೋಪಾಯಕ್ಕಾಗಿ ಬೇರೊಂದು ಉದ್ಯೋಗವನ್ನು ಆಯ್ಕೆಮಾಡಿಕೊಳ್ಳುವುದು ಅನಿವಾರ್ಯವಾಯಿತು. ತಮ್ಮ ಪಾರಂಪರಿಕ ವೃತ್ತಿಯನ್ನು ತ್ಯಜಿಸಿ ಇತರ ವೃತ್ತಿಗಳ ಮೇಲೆ ಅವಲಂಬಿತ ಜೀವನ ಅವರನ್ನು ಅಷ್ಟೊಂದು ಬೇಗನೆ ಸಬಲರನ್ನಾಗಿ ಮಾಡಲಿಲ್ಲ.

ಕೊಪ್ಪಳ ನಗರದ ಸುತ್ತಮುತ್ತಲಿನ ಸಮೀಪದ ಹಳ್ಳಿಯ ಜನರು ಯಾವಾಗಲಾದರೂ ಒಮ್ಮೆ ಪಾದರಕ್ಷೆ ಮಾಡುವಂತೆ ಹೇಳಿದರೆ, ಇವರಿಂದ ಅದು ಸಾಧ್ಯವಾಗದ ಪರಿಸ್ಥಿತಿ ಇರುತ್ತದೆ. ಯಾಕೆಂದರೆ ಅವರುಗಳ ಬೇಡಿಕೆಯ ಒಂದೆರೆಡು ಜೊತೆ ಪಾದರಕ್ಷೆ ತಯಾರಿಕೆಗೆ ಸಾಕಷ್ಟು ಸಮಯ ವ್ಯಯಿಸಿ, ಚರ್ಮವನ್ನು ಹದ ಮಾಡಿ ನೈಪುಣ್ಯತೆಯಿಂದ ಮಾಡಿದರೆ ಅವರುಗಳಿಗೆ ಸಿಗುವುದು ಕನಿಷ್ಟ ಕೂಲಿಯಷ್ಟೆ. ಅದರಿಂದ ಲಾಭದೊರೆಯುತ್ತಿಲ್ಲ. ಆದ್ದರಿಂದ ಮಾದಿಗರು ಅನಿವಾರ್ಯವಾಗಿ ಈ ವೃತ್ತಿಯನ್ನು ತ್ಯಜಿಸಿರುವುದನ್ನು ನಾನು ಮಾಡಿದ ಕ್ಷೇತ್ರಕಾರ್ಯದಿಂದ ಅರಿತುಕೊಂಡೆ. ಅದಕ್ಕೆ ಪರ್ಯಾಯವಾಗಿ ಉದ್ಯೋಗಗಳನ್ನು ಕೊಪ್ಪಳ ನಗರದ ಮಾದಿಗರು ಮಾಡುತ್ತಿದ್ದಾರೆ.

ಪೌರಕಾರ್ಮಿಕರಾಗಿ :

ನಗರಸಭೆ ಕಾರ್ಯಾಲಯದಲ್ಲಿ ಜಾಡಿ ಮಾಲಿಗಳಾಗಿ ಚರಂಡಿ ಸ್ವಚ್ಛಗೊಳಿಸುವ ಕಾರ್ಯದಲ್ಲಿ ಬಹುತೇಕ ಮಾದಿಗರು ಕೆಲಸ ಮಾಡುತ್ತಿದ್ದಾರೆ. ಇದು ಸರ್ಕಾರಿ ಉದ್ಯೋಗವಾಗಿದ್ದು ನಗರ ಸಭೆಯಲ್ಲಿ ೧೩೦-೧೫೦ ರವರೆಗೆ ಪೌರಕಾರ್ಮಿಕರಿದ್ದಾರೆ. ಅದರಲ್ಲಿ ಮಾದಿಗರು ೯೦-೧೧೦ರ ವರೆಗೆ ಇದ್ದಾರೆ. ಪರ್ಮಿನೆಂಟ್, ಅರೆದಿನಗೂಲಿ ಹಾಗೂ ದಿನಗೂಲಿ ನೌಕರರಾಗಿ, ಮಹಿಳೆಯರು ಪುರುಷರು ದುಡಿಯುತ್ತಿದ್ದಾರೆ. ಬೇರೆ ಸರ್ಕಾರಿ ಕೆಲಸಕ್ಕಿಂತ ಈ ಪೌರಕಾರ್ಮಿಕರ ಕೆಲಸ ಭಿನ್ನವಾಗಿದೆ. ಬೆಳಿಗ್ಗೆ ೫-೦೦ಗಂಟೆಗೆ ಎದ್ದು ಈ ಕಾರ್ಮಿಕರು ಹೋಗಬೇಕು. ಅವರು ಕಛೇರಿಯಲ್ಲಿ ಹಾಜರಾತಿ ತೆಗದುಕೊಂಡ ಬಳಿಕ ಅವರವರಿಗೆ ನಿಗದಿಗೊಳಸಿದ ಸ್ಥಳಕ್ಕೆ ಹೋಗಿ ಕಸ ಬಳಿಯುವುದು, ಚರಂಡಿ ಸ್ವಚ್ಛಗೊಳಿಸುವುದನ್ನು ಮಾಡಬೇಕು. ಸಾಮಾನ್ಯವಾಗಿ, ರಸ್ತೆಯಲ್ಲಿನ ಕಸವನ್ನು ಮಹಿಳೆಯರು ಬಳಿಯುವರು, ಚರಂಡಿಯನ್ನು ಸ್ವಚ್ಛಗೊಳಿಸುವುದು ಪುರುಷರ ಕೆಲಸವಾಗಿರುತ್ತದೆ. ಮತ್ತು ಚರಂಡಿಯಿಂದ ತೆಗೆದ ಕಸವನ್ನು ನಗರಸಭೆಯ ವಾಹನದ ಸಹಾಯದಿಂದ ಪುರುಷರು ಮಹಿಳೆಯರು ತೆಗೆದುಕೊಂಡು ಹೋಗಿ ಊರಾಚೆ ಹಾಕಿ ಬರುತ್ತಾರೆ.

ನಗರಸಭೆಯ ಸಂಬಳವೇ ತಮ್ಮ ಜೀವನದ ಆರ್ಥಿಕ ಮೂಲವಾಗಿ ಕೊಪ್ಪಳದ ಮಾದಿಗರು ನಂಬಿಕೊಂಡಿದ್ದಾರೆ. ಇದರಲ್ಲಿ ಪರ್ಮಿನೆಂಟ್, ದಿನಗೂಲಿ ಮತ್ತು ಅರೆ ದಿನಗೂಲಿ ನೌಕರರಾಗಿದ್ದಾರೆ. ಪರ್ಮಿನೆಂಟ್ ನೌಕರರಿಗೆ ತಿಂಗಳಿಗೆ ಸರಿಯಾಗಿ ಸಂಬಳ ಸಿಗುತ್ತಿದ್ದು, ದಿನಗೂಲಿ ನೌಕರರಿಗೆ ೪-೫ ತಿಂಗಳಿಗೊಮ್ಮೆ ಸಂಬಳಸಿಗುತ್ತದೆ. ಈ ದಿನಗೂಲಿ ನೌಕರರು ಬಹಳಷ್ಟು ಆರ್ಥಿಕ ತೊಂದರೆ ಅನುಭವಿಸುವುದನ್ನು ಕ್ಷೇತ್ರಕಾರ್ಯದಲ್ಲಿ ಗಮನಿಸಲಾಗಿದೆ.

ಹಮಾಲಿ :

ಕೊಪ್ಪಳ ನಗರದ ಮಾದಿಗ ಸಮುದಾಯದವರ ಇನ್ನೊಂದು ಆರ್ಥಿಕ ಮೂಲವೆಂದರೆ ಹಮಾಲಿ ಮಾಡುವುದು. ಯುವಕರು, ನಡುವಯಸ್ಸಿನವರು ಈ ಕೆಲಸವನ್ನು ಹೆಚ್ಚು ಮಾಡುತ್ತಾರೆ. ಮಾದಿಗಕೇರಿಗೆ ಅಣತಿದೂರದಲ್ಲಿಯ ತರಕಾರಿ ಮಾರುಕಟ್ಟೆ ಹಾಗೂ ಕೃಷಿ ಮಾರುಕಟ್ಟೆಗೆ ಬರುವ ತರಕಾರಿ ಹಾಗೂ ಕೃಷಿ ಉತ್ಪನ್ನಗಳನ್ನು ತೂಕಮಾಡುವುದು ಚೀಲ ಹೊರುವುದು ಇತ್ಯಾದಿ.

ಅಂಗಡಿಕಾರರು ತಮ್ಮ ಅಂಗಡಿಗಳಿಗೆ ಬರುವ ಸಾಮಾಗ್ರಿಗಳನ್ನು ವ್ಯಾಪಾರವಾದ ಬಳಿಕ ಅದರಿಂದ ಹಮಾಲಿಯಂತೆ ಇಂತಿಷ್ಟು ಅಂತ ದುಡ್ಡು ಕೊಡುತ್ತಾರೆ. ಅದು ಪ್ರತಿದಿನ ಸಿಗುವಂತಹದಾಗಿರುತ್ತದೆ. ಈ ರೀತಿ ಹಮಾಲಿಯಿಂದ ಬಂದ ಹಣವನ್ನು ತಮ್ಮ ಜೀವನೋಪಾಯಕ್ಕೆ ಉಪಯೋಗಿಸಿಕೊಳ್ಳುತ್ತಾರೆ. ಯಾರುಬೇಕೆಂದರೆ ಅವರು ಈ ಹಮಾಲಿ ಮಾಡುವಂತಿಲ್ಲ. ಅವರದೇ ಆದ ಸಂಘವಿದ್ದು ಅಲ್ಲಿ ಹೊಸದಾಗಿ ಈ ವೃತ್ತಿ ಕೈಗೊಳ್ಳುವವರು ನೋಂದಣಿ ಮಾಡಿಸಿರಬೇಕು. ಅದಕ್ಕೆ ಅವರುಗಳು "ಬಿಲ್ಲಾ" ತೆಗೆಸುವುದು ಎಂದು ಕರೆಯುತ್ತಾರೆ. ಆ ನಂತರವೆ ಅವರು ಅಂಗಡಿಗಳಲ್ಲಿ (ತರಕಾರಿ, ಕೃಷಿಮಾರುಕಟ್ಟೆಯ ಅಂಗಡಿಗಳಲ್ಲಿ) ಕೆಲಸ ಮಾಡಲು ಅರ್ಹರಾಗಿತ್ತಾರೆ. ಅನಧಿಕೃತವಾಗಿ ಈ ಹಮಾಲಿ ವೃತ್ತಿ ಮಾಡಿದರೆ ಸಂಘದವರು ಅವರನ್ನು ಕರೆಯಿಸಿ ದಂಡ ಹಾಕುವ ಪದ್ಧತಿ ಇದೆ.

ವ್ಯವಸಾಯ :

ಕೊಪ್ಪಳ ನಗರದ ಮಾದಿಗರಲ್ಲಿ ಬಹುತೇಕರಿಗೆ ಭೂಮಿ ಅಂದರೆ (ಕೃಷಿ) ಭೂಮಿ ಇಲ್ಲದ ಕಾರಣ ವ್ಯವಸಾಯ ಅಲ್ಲಿಯ ಜನರಿಗೆ ಅಷ್ಟೊಂದು ಪರಿಚಯವಿಲ್ಲ. ಆದರೆ ಇಳಿವಯಸ್ಸಿನವರು ಮುದುಕರು ಕೃಷಿ ಕಾರ್ಮಿಕರಾಗಿ ಕೂಲಿಕಾರರಾಗಿ ದುಡಿಯುತ್ತಾರೆ. ಕೊಪ್ಪಳ ನಗರವು ಬಹಳಷ್ಟು ಹಿಂದಿನಿಂದಲೂ ವಾಣಿಜ್ಯನಗರವಾಗಿದ್ದರಿಂದ ಇಲ್ಲಿ ಮಾದಿಗರು ಹಳ್ಳಿಯವರಂತೆ ತಮ್ಮದೇ ಆದ 'ಒಕ್ಕಲು' ಕೃಷಿ ಭೂಮಿಯನ್ನು ಅವಲಂಬಿಸಿಲ್ಲ ಆದರೆ ನಗರದಲ್ಲಿ ಯಾವುದೇ ದನ, ಎಮ್ಮೆ, ಎತ್ತುಗಳು ಸತ್ತರೆ ಇಂದಿಗೂ ಕೂಡಾ ಮಾದಿಗರೆ ಅದನ್ನು ಹೊತ್ತು ತಂದು ಊರ ಹೊರಗೆ ಅದರ ಚರ್ಮವನ್ನು ಬೇರ್ಪಡಿಸಿ ಮಾರುತ್ತಾರೆ. ಅದರಿಂದ ಬಂದ ಹಣ ಉಪಯೋಗಿಸಿಕೊಳ್ಳುತ್ತಾರೆ.

ವ್ಯಾಪಾರ :

ಮಾದಿಗ ಜನಾಂಗವು ಮೂಲತಃ ಚರ್ಮದ ವೃತ್ತಿಯಾಧಾರಿತವಾಗಿದ್ದು, ತಮ್ಮ ಉಪಜೀವನಕ್ಕೆ ಮೊದಲು ಸಂಪೂರ್ಣವಾಗಿ ಅದರ ಮೇಲೆಯೇ ಅವಲಂಭಿತರಾಗಿದ್ದರು ಆದರೆ ಅತೀಯಾದ ಆಧುನಿಕತೆ, ತಂತ್ರಜ್ಞಾನದ ಬಳಕೆ ಜಾಗತೀಕರಣ, ನಗರೀಕರಣ ಮುಂತಾದವುಗಳ ಅಭಿವೃದ್ಧಿಯಿಂದಾಗಿ 'ಮಾದಿಗ'

ವಂಶವೃತ್ತಿಯಾದ ಚರ್ಮಗಾರಿಕೆ, ಪಾದರಕ್ಷೆ ತಯಾರಿಕೆ ನೇಪಥ್ಯಕ್ಕೆ ಸರಿದಿದೆ. ಇದರ ಹೊರತು ಮಾದಿಗರಿಗೆ ಬೇರೆ ವ್ಯಾಪಾರ ಮಾಡುವುದು ಒಗ್ಗಲಿಲ್ಲ ಎಂಬುದು ಕ್ಷೇತ್ರಕಾರ್ಯದಲ್ಲಿ ಗಮನಿಸಿದ ಅಂಶವಾಗಿದೆ.

ಸರ್ಕಾರಿ ನೌಕರಿಯಲ್ಲಿ :

ನಗರದ ಮಾದಿಗರ ಜನಾಂಗದವರಲ್ಲಿ ಅನಕ್ಷರತೆ ಇಂದಿಗೂ ಎದ್ದು ಕಾಣುತ್ತಿದ್ದು, ಶಿಕ್ಷಣ ಪಡೆದವರಲ್ಲಿ ಕೆಲವು ಸರ್ಕಾರಿ, ಅರೆಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳಲ್ಲಿ ಉದ್ಯೋಗಕ್ಕೆ ಸೇರಿದ್ದಾರೆ. ಆದರೆ ಅವರುಗಳ ಪ್ರಮಾಣ ಬಹಳ ಕಡಿಮೆ ಇದೆ. ಇದರಿಂದ ಅವರ ಕುಟುಂಬದ ಮೇಲೆ ಮಹತ್ವಪೂರ್ಣ ಹಾಗೂ ಗಮನಾರ್ಹವಾದ ಬದಲಾವಣೆಗಳಾಗುತ್ತವೆ.

ಇತರೆ :

ಕೊಪ್ಪಳ ಮಾದಿಗರಲ್ಲಿ ಇತ್ತೀಚಿನ ದಿನಗಳಲ್ಲಿ ಆದ ಅನೇಕ ಬದಲಾವಣೆಗಳಿಗೆ ಹೊಂದಿಕೊಂಡ ಯುವಕರು ಬೇರೆ ಬೇರೆ ಸ್ವಯಂ ಉದ್ಯೋಗಗಳನ್ನು ಮಾಡಲು ಮುಂದಾಗುತ್ತಿದ್ದಾರೆ. ಆದರೆ ದಲಿತರಲ್ಲಿಯೇ ಅತಿ ಬಡವರಾಗಿರುವ ಮಾದಿಗ ಸಮುದಾಯದವರು ಸ್ವಲ್ಪ ಆರ್ಥಿಕ ಸಬಲರಾಗುತ್ತಿದ್ದಾರೆ ಎಂಬ ಅಂಶವು ಕ್ಷೇತ್ರಕಾರ್ಯದಲ್ಲಿ ಅರಿತುಕೊಂಡಿದ್ದಾಗಿದೆ.

೫.೨ ಶಿಕ್ಷಣ :

ಅರ್ಥಾನ್ವೇಷಣೆಯೇ ಜ್ಞಾನದ ಮೂಲ. ಈ ಜ್ಞಾನವನ್ನು ಪಡೆಯುವ ವಿಧಾನವೇ ಶಿಕ್ಷಣ, ಆಧುನೀಕರಣ, ಸಂಸ್ಕೃತೀಕರಣ, ತಾಂತ್ರಿಕತೆ, ಪಾಶ್ಚಾತ್ಯರ ಭೌತಿಕ ಸಂಸ್ಕೃತಿಯ ಸೌಲಭ್ಯಗಳ ಒಟ್ಟು ಪರಿಸರದಲ್ಲಿ ಮಾದಿಗರು ಹೊಸ ಬದುಕಿನತ್ತ ಸಾಗುತ್ತಿದ್ದಾರೆ. ಸಾಂಪ್ರದಾಯಿಕ ವೃತ್ತಿಯಲ್ಲಿ ತೊಡಗಿರುವ ಇವರು ತಮ್ಮ ಮಕ್ಕಳಿಗೆ ವೃತ್ತಿಯನ್ನು ಕಲಿಸಿಕೊಡುತ್ತಿಲ್ಲ. ಕಾರಣವೆಂದರೆ ಹಿಂದೆ ತಮ್ಮ ಪಾರಂಪರಿಕ ವೃತ್ತಿಯಲ್ಲಿ ಶ್ರಮವಹಿಸಿಯಾದರೂ ನೆಮ್ಮದಿಯಿಂದ ಬದುಕುತ್ತಿದ್ದರು. ಆದರೆ ಈಗ ಅಂಥ ಪರಿಸ್ಥಿತಿ ಉಳಿದಿಲ್ಲ. ಮಾದಿಗರಲ್ಲಿ ಅನಕ್ಷರಸ್ಥರು, ಬಡವರು ಇದ್ದರೂ, ಶಿಕ್ಷಣದ ಬಗ್ಗೆ ಆಸಕ್ತಿಇಲ್ಲದಿರುವುದು ಬಹಳಷ್ಟು ಕಡೆ ಕಂಡುಬರುವುದು ಸಹಜ ಅದಕ್ಕೆ ಕೊಪ್ಪಳ ನಗರದ ಮಾದಿಗ ಜನಾಂಗವು ಹೊರತಲ್ಲ.

ಕೊಪ್ಪಳ ನಗರದ ಮಾದಿಗರಿಗೆ ಇತ್ತೀಚಿನ ವರ್ಷಗಳಿಂದ ಶಿಕ್ಷಣದ ಮಹತ್ವ ಅರಿವಾಗುತ್ತದೆ. ಅದಕ್ಕೆ ತಮ್ಮ ಮಕ್ಕಳನ್ನು ಶಾಲೆಗೆ ದಾಖಲಿಸುವ ಪ್ರಮಾಣ ಅಧಿಕವಾಗುತ್ತಿದೆ. ಬಹುತೇಕ ಮಾದಿಗ ಜನಾಂಗದ ಮಕ್ಕಳು ಪ್ರಾಥಮಿಕ ಶಿಕ್ಷಣವನ್ನು ಪಡದುಕೊಳ್ಳುವಲ್ಲಿ ಸಫಲರಾಗುತ್ತಿದ್ದಾರೆ. ಆದರೆ ಅವರಿಗೆ ಅಷ್ಟೊಂದು ಪರಿಣಾಮಕಾರಿಯಾದ ಗುಣಮಟ್ಟದ ಶಿಕ್ಷಣ ಸಿಕ್ಕಿಲ್ಲ ಎಂಬ ಅಂಶವನ್ನು ನಮ್ಮ ಕ್ಷೇತ್ರಕಾರ್ಯದಲ್ಲಿ ಗಮನಿಸಿದೆ. ಯಾಕೆಂದರೆ ಇಂದಿನ ದಿನಗಳಲ್ಲಿ, ಸರ್ಕಾರಿ ಶಾಲೆಗಳಿಗೆ ಮತ್ತು ಖಾಸಗಿ ಶಿಕ್ಷಣ ಸಂಸ್ಥೆಗಳ

ಮಧ್ಯ ಸ್ಪರ್ಧೆ ಏರ್ಪಟ್ಟಿದೆ. ಸರ್ಕಾರಿ ಶಾಲೆಗಳಲ್ಲಿ ದೊರೆಯುವ ಶಿಕ್ಷಣ ಅಷ್ಟೊಂದು ಗುಣಮಟ್ಟವಾಗಿಲ್ಲ. ಸರ್ಕಾರದಿಂದ ನೇಮಕವಾಗಿರುವಂತ ಶಿಕ್ಷಕರಲ್ಲಿ ಬಹುತೇಕರು ಸರಿಯಾಗಿ ಪಾಠಮಾಡುವುದಿಲ್ಲ. ಮಕ್ಕಳು ಕಲಿಯಲಿ ಬಿಡಲಿ ಅವರುಗಳಿಗೆ ಪ್ರತಿತಿಂಗಳು ಸಂಬಳ ಬರುತ್ತಿದೆ ಎಂಬ ಮನೋಭಾವ ಇದೆ. ಇದರಿಂದ ಮಕ್ಕಳ ಬಗ್ಗೆ ಅಷ್ಟೊಂದು ವಿಶೇಷವಾದ ಕಾಳಜಿ ವಹಿಸುವುದು ಕಂಡು ಬರುವುದಿಲ್ಲ. ಮಕ್ಕಳನ್ನು ಶಾಲೆಯಲ್ಲಿ ದಂಡಿಸಿದರೆ ಪಾಲಕರು ಎಲ್ಲಿ ತಮ್ಮನ್ನು ಬೈಯುತ್ತಾರೆ ಎಂಬ ಆತಂಕ ಕೆಲ ಶಿಕ್ಷಕರಲ್ಲಿ ಇರುವದು. ಶಿಕ್ಷಕರಿಗೆ ಶಾಲೆಗಳಲ್ಲಿ ಇತ್ತೀಚಿನ ಹೆಚ್ಚುವರಿ ಕೆಲಸಗಳಾದ ಬಿಸಿಯೂಟ ಯೋಜನೆಯಂತ ಅನೇಕ ಯೋಜನೆಗಳು ಶಿಕ್ಷಕರಿಗೆ ಹೊರೆಯಾಗುತ್ತಿವೆ. ಇನ್ನೂ ಅನೇಕ ಕಾರಣಗಳಿಂದ ಸರ್ಕಾರಿ ಶಾಲೆಗಳಲ್ಲಿ ಪರಿಣಾಮಕಾರಿಯಾದ ಶಿಕ್ಷಣ ದೊರೆಯುತ್ತಿಲ್ಲ. ಸ್ಥಿತಿವಂತರು ಹಾಗೂ ಇತರ ಜಾತಿಯ ಮಕ್ಕಳಿಗೆ ಖಾಸಗಿ ಶಾಲೆಯಲ್ಲಿ ದೊರೆಯುವ ಶಿಕ್ಷಣ ಮಾದಿಗ ಮಕ್ಕಳಿಗೆ ಸಿಗುತ್ತಿಲ್ಲ. ಖಾಸಗಿ ಶಾಲೆ ಸಂಸ್ಥೆಗಳಿಗೆ ಮಕ್ಕಳನ್ನು ಸೇರಿಸುವಷ್ಟು ಮಾದಿಗ ಜನಾಂಗದವರು ಸಶಕ್ತರಿಲ್ಲ. ಅಲ್ಲಿಯ ಶುಲ್ಕ ದುಬಾರಿ, ಡೊನೇಷನ್ ಕೊಡಲು ಬಹುತೇಕ ಮಾದಿಗರು ಆರ್ಥಿಕವಾಗಿ ಸ್ಥಿತಿವಂತರಾಗಿಲ್ಲ.

ಇದೆಲ್ಲದರ ಪರಿಣಾಮವಾಗಿ ಖಾಸಗಿ ಶಾಲೆಗಳಲ್ಲಿ ಶಿಕ್ಷಣ ಪಡೆದ ಮಕ್ಕಳೊಂದಿಗೆ ಸರ್ಕಾರಿ ಶಾಲೆಯಲ್ಲಿ ಶಿಕ್ಷಣ ಪೂರೈಸಿದ ಮಾದಿಗರ ಮಕ್ಕಳು ಸ್ಪರ್ಧೆ ಮಾಡಲು ಯೋಗ್ಯರಾಗಿರುವುದಿಲ್ಲ. ಮುಂದೆ ಇತರ ಮಕ್ಕಳೊಂದಿಗೆ ಸ್ಪರ್ಧೆಮಾಡಿ ಉನ್ನತ ಶಿಕ್ಷಣ ಪಡೆಯದೆ ಮಾದಿಗ ಸಮುದಾಯದ ಮಕ್ಕಳೆ ಉನ್ನತ ಶಿಕ್ಷಣದಿಂದ ವಂಚಿತರಾಗುತ್ತಾರೆ.

ಪ್ರಾಥಮಿಕ ಶಿಕ್ಷಣ ಪಡೆದ ಮಾದಿಗ ಜನಾಂಗದ ಮಕ್ಕಳು ಮುಂದೆ ಶಾಲೆಯಿಂದ ಹೊರಗುಳಿಯುವಂತ ಪರಿಸ್ಥಿತಿ ಇದೆ. ಇದರಲ್ಲಿ ಕೆಲವರು ಪ್ರೌಢ ಶಾಲೆ ಶಿಕ್ಷಣ, ಪದವಿಪೂರ್ವ, ಪದವಿ ಶಿಕ್ಷಣವನ್ನು ಪಡೆದರು. ಅದು ಆಧುನಿಕ ಜಗತ್ತಿಗೆ ಬೇಕಾದಂತ ಶಿಕ್ಷಣವಲ್ಲ. ಕೇವಲ ಅಕ್ಷರ ಜ್ಞಾನವಾಗಿ ಪರಿಣಮಿಸುತ್ತದೆ. ಯಾಕೆಂದರೆ ಜಾಗತೀಕರಣದ ಸಂದರ್ಭದಲ್ಲಿ ವೃತ್ತಿಪರ ಶಿಕ್ಷಣಕ್ಕೆ ಮಹತ್ವ ಹೆಚ್ಚು. ಕಂಪ್ಯೂಟರ ಶಿಕ್ಷಣ, ತಾಂತ್ರಿಕ ಶಿಕ್ಷಣ ಪಡೆದವರಿಗೆ ಈ ಸಂದರ್ಭದಲ್ಲಿ ಹೆಚ್ಚು ಅವಕಾಶಗಳು ಇರುತ್ತವೆ. ಆದರೆ ಪರಿಣಾಮಕಾರಿಯಾದ ಶಿಕ್ಷಣವನ್ನು ಪ್ರಾಥಮಿಕ ಹಂತದಲ್ಲಿಯೇ ದೊರೆಯದ ಮಾದಿಗ ಸಮುದಾಯದ ಮಕ್ಕಳನ್ನು ಆಧುನಿಕ ಜಗತ್ತು ತನ್ನ ತೆಕ್ಕೆಯಲ್ಲಿ ತೆಗೆದುಕೊಳ್ಳುವುದು ತುಂಬಾಕಷ್ಟ.

ಆಧುನಿಕತೆಯ ಭರಾಟೆಯಲ್ಲಿ ಕೊಪ್ಪಳ ನಗರದ ಮಾದಿಗ ಜನಾಂಗದವರು ಕಲಿಯುವ ಶಿಕ್ಷಣ ಮೌಲ್ಯಯುತವಾದ ಶಿಕ್ಷಣಅಲ್ಲ ಎಂಬ ಅಂಶವನ್ನು ಕ್ಷೇತ್ರಕಾರ್ಯದಿಂದ ಅರಿತುಕೊಂಡಿದ್ದೇನೆ. ಏಕೆಂದರೆ ಆಧುನಿಕ ಜಗತ್ತು ತೀವ್ರಗತಿಯಲ್ಲಿ ಮುಂದುವರೆಯುತ್ತಿದ್ದು ಪ್ರತಿದಿನ ಶಿಕ್ಷಣ ಕ್ಷೇತ್ರದಲ್ಲಿ ಹೊಸತನಗಳು ಸೇರುತ್ತಿವೆ. ಈ ಹೊಸತನಗಳ ಬಗ್ಗೆ ಇಲ್ಲಿಯ 'ಮಾದಿಗ' ಜನಾಂಗದ ಮಕ್ಕಳಿಗೆ ಅರಿವಿಗೂ ಬರುವುದಿಲ್ಲ,

ಅಂತಹ ಹೊಸ ಶಿಕ್ಷಣ ನೀತಿಯನ್ನು ಸರ್ಕಾರ ತರುವಷ್ಟರಲ್ಲಿ ಬೇರೊಂದು ಹೊಸ ಮಾದರಿ ಶಿಕ್ಷಣವನ್ನು ಬೇರೆ ಖಾಸಗಿ ಶಿಕ್ಷಣ ಸಂಸ್ಥೆಗಳು ಅಳವಡಿಸಿಕೊಂಡಿರುತ್ತವೆ. ಶಿಕ್ಷಣ ಕ್ಷೇತ್ರದಲ್ಲಾದ ಬದಲಾವಣೆಗಳನ್ನು ತಿಳಿದುಕೊಳ್ಳುವುದು ಈ ಜನಾಂಗಕ್ಕೆ ಕಬ್ಬಿಣದ ಕಡಲೆಯಾಗುತ್ತಿದೆ.

ಇಂತಹ ಶಿಕ್ಷಣವನ್ನು ಪಡೆದುಕೊಳ್ಳುತ್ತಿರುವ ಮಾದಿಗ ಜನಾಂಗದ ಮಕ್ಕಳು ದೊಡ್ಡ ದೊಡ್ಡ ನಗರ ಪಟ್ಟಣಗಳಲ್ಲಿ ಕೆಲಸ ಸಿಗದೆ ಅಲ್ಲಿಯೇ ಇರುವ ಅನಿವಾರ್ಯತೆ ಇದೆ. ಕೊಪ್ಪಳ ನಗರದಲ್ಲಿಯೂ ಯಾವ ಉದ್ಯೋಗ ದೊರೆಯದೆ, ನಿರುದ್ಯೋಗಿಗಳಾಗಿ ಇರುವ ಪರಿಸ್ಥಿತಿ ಇದೆ. ಇದರಿಂದ ಅವರ ಕುಟುಂಬಕ್ಕೆ ಹೊರೆಯಾಗಿ ವಿದ್ಯಾವಂತ ಯುವಕರು ಜೀವನ ಸಾಗಿಸುತ್ತಿದ್ದಾರೆ. ಪರಿಣಾಮಕಾರಿಯಾದ ಶಿಕ್ಷಣ ಸಿಗದೆ, ಶಿಕ್ಷಣ ಮಟ್ಟ ಸುಧಾರಣೆಯಾಗದರ ಪರಿಣಾಮವಾಗಿ ಸುರಕ್ಷಿತ 'ಮಾದಿಗ' ಸಮುದಾಯದವರ ಕುಟುಂಬ ಆರ್ಥಿಕವಾಗಿ ಕೀಳುಮಟ್ಟದ್ದಾಗಿರುವಂತ ಪರಿಸ್ಥಿತಿ ಇದೆ. ಯಾಕೆಂದರೆ ಕಾಲೇಜು ಶಿಕ್ಷಣ ಪಡೆದ ಯುವಕರು ಹಮಾಲಿ ಮಾಡಲಿಕ್ಕೆಯಾಗಲಿ, ಪೌರಕಾರ್ಮಿಕರಾಗಿ ದುಡಿಯುಲಿಕ್ಕಾಗಿಯಾಗಲಿ ಅಥವಾ ಕಟ್ಟಡ ಕಾರ್ಮಿಕರಾಗಿ ಕೆಲಸ ಮಾಡಲು ಅಥವಾ ಇತರ ಕೆಲಸ ಮಾಡಲು ಅವರುಗಳ ಹಿಂಜರಿಕೆಯಿಂದ ಕುಟುಂಬದ ಆರ್ಥಿಕ ಮಟ್ಟವನ್ನು ಕೀಳಾಗುವಂತೆ ಮಾಡುತ್ತದೆ.

ಶಿಕ್ಷಣದ ಬಗ್ಗೆ ಅರಿವಿರುವ ಕುಟುಂಬಗಳ ಪರಿಸ್ಥಿತಿ ಹೀಗಿರುವಾಗ ಇನ್ನು ಕೆಲ ಮಾದಿಗ ಜನಾಂಗದ ಕುಟುಂಬಗಳಿಗೆ ಶಿಕ್ಷಣದ ಬಗ್ಗೆ ಅರಿವು ಇಲ್ಲದಂತ ಪರಿಸ್ಥಿತಿ ಇದೆ. ಅವರ ಕುಟುಂಬದಲ್ಲಿ ತಮ್ಮ ಮಕ್ಕಳಿಗೆ ಯಾವುದೇ ಶಿಕ್ಷಣ ಕೊಡಿಸದೇ ಹೊಟೇಲ್‌ಗಳಲ್ಲಿ, ತರಕಾರಿ ಅಂಗಡಿಗಳಲ್ಲಿ, ಕೆಲಸಕ್ಕೆ ಸೇರಿಸುವ ಪರಿಪಾಟ ಇದೆ. ಇದರಿಂದ ಸರ್ಕಾರಿ ಯೋಜನೆಗಳಾದ "ಸರ್ವಶಿಕ್ಷಣ ಅಭಿಯಾನ", "ಮರಳಿ ಬಾ ಶಾಲೆಗೆ" ಇನ್ನಿತರ ಯೋಜನೆಗಳು ಯಾವ ರೀತಿ ಯಶಸ್ಸು ಪಡೆದುಕೊಳ್ಳುತ್ತವೆ ಎಂಬುದು ತಿಳಿಯದು. ಒಟ್ಟಿನಲ್ಲಿ ಸರ್ಕಾರದ ದಿವ್ಯ ನಿರ್ಲಕ್ಷ್ಯ ಈ ನಗರದಲ್ಲಿ ಎದ್ದು ಕಾಣುತ್ತದೆ.

ಶಿಕ್ಷಣ ಪಡೆದ 'ಮಾದಿಗ' ಜನಾಂಗದ ಕುಟುಂಬದಲ್ಲಿ ಮತ್ತು ಶಿಕ್ಷಣದ ಗಾಳಿಯು ಸೋಂಕದ ಕುಟುಂಬಗಳ ಮಧ್ಯ ಅಂತರ ಕಾಣುವುದನ್ನು ಕ್ಷೇತ್ರಕಾರ್ಯದಲ್ಲಿ ಗಮನಿಸಿದ್ದೇನೆ.

೧೮೦೦-೨೦೦೦ ಜನಸಂಖ್ಯೆ ಇರುವ ಮಾದಿಗರ ಜನಾಂಗದ ಕೇರಿಯಲ್ಲಿ ಇದುವರೆಗೂ ಕೇವಲ ಏಳು ಜನರು ಮಾತ್ರ ವಿಶ್ವವಿದ್ಯಾಲಯ ಮಟ್ಟದ ಶಿಕ್ಷಣ ಪಡೆದಿದ್ದರೆ, ಈ ಏಳು ಜನರಲ್ಲಿ ಐವರು ವೃತ್ತಿ ಪರಕೋರ್ಸ್‌ಗಳನ್ನು ಮುಗಿಸಿ ಸರ್ಕಾರಿ, ಖಾಸಗಿ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಇನ್ನುಳಿದ ಮೂವರು, ಇನ್ನೂ ಉನ್ನತ ಶಿಕ್ಷಣ ಪಡೆಯುತ್ತಿದ್ದಾರೆ.

ಪದವಿ ಶಿಕ್ಷಣವನ್ನು ಪಡೆದ ೧೫-೧೭ ಯುವಕರು ಯಾವುದೇ ಕೆಲಸವಿಲ್ಲದೆ, ನಿರುದ್ಯೋಗಿಗಳಾಗಿದ್ದಾರೆ. ಇನ್ನೂ ೧೫-೨೦ ಯುವಕರು ಪದವಿ ಪೂರ್ವ ಶಿಕ್ಷಣ ಕಲಿಯುತ್ತಿದ್ದಾರೆ.

ವೈದ್ಯಕೀಯ, ಕಂಪ್ಯೂಟರ್‌ನಂತಹ ಮಹತ್ವದ ಕೋರ್ಸ್‌ಗಳನ್ನು ಪಡೆಯುವಲ್ಲಿ ಈ ಜನಾಂಗದವರು ಇನ್ನು ಸಫಲಕಾರಿಯಾಗಿಲ್ಲ. ಆದರೆ ಮೂರು ಜನ ಇಂಜನೀಯರ್ ಕೋರ್ಸ್‌ಗಳನ್ನು ಮುಗಿಸಿ ಖಾಸಗಿ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

ಇನ್ನು ತಾಂತ್ರಿಕ ಶಿಕ್ಷಣಗಳಾದ ಐ.ಟಿ.ಐ., ಜೆ.ಒ.ಸಿ ಯಂತ ಕೋರ್ಸ್‌ಗಳನ್ನು ಬೆರಳೆಣಿಕೆಯಷ್ಟು ಯುವಕರು ಕಲಿಯುತ್ತಿದ್ದಾರೆ.

೫.೩ ರಾಜಕೀಯ :

ದಲಿತ ಸಮೂಹದ ಪುನರ್‌ಸಂಘಟನೆ ಪ್ರಗತಿ ಕಾರ್ಯಕ್ರಮಗಳು ಇತ್ಯಾದಿಗಳನ್ನು ಒಂದಡೆ ಕಾಣುತ್ತಿದ್ದರೆ ಇನ್ನೊಂದಡೆ ಈ ಸಮೂಹಗಳು ಒಡೆದು ಹೋಳಾಗಿ ಗತಕಾಲದಂತೆ ಮತ್ತೆ ಸಮಾನತೆಗಾಗಿ ಸಂವಿಧಾನ ಬದ್ಧ ಮೀಸತಿಗಾಗಿ, ಸೌಲಭ್ಯಗಳಿಗಾಗಿ, ರಾಜಕೀಯ ಸ್ಥಾನ ಮಾನಗಳಿಗಾಗಿ ಹೋರಾಟ ಪ್ರಾರಂಭಿಸಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಕಾರಣ ಪರಿಶಿಷ್ಟ ಜಾತಿ ಸಮೂಹ ಎಡಗೈ-ಬಲಗೈ ಎಂಬ ತೀರಾ ಹಳೆಯ ಸಾಮಾಜಿಕ ಕಾಯಿಲೆಯಿಂದ ನರಳತೊಡಗಿವೆ. ಒಳಜಾತಿಗಳ ಭೇದದಿಂದ ಸಂಘಟನೆಯು ಅಪಾಯಕಾರಿ ದಾರಿ ಹಿಡಿದಿದೆ. ಈ ನಿಟ್ಟಿನಲ್ಲಿ ಪರಿಶಿಷ್ಟ ಜಾತಿಗಳಲ್ಲಿಯ ತೀರಾ ಹಿಂದುಳಿದ ಸಮುದಾಯಗಳಲ್ಲಿ ಮಾದಿಗ ಜನಾಂಗವನ್ನು ಗಮನಿಸಲಾಗಿದೆ. ರಾಜ್ಯದ ಪ್ರಸ್ತುತ ಸುಮಾರು ೭೫ರಿಂದ ೮೦ ಲಕ್ಷ ಜನಾಂಗ ಉತ್ತಮ ಬಲ ಪಡೆದಿದ್ದರೂ ಈ ಸಮುದಾಯದವರಲ್ಲಿ ಬಹುತೇಕ ಜನರು ಇಲ್ಲಿಯವರೆಗೆ ಅನಕ್ಷರಸ್ಥರು, ಮುಗ್ಧರು, ಅವಿದ್ಯಾವಂತರಾಗಿ ಉಳಿದಿರುವದು ದುರಂತ. ಈ ಸಮುದಾಯದ ಪ್ರಗತಿಗಾಗಿ ಶ್ರಮಿಸುವ ರಾಜಕೀಯ ನಾಯಕರ ಅಭಾವವನ್ನು ಈ ಪರಿಶಿಷ್ಟ ಜಾತಿಯವರಲ್ಲಿ ಇನ್ನಷ್ಟು ಗಾಂಭೀರ್ಯವಾಗಿಸಿದೆ.

ರಾಜ್ಯದ ಬೇರೆ ಪ್ರದೇಶಗಳಿಗೆ ಹೋಲಿಸಿದರೆ ಕೊಪ್ಪಳ ನಗರದ ಮಾದಿಗ ಜನಾಂಗದವರಿಗೆ ರಾಜಕೀಯ ಕ್ಷೇತ್ರದಲ್ಲಿ ದೊರಕುವ ಸ್ಥಾನಮಾನಗಳು, ಅವರುಗಳ ಇರುವಿಕೆಗೆ ಭಿನ್ನವಾಗಿತೋರುವದಿಲ್ಲ. ಯಾಕೆಂದರೆ ಇಲ್ಲಿಯ ಜನಾಂಗಕ್ಕೆ ಸಿಗಬೇಕಾದ ರಾಜಕೀಯ ಅವಕಾಶಗಳಿಂದ ಅವರು ವಂಚಿತರಾಗಿದ್ದಾರೆ. ಬೇರೆ ಪ್ರದೇಶಗಳಲ್ಲಿರುವಂತೆ ರಾಜಕೀಯ ಮುಖಂಡರು ಹಾಗೂ ಕಾರ್ಯಕರ್ತರು ಕೊಪ್ಪಳ ನಗರದ ಮಾದಿಗ ಜನಾಂಗದಲ್ಲಿ ಎಲ್ಲಾ ರಾಜಕೀಯ ಪಕ್ಷಗಳಲ್ಲಿ ಇದ್ದರೂ, ಅವರ ಸೇವೆಯನ್ನು ಕಡೆಗಣಿಸಿ ರಾಜಕೀಯ ಪಕ್ಷಗಳು ಅವರಿಗೆ ನ್ಯಾಯಯುತವಾಗಿ ಸಿಗಬೇಕಾದ ಅವಕಾಶಗಳನ್ನು ಕೊಟ್ಟಿಲ್ಲ ಎಂಬ ಸಂಗತಿ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಗಮನಿಸಿದ್ದೇನೆ.

ತಮ್ಮ ಜಾತಿಯನ್ನು ಸಂಘಟನೆ ಮಾಡುವವರು ರಾಜಕೀಯ ಪ್ರಾತಿನಿಧ್ಯವನ್ನು ಪಡೆಯಲು ಹಲವೇ ಸಂಘಟನೆಗಳನ್ನು ಮಾದಿಗ ಜನಾಂಗವು ಅಸ್ತಿತ್ವಕ್ಕೆ ತಂದಿದ್ದು, ಆ ಸಂಘಟನೆಗಳ ವೇದಿಕೆಗಳ ಅಡಿಯಲ್ಲಿ ಮಾದಿಗರ ಕೇರಿಯಲ್ಲಿ ಹಲವಾರು ಕಾರ್ಯಕ್ರಮಗಳನ್ನು ಮಾಡುತ್ತಿದೆ. ಅಂತಹ ಕಾರ್ಯಕ್ರಮಗಳಿಗೆ ರಾಜಕೀಯ ಮುಖಂಡರನ್ನು ಹೋರಾಟಗಾರರನ್ನು ಅಧಿಕಾರದಲ್ಲಿರುವ ವಿಧಾನ ಸಭೆ, ಲೋಕಸಭೆ

ಸದಸ್ಯರನ್ನು, ಮಂತ್ರಿಗಳನ್ನು, ಮಾಜಿ ಶಾಸಕರನ್ನು, ಮಾಜಿ ಪ್ರತಿನಿಧಿಗಳನ್ನು ಆಹ್ವಾನಿಸಿ ಅವರುಗಳ ಗಮನಕ್ಕೆ ತಮ್ಮ ಜನಸಂಖ್ಯೆ ಬಲವನ್ನು ತೋರಿಸುವ ಮೂಲಕ ತಮಗೂ ರಾಜಕಾರಣದಲ್ಲಿ ದೊರೆಯಬೇಕಾದ ಅವಕಾಶಗಳನ್ನು ಕೊಡುವಂತೆ ಮನವಿಮಾಡಿಕೊಳ್ಳುತ್ತಿದ್ದಾರೆ.

ಇದರ ಪರಿಣಾಮವಾಗಿ ಮೀಸಲಾತಿಯನ್ವಯ ಇದುವರೆಗೂ, ಕೊಪ್ಪಳ ನಗರದ ಮಾದಿಗ ಜನಾಂಗದವರಲ್ಲಿ ೭ಜನ ನಗರಸಭೆ ಸದಸ್ಯರಾಗಿ ಆಯ್ಕೆಯಾಗಿದ್ದಾರೆ. ಮತ್ತು ಅವರುಗಳಲ್ಲಿ ಇಬ್ಬರು ನಗರಸಭೆಯ ಅಧ್ಯಕ್ಷರಾಗಿ ಪೂರ್ಣ ಅವಧಿ ಕಾರ್ಯನಿರ್ವಹಿಸಿದ್ದಾರೆ. ಒಬ್ಬರು ಉಪಾಧ್ಯಕ್ಷರಾಗಿದ್ದಾರೆ. ಮಾದಿಗ ಸಮುದಾಯವನ್ನು ಪ್ರತಿನಿಧಿಸಿದ ಸದಸ್ಯರುಗಳು, ಉಪಾಧ್ಯಕ್ಷರು, ಹಾಗೂ ಅಧ್ಯಕ್ಷರು ತಮ್ಮ ಅಧಿಕಾರದ ಅವಧಿಯಲ್ಲಿ ಹಲವಾರು ರಾಜಕೀಯ ಒತ್ತಡಗಳ ನಡುವೆಯೂ ಸರ್ಕಾರಿ ಸೌಲಭ್ಯಗಳನ್ನು ಈ ಜನಾಂಗಕ್ಕೆ ಕೊಡಿಸುವಲ್ಲಿ ಸಫಲರಾಗಿದ್ದಾರೆ. ಮಾದಿಗ ಕೇರಿಯಲ್ಲಿ ಇಂದು ಶೇಕಡಾ ೯೫ರಷ್ಟು ಗುಡಿಸಲುಗಳು ಕಾಣೆಯಾಗಿವೆ. ಅದರ ಬದಲಿಗೆ ಸರ್ಕಾರದ ವಿವಿಧ ಯೋಜನೆಯಡಿಯಲ್ಲಿ ಮಂಜೂರಾದ ಆಶ್ರಯ ಮನೆಗಳು ನಿರ್ಮಾಣವಾಗಿವೆ. ಮತ್ತು ಬಹುತೇಕ ಎಲ್ಲಾ ಮಾದಿಗರ ಮನೆಯಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ. ಹಾಗೂ ಮಾದಿಗ ಕೇರಿಯಲ್ಲಿ ರಸ್ತೆಗಳ ನಿರ್ಮಾಣ, ಚರಂಡಿ ವ್ಯವಸ್ಥೆ, ಕುಡಿಯುವ ನೀರಿನ ಸೌಕರ್ಯ, ಬೀದಿ ದೀಪಗಳು ಇತರ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿಕೊಟ್ಟಿರುವುದನ್ನು ನನ್ನ ಕೇತ್ರಕಾರ್ಯ ಸಂದರ್ಭದಲ್ಲಿ ಗಮನಿಸಿದ್ದೇನೆ.

ಕೊಪ್ಪಳ ನಗರವು ಜಿಲ್ಲಾ ಕೇಂದ್ರವಾಗಿದ್ದರೂ ಕೂಡಾ ಇಂದಿಗೂ ಬಹಳಷ್ಟು ಹಿಂದುಳಿದಿರುವುದರಿಂದ ಇಲ್ಲಿ ಮಾದಿಗ ಜನಾಂಗಕ್ಕೆ ರಾಜಕೀಯದ ಪ್ರಜ್ಞೆ ಪರಿಪೂರ್ಣವಾಗಿ ತಿಳಿದಿಲ್ಲ. ಅವರಲ್ಲಿ ಬಹುತೇಕರು ಅವಿದ್ಯಾವಂತರಾಗಿದ್ದು ರಾಜಕೀಯದಲ್ಲಿ ಆಗುವ ವಿದ್ಯಮಾನಗಳನ್ನು ಅರಿತು ಕೊಳ್ಳದವರಾಗಿದ್ದಾರೆ. ಇಂತಹ ಅವರ ಅಜ್ಞಾನವನ್ನು ರಾಜಕಾರಣಿಗಳು ತುಂಬಾ ಜಾಗರೂಕತೆಯಿಂದ ಚುನಾವಣೆ ಸಂದರ್ಭಗಳಲ್ಲಿ ಉಪಯೋಗಿಸಿಕೊಳ್ಳುತ್ತಾರೆ. ಮತದಾನ ಮಾಡುವದು ಪ್ರತಿಯೊಬ್ಬನ ಕರ್ತವ್ಯವಾಗಿದ್ದು, ಅಂತಹ ಸಂದರ್ಭಗಳಲ್ಲಿ ರಾಜಕಾರಣಿಗಳು ಈ ಜನಾಂಗಕ್ಕೆ ಹಣ, ಹೆಂಡ ಇನ್ನಿತರ ಆಮಿಷ ತೋರಿಸಿ ಅವರ ಮತಗಳನ್ನು ಪಡೆಯುತ್ತಾರೆ. ಆನಂತರ ಇತ್ತಕಡೆ ನೋಡದೆ ಇರುವ ಸಂದರ್ಭಗಳು ಇವೆ. ನಗರದ ಮಾದಿಗ ಸಮುದಾಯದಲ್ಲಿ ಇಬ್ಬರು ಕೊಪ್ಪಳ ವಿಧಾನಸಭೆ ಕ್ಷೇತ್ರದ ಚುನಾವಣೆಗೆ ಸ್ಪರ್ಧಿಸಿದ್ದಾರೆ. ಅವರು ಅದರಲ್ಲಿ ಜಯಿಸದೆ ಇರಬಹುದು. ಆದರೆ ತಮ್ಮ ಜನಾಂಗದ ಪ್ರತಿನಿಧಿತ್ವವನ್ನು ತೋರಿಸಿದ್ದಾರೆ. ಬಟ್ಟಾರೆ ಕೊಪ್ಪಳ ನಗರದ ಮಾದಿಗ ಜನಾಂಗವು ಒಂದು ಅಸಂಘಟಿತವಾದ ಸಮಾಜವಾಗಿದ್ದು ಸಮಾಜವನ್ನು ಮುನ್ನಡೆಸಿಕೊಂಡು ಹೋಗುವ ಒಬ್ಬ ಸಮರ್ಥನಾಯಕನ ಕೊರತೆ ಎದ್ದು ಕಾಣುತ್ತದೆ. ಇತ್ತೀಚಿನ ವರ್ಷಗಳಲ್ಲಿ ಈ ಕ್ಷೇತ್ರಕ್ಕೆ ವಿದ್ಯಾವಂತರು ಬರಲು ಪ್ರಾರಂಭಿಸಿದ್ದಾರೆ. ಸಮಾಜೀಕರಣದ ಪ್ರಭಾವದಿಂದ ಮಾದಿಗ ಸಮುದಾಯದವರಲ್ಲಿ ಜಾಗೃತಿ ಮೂಡಿಸಿ ಸರ್ಕಾರಿ ಸೌಲಭ್ಯಗಳನ್ನು ಮೀಸಲಾತಿ ತಳಹದಿಯಲ್ಲಿ ಬಳಸಿಕೊಳ್ಳುವ ಗುರಿಯತ್ತ ಸಾಗುತ್ತಿದ್ದಾರೆ.

ಅಧ್ಯಾಯ : 6

ಮಾದಿಗ ಸಮುದಾಯದ ಸಾಹಿತ್ಯ

ಒಂದು ಸಮುದಾಯದವರ ಜೀವನ ವಿಧಾನವನ್ನು ತಿಳಿದುಕೊಳ್ಳಲು ಅವರ ಬಗೆಗೆ ಇರುವಂತ ಕಾಲನುಕ್ರಮದಲ್ಲಿ ಸೃಷ್ಟಿಯಾಗಿರುವಂತ ಶಿಷ್ಟಸಾಹಿತ್ಯ ಮತ್ತು ಜನಪದ ಸಾಹಿತ್ಯಗಳು ಕಲೆಗಳು, ಮಹತ್ವದ ಪಾತ್ರ ನಿರ್ವಹಿಸುತ್ತದೆ. ಆ ಸಮುದಾಯದ ಬದುಕಿನ ವಿವಿಧ ಪ್ರಕಾರಗಳನ್ನು ಸಾಹಿತ್ಯ ಅಭಿವ್ಯಕ್ತಗೊಳಿಸುತ್ತಿದೆ. ಸಾಹಿತ್ಯಕ್ಕೂ ಆ ಜನಾಂಗ ಬದುಕುವ ಪರಿಸರಕ್ಕೂ ಒಂದು ಬಗೆಯ ಸಂಬಂಧವಿರುತ್ತದೆ. ಸಮಾಜವು ಬಹಳಷ್ಟು ವಿಶಾಲವಾಗಿರುವುದರಿಂದ ಪ್ರತಿಯೊಂದು ಜನಾಂಗದಲ್ಲಿ ಸಂಬಂಧವಿರುವ ಘಟನೆಗಳೇ ಸಾಹಿತ್ಯದ ಮುಖ್ಯ ಆಕರಗಳಾಗುತ್ತವೆ.

ಯಾವುದೇ ಸಾಹಿತ್ಯ, ಕಲೆಗಳಲ್ಲಿ ನಿರೂಪಿಸಿದ ವಿಷಯಕ್ಕೆ ಸಮಾಜದಲ್ಲಿ ವಾಸ್ತವವಾಗಿ ಇರುವ ಸ್ವರೂಪಕ್ಕೂ ಹೊಂದಾಣಿಕೆಯಾಗಬಹುದು ಸಮಾಜವನ್ನು ಹೊರತುಪಡಿಸಿದ ಸಂಗತಿಗಳನ್ನು ಸಾಹಿತ್ಯದಲ್ಲಿ ಕಾಣುವುದು ವಿರಳ. ಒಟ್ಟಾರೆ ಸಾಹಿತ್ಯದ ಮೂಲಕ ಆಯಾ ಜನಾಂಗದ ಸಾಮಾಜಿಕ ವಾಸ್ತವಿಕತೆಯನ್ನು ಅರಿತುಕೊಳ್ಳಬಹುದಾಗಿದೆ.

ಆಯಾ ಸಮುದಾಯದವರ ರೂಢಿ, ಸಂಪ್ರದಾಯ, ಆಚರಣೆ, ಪದ್ಧತಿ ಇತ್ಯಾದಿ ಮೌಲ್ಯಗಳನ್ನು ದಾಖಲೀಕರಿಸಿ ಕಾಪಾಡುವ ಮಹತ್ವದ ಕಾರ್ಯವನ್ನು ಸಾಹಿತ್ಯದ ವಿವಿಧ ಪ್ರಕಾರಗಳು ಮಾಡುತ್ತಿವೆ. ಈ ಸಾಹಿತ್ಯಿಕ ಆಕರಗಳ ಆಧಾರದ ಮೇಲೆ ಮಾದಿಗರ ಕಲೆ ಸಾಹಿತ್ಯವನ್ನು ಕುರಿತು ಅಧ್ಯಯನ ಮಾಡುತ್ತಾ ಅವರ ಜೀವನದ ವಿಧಾನ ಕೆಲವು ಒಳನೋಟಗಳನ್ನು ನೋಡುವ ಪ್ರಯತ್ನ ಇದಾಗಿದೆ.

ಶಿಷ್ಟ ಹಾಗೂ ಜನಪದ ಸಾಹಿತ್ಯವೆಂದು ವಿಭಾಗಿಸಿಕೊಂಡು ಬಂದ ಕ್ರಮ ನಮ್ಮಲ್ಲಿದೆ. ಈ ವಿಭಾಗೀಕರಣ ಇದ್ದರೂ ಅಂತಿಮವಾಗಿ ಸಾಮಾಜಿಕ ರಚನೆಯೇ ಸಾಹಿತ್ಯದ ಅಂತಿಮ ಗುರಿಯಾಗಿದೆ. ಹಾಗಾಗಿ ಮೇಲೆ ಚರ್ಚಿಸಿದ ವಿಷಯಗಳಲ್ಲಿ ಶಿಷ್ಟ ಸಾಹಿತ್ಯಕ್ಕೂ ಮೌಖಿಕ ಸಾಹಿತ್ಯಕ್ಕೂ ಅನ್ವಯಿಸುವಂತ ವಿಚಾರಗಳೇ ಆಗಿವೆ. ಈ ಅಧ್ಯಾಯವನ್ನು ಜಾನಪದಕ್ಕೆ ಮಾತ್ರ ಸೀಮಿತಗೊಳಿಸಿ ಕೊಂಡಿರುವ ಕಾರಣ ಮೌಖಿಕ ಸಾಹಿತ್ಯದ ಕಡೆಗೆ ಮಾತ್ರ ಗಮನ ಹರಿಸಲಾಗಿದೆ.

ಮೌಖಿಕ ಸಾಹಿತ್ಯ ಅಥವಾ ಜನಪದ ಸಾಹಿತ್ಯ ಎಂದು ಕರೆಯಲ್ಪಡುವ ಸಾಹಿತ್ಯವು ಜಾನಪದದ ಒಂದು ಪ್ರಕಾರ. ಜನಪದರಿಂದ ಮೌಖಿಕ ರೂಪದಲ್ಲಿ ರಚನೆಗೊಂಡು ಪ್ರಕಟಿತ ಅಥವಾ ಅಪ್ರಕಟಿತ ಸಾಹಿತ್ಯಗಳಾದ ಗಾದೆ ಮಾತುಗಳು, ಗೀತೆ, ಹಾಡು, ಒಗಟು, ಒಡಪು, ಲಾವಣಿ, ಖಂಡಕಾವ್ಯ ಮಹಾಕಾವ್ಯ, ಐತಿಹ್ಯ ಪುರಾಣ ಹೀಗೆ ಹಲವಾರು ರೂಪದಲ್ಲಿರುತ್ತವೆ. ಜನಪದ ಸಾಹಿತ್ಯ ಎಂಬುದು ಜನರ ನಿತ್ಯ ಜೀವನದ ನೋವು ನಲಿವಿನ ಸಂಗತಿಗಳನ್ನು ದಾಖಲಿಸಿಕೊಂಡ ಆಕರವೆ ಆಗಿದೆ. ಈ ಕುರಿತು ಅನೇಕ ವಿದ್ವಾಂಸರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ.

'ಜನಪದ ಸಾಹಿತ್ಯವೆಂದರೆ ಕೇವಲ ಹಾಡಲ್ಲ ಅದರಲ್ಲಿ ದೇವರ ಧ್ಯಾನ, ಭಕ್ತಿ ಚಿಂತನೆಯಷ್ಟೇ ಇರುವುದಿಲ್ಲ. ಧಾರ್ಮಿಕ ಆಚರಣೆ, ನಡೆ, ನುಡಿ, ರೀತಿ, ಕಲೆ, ಸಾಹಿತ್ಯ, ಸಂಗೀತಗಳಲ್ಲದೆ ಅದು ಒಂದು ಜನಾಂಗದ ಸಮಗ್ರ ಜೀವನದ ಜೀವಂತ ಚಿತ್ರಣವಾಗಿದೆ. ಪ್ರತ್ಯೇಕವಾಗಿ ಮನಸಿನಲ್ಲಿ ಮೂಡಿ ನಿಲ್ಲಬಲ್ಲ ಚಿತ್ರಣವಾಗಿದೆ. ಕರುಳ ತಂತಿಯನ್ನು ಮೀಟಬಲ್ಲ ನಾದ, ಮಾಧುರ್ಯ ಅದರಲ್ಲಿ ಅಡಕವಾಗಿದೆ. ಜನ ಸಾಮಾನ್ಯರ ಅಂತರಾಳದಿಂದ ಹೊರ ಹೊಮ್ಮಿದ ಸಹಜ ಅನುಭವವಾಗಿದೆ. ಒಂದು ನಾಡಿನ ಜನಾಂಗದ ಸಂಸ್ಕೃತಿಯ ಚಿತ್ರಣಕ್ಕೆ ಹಿಡಿದ ಕನ್ನಡಿಯಾಗಿದೆ (ಡಾ. ಅರ್ಜುನ್‌ಗೊಳಸಂಗಿ ೨೦೦೦) ಎಂದಿದ್ದಾರೆ.

"ಜನಪದ ಸಾಹಿತ್ಯ ನಮ್ಮ ಬದುಕಿನ ಜೊತೆಗೆ ಹುಟ್ಟು ಪಡೆದಂತಹದ್ದು. ಬದುಕು ಬೇರೆ ಈ ಸಾಹಿತ್ಯ ಬೇರೆ ಅಲ್ಲ. ಬದುಕಿನ ಜೊತೆಗೆ ಸೃಷ್ಟಿಗೊಳ್ಳುವ ಮಾನವ ಬದುಕನ್ನು ದಾಖಲಿಸುವ ಕೆಲಸ ಈ ಸಾಹಿತ್ಯ ಮಾಡುತ್ತಿದೆ. ಹೀಗೆ ಬದುಕಿನ ಬಹುದೊಡ್ಡ ಸಾಂಸ್ಕೃತಿಕ ಕೊಡುಗೆಯೇ ಆಗಿದೆ" (ಡಾ. ವೀರಣ್ಣ ದಂಡೆ ೨೦೦೧-೯೭) ಎಂದಿದ್ದಾರೆ. ಅಲ್ಲದೇ ಮುಂದುವರೆದು ಅವರು ಮಾನವ ಬದುಕಿನ ಬಹುಮುಖ್ಯ ಶೋಧಗಳಲ್ಲಿ ಒಂದಾಗಿರುವ ಜನಪದ ಸಾಹಿತ್ಯಕ್ಕೆ ಸಹಜವಾಗಿಯೇ ಒಂದು ಖಚಿತವಾದ ಸಾಂಸ್ಕೃತಿಕ ದೃಷ್ಟಿ ಇರುವ ಸಾದ್ಯವಿದೆ. ಬದುಕಿನ ಜೊತೆಗೆ ಬೆರೆತುಕೊಂಡು ಈ ಸಾಹಿತ್ಯದ ದೃಷ್ಟಿಯನ್ನು ನಿಯಂತ್ರಿಸುವುದ ಸಹಜವಾಗಿಯೇ ಮಾನವ ಬದುಕೇ ಆಗಿರುತ್ತಿದೆ. ನಮ್ಮ ಬದುಕು ಏನಿದೆಯೋ ಎಂಬುವುದನ್ನು ಗ್ರಹಿಸಲು ಸಾಧ್ಯವೋ ಅದನ್ನೇ ಜಾನಪದ ಸಾಹಿತ್ಯ ಗ್ರಹಿಸಿಕೊಳ್ಳಲು ಸಾಧ್ಯ (ಡಾ. ವೀರಣ್ಣ ದಂಡೆ ೨೦೦೧-೬೯೨) ಎಂದಿದ್ದಾರೆ.

"ಶಿಷ್ಟ ಸಾಹಿತ್ಯದಂತೆ ಜನಪದ ಸಾಹಿತ್ಯವು ಚಾರಿತ್ರಿಕ ಉತ್ಪಾದನೆಯಾಗಿದೆ. ಮಹಿಳಾ ಜನಪದ ಸಾಹಿತ್ಯ ನಿರ್ದಿಷ್ಟವಲ್ಲದಿದ್ದರೂ ಸ್ಥೂಲವಾಗಿ ಚಾರಿತ್ರಿಕ ಸನ್ನಿವೇಶಗಳನ್ನು ಸಾಮಾಜಿಕ ನಂಬಿಕೆಗಳ ಮೂಲಕ ಕಟ್ಟಿಕೊಡುವಂತಹ ಜನಪದ ಸಾಹಿತ್ಯಕ್ಕೆ ಸಂವಹನ ಸ್ವರೂಪವಿದೆ. ಅದು ತಾನು ರೂಪುಗೊಂಡ ಹಾಗೂ ರೂಪುಗೊಳ್ಳುತ್ತಿರುವ ಸಾಂಸ್ಕೃತಿಕ ಪರಿಸರವನ್ನು ವಿವರಿಸುತ್ತಿದೆ. ಜನ ಸಮುದಾಯದ ಸಂಸ್ಕೃತಿಯ ವಾಹಕವಾದ ಜನಪದ ಸಾಹಿತ್ಯವು ಮಹಿಳೆಯರನ್ನು ಹಾಗೂ ಅವರ ಬದುಕನ್ನು ಹೇಗೆ ಪ್ರತಿನಿಧಿಕರಿಸಿವೆ ಎನ್ನುವುದನ್ನು ವಿಶ್ಲೇಷಿಸುವ ಜರೂರಿದೆ (ಡಾ. ಶೈಲಜಾ ಹಿರೇಮಠ, ೨೦೦೬-೫೯೨)

ಜನಪದ ಸಂಸ್ಕೃತಿಯ ಅಭಿವ್ಯಕ್ತ ಪ್ರಕಾರಗಳಲ್ಲಿ ಜನಪದ ಸಾಹಿತ್ಯ ಬಹುಮುಖ್ಯವಾಗಿದದ್ದು ಜಗತ್ತಿನ ಬಹುತೇಕ ಎಲ್ಲಾ ಅನಕ್ಷರಸ್ಥ ಜನಸಮುದಾಯಗಳ ಹಾಗೂ ಶೋಷಿತ ಜನರ ಅನಿಸಿಕೆಗಳನ್ನು ವ್ಯಕ್ತಪಡಿಸುವುದಕ್ಕೆ ಇರುವ ಏಕೈಕ ಮಾಧ್ಯಮವೆಂದರೆ ಕಂಠಸ್ಥ ಸ್ವರೂಪದಲ್ಲಿ ಹರಿದು ಬರುವ ಜನಪದ ಸಾಹಿತ್ಯವೇ ಆಗಿದೆ. ಈ ಸಾಹಿತ್ಯದ ಸೃಷ್ಟಿಯಲ್ಲಿ ಪುರುಷರಂತೆಯೇ ಸ್ತ್ರೀಯರೂ ಸಹ ತಲೆತಲೆಮಾರುಗಳಿಂದಲೂ ಸಮಾನವಾಗಿ ಭಾಗಹಿಸುತ್ತಾ ಬಂದಿದ್ದಾರೆ. ಅನಕ್ಷರತೆ ಮತ್ತು ಪುರುಷ ಪ್ರಧಾನ ಸಮಾಜದ ಪ್ರಾಬಲ್ಯದ ಕಾರಣವಾಗಿ ಬಹುತೇಕ ಹಿನ್ನೆಲೆಯಲ್ಲಿಯೇ ಉಳಿದ ಸ್ತ್ರೀ ಸಂವೇದನೆಗಳನ್ನು ತಿಳಿದುಕೊಳ್ಳಲು ಜನಪದ ಸಾಹಿತ್ಯ ವಿಶ್ವಾಸಾರ್ಹ ಮಾಹಿತಿಯ ಆಕರ (ಡಾ. ಕೆ. ಆರ್ ಸಂಧ್ಯಾರೆಡ್ಡಿ ೨೦೦೦) ಎಂದು ಅಭಿಪ್ರಾಯಪಟ್ಟಿದ್ದಾರೆ.

ಜನಪದ ಸಾಹಿತ್ಯ ಎಲ್ಲಿಂದಲೋ ಉದ್ಭವಿಸಿದ್ದಲ್ಲ ಸಾಮಾನ್ಯ ಜನರು ತಮ್ಮ ಬದುಕಿನ ವಿವಿಧ ಹಂತಗಳಲ್ಲಿ ಕಂಡು ಅನುಭವಿಸಿದ ಪರಿಸ್ಥಿತಿ ಸನ್ನಿವೇಶಗಳನ್ನು ಹಾಡಾಗಿ ಹಾಡಿದ್ದಾರೆ ಕಥೆಗಳನ್ನು ಪೋಣಿಸಿದ್ದಾರೆ. ಪುರಾಣವಾಗಿ ನಿರ್ವಸಿದ್ದಾರೆ. ಹಾಗಾಗಿ ಜನಸಾಮಾನ್ಯರ ಅಭಿವ್ಯಕ್ತ ಪ್ರಕಾರಗಳಲ್ಲಿ ಶಿಷ್ಟ ಸಾಹಿತ್ಯಕ್ಕಿಂತ ಜನಪದ ಸಾಹಿತ್ಯ ಪ್ರಮುಖ ಪಾತ್ರವಹಿಸಿದೆ. ಈ ಮೌಖಿಕ ಸಾಹಿತ್ಯವು ಧ್ವನಿ ಇಲ್ಲದವರ ಧ್ವನಿಯಾಗಿ ಕೇಳಿಬರುತ್ತಿದೆ. ಅನಕ್ಷರಸ್ಥರು ದುಡಿಯುವ ಜನರ ಸಾಹಿತ್ಯವೇ ಈ ಮೌಖಿಕ ಸಾಹಿತ್ಯ. ಇದರಲ್ಲಿ ಅವರ ಬದುಕಿನ ಹತ್ತು ಹಲವು ಸಂಗತಿಗಳು ಹಾಸುಹೊಕ್ಕಾಗಿವೆ. ಆದ್ದರಿಂದಲೇ ಜನಸಾಮಾನ್ಯರ ಬದುಕಿನ ಬಗೆಗೆ ಅಧ್ಯಯನ ಮಾಡಬೇಕಾದ ಸಂದರ್ಭದಲ್ಲಿ ಮೌಖಿಕ ಆಕರಗಳು ಬಹುಮುಖ್ಯ ಪಾತ್ರ ವಹಿಸುತ್ತವೆ. ಹಾಗಾಗಿ ಒಂದು ಸಮುದಾಯದ ಅಧ್ಯಯನದಲ್ಲಿ ಅವರ ಮೌಖಿಕ ಸಾಹಿತ್ಯದ ಪಾತ್ರ ಮುಖ್ಯವಾಗುತ್ತದೆ.

ಮಾದಿಗ ಸಮುದಾಯದವರು ತಾವು ಪೂಜಿಸುವ ಗಾಳೆಮ್ಮ ಸ್ವಾರಮ್ಮ, ಮೈಲೆಮ್ಮ ಹೀಗೆ ಹಲವು ಗ್ರಾಮದೇವಗೆಗಳ ಮೇಲೆ ಕಟ್ಟಿದ ಪದಗಳು ಈ ರೀತಿಯಾಗಿವೆ.

* ತಾಯವ್ವ ನನ್ನವರ
ಹೋಗಿಕೈಮುಗಿಯುವವರ
ದೇವಕ ಬಂದಾಗ ನನೆದವರು
ಗಾಳೆಮ್ಮನ ತಾಯಿ ಹಣ್ಣದ
ನೆನೆಯವರು

* ಯಕವ್ವ ನೆನೆವರು
ಎತ್ತಿಕೈ ಮುಗಿಯುವವರು

ಕುತ್ತಿಗೆ ಬಂದಾಗ ನೆನೆಯುವವರು
ಸಾರಮ್ಮನ ಎತ್ತವ್ವ ಅನ್ನಾದ
ಅರಿಯವರೂ
* ತಾಯವ್ವನ ನೆನೆಯಕಾ
ಬಾಳೆಹಣ್ಣು ಬೇಕಾ
ಜೋಳಗಿ ತುಂಬಾ ಹೂವಾಬೇಕಾ
ಗಾಳೆಮ್ಮನ ತಾಯವ್ವನ ನೆನೆಯಾಕ
ಮಾನ ಬೇಕಾ
* ಯಕವ್ವ ನೆನೆಯಕಾ
ಉತ್ತತ್ತಣ್ಣ ಬೇಕಾ
ಮುತ್ತಾಲಿತುಂಬಾ
ಹೂವಾ ಬೇಕಾ
ಮೈಲಮ್ಮನ ಎತ್ತವ್ವನ
* ನೆನೆಯಕ ಮನಃಬೇಕಾ
ಮುಗಿನ ಯೇ ಉಸುರಾ
ಮೂವತ್ತು ಗಾವಾಗ
ಮೂವತ್ತ ಕೋಟಿ ಮುಗಿದಾವ
ಗಾಳೆಮ್ಮನ ಮುಗಿನ್ಯಾಗೈತಿ
ದಯ ಕರುಣಾ
ಗಾಳೆಮ್ಮನ ಮುಗಿನ್ಯಾಗೈತಿ
ದಯಾ ಕರುಣಾ

ಆಂಜನೇಯನ ಕುರಿತು :

ಕೊಪ್ಪಳ ನಗರದ ಮಾದಿಗ ಸಮುದಾಯದವರ ಬಹುತೇಕ ಕುಟುಂಬಗಳ ಕುಲ ದೇವರು ಮನೆ ದೇವರು ಆಂಜನೇಯ (ಹನುಮಂತ). ಇಲ್ಲಿಯ ಕೇರಿಯಲ್ಲಿ ಆಂಜನೇಯನ ದೇವಸ್ಥಾನವಿದ್ದು ಪ್ರತಿ ಶನಿವಾರ ಪೂಜೆ ನಡೆಯುತ್ತಿದೆ. ಕೇರಿಯಲ್ಲಿ ಇರುವ ಬೆಡಗದವರು, (ಕುಲದವರು) ವರ್ಷದಲ್ಲಿ ಇಂತಿಷ್ಟು ತಿಂಗಳು ಆ ದೇವಸ್ಥಾನದ ಉಸ್ತುವಾರಿ ನೋಡಿಕೊಳ್ಳಬೇಕಾಗುತ್ತದೆ.

ಯುಗಾದಿ ಹಬ್ಬದಲ್ಲಿ ಈ ದೇವಸ್ಥಾನದಲ್ಲಿ ವಿಶೇಷ ರೀತಿಯಲ್ಲಿ ಜಾತ್ರೆಯ ನಡೆಯುತ್ತಿದೆ. ಒಟ್ಟು ಎರಡು ದಿನ ವಿಶೇಷ ಪೂಜೆ ನಡೆಯುತ್ತಿದೆ. ಕೊನೆಯದಿನ ದೇವಸ್ಥಾನದ ಎದುರಿಗೆ ಇರುವ ಕೊಂಡು (ಹೊಂಡ)ದಲ್ಲಿ ನೀರು ಬಿಟ್ಟು ಆ ಕೊಂಡದ ಮೇಲೆ ಹಂದ್ರ ಹಾಕಿರುತ್ತಾರೆ. ಹಂದರಕ್ಕೆ ಒಂದು ಕಾಯಿ ಕಟ್ಟಿರುತ್ತಾರೆ. ಯುವಕರು ಆ ಕಾಯಿಯನ್ನು ಹರಿಯಬೇಕು. ಈ ಸಂದರ್ಭದಲ್ಲಿ ಕೇರಿಯ ಮಹಿಳೆಯರು ಹಾಡು ಹಾಡುತ್ತಾರೆ.

* ಇಂತಿಂತ ಗೋಣಿಗಳ
ಜಿಗಿದ ಬಂದಿನ ತಾಯಿ
ಶ್ರೀರಾಮರ ಭಂಟ
ದೇವಕ ಸೆಮರಂತ
ನಾನೇ ಹನುಮಂತ
ಗೋವಿಂದ ಗೋವಿಂದ ನೂ
* ಒಂದಕ್ಕೆ ಹಾಸೋರ
ಒಂದಕ್ಕೆ ಹೊದಯುವರ
ಒಂದು ತಿಂಗಳಿಗೊಮ್ಮ
ಧರಣಿಯ ಅನ್ನರೂ
ದೈತಾರೂ ಮುನ್ನರೂ
ಹಾರುವ ಪಿರಂಗಿ
ಹನ್ನೆರಡು ಸಾವಿರದ
ಗಾಜಿನ ಕಂಬಕ
ಬಂಗಾರದ ಕಿರಿಸುತ್ತಿ
* ಇಂತಿಂತ ಗೋಣಿಗಳ
ಜಿಗಿದ ಬಂದಿನ ತಾಯಿ
ಶ್ರೀರಾಮರ ಭಂಟ
ದೇವಕ ಸೆಮರಂತ
ನಾನೇ ಹನುಮಂತ
ಗೋವಿಂದ ಗೋವಿಂದ ನೂ

* ಎರಡಕ್ಕಿ ಹಾಸೊರ
ಎರಡಕ್ಕಿ ಹೂದಯುವರ
ಎರಡ ತಿಂಗಳಿಗೊಮ್ಮೆ
ಧರಣಿಯ ಅನ್ನೋರೂ
ದೈತಾರೋ ಮನ್ನುರು
ಹಾರುವ ಪಿರಂಗಿ
ಹನ್ನೆರಡ ಸಾವಿರದ
ಗಾಜಿನ ಕಂಬಕ
ಬಂಗಾರದ ಕಿರಸುತ್ತಾ
* ಇಂತಿಂತ ಗೋಣಿಗಳ
ಜಿಗಿದ ಬಂದಿನ ತಾಯಿ
ಶ್ರೀರಾಮರ ಭಂಟ
ದೇವಕ ಸೆಮರಂತ
ನಾನೇ ಹನುಮಂತ
ಗೋವಿಂದ ಗೋವಿಂದ ನೂ
* ಮೂರಕ್ಕೆ ಹಾಸೋರ
ಮೂರಕ್ಕಿ ಹೊದವವರು
ಮೂರು ತಿಂಗಳಿಗೊಮ್ಮೆ
ಧರಣಿಯ ಅನ್ನೊರೂ
ದೈತಾರಾ ಮುನ್ನೂರು
ಹಾರುವ ಪಿರಂಗಿ
ಹನ್ನೆರಡ ಸಾವಿರದ
ಗಾಜಿನ ಕಂಬಕ್
ಬಂಗಾರದ ಕಿರಿಸುತ್ತಾ

* ಇಂತಿಂತ ಗೋಣಿಗಳ
ಜಿಗಿದ ಬಂದಿನ ತಾಯಿ
ಶ್ರೀರಾಮರ ಭಂಟ
ದೇವಕ ಸೆಮರಂತ
ನಾನೇ ಹನುಮಂತ
ಗೋವಿಂದ ಗೋವಿಂದ ನೂ
* ನಾಕ್ಕಕ್ಕಿ ಹಾಸೋರು
ನಾಕ್ಕಕ್ಕಿ ಹೊದೆಯೂರೂ
ನಾಕ ತಿಂಗಳಿಗೊಮ್ಮೆ
ಧರಣಿಯ ಅನ್ನೂರು
ದೈತರೂ ಮುನ್ನೂರು
ಹಾರುವ ಪಿರಂಗಿ
ಹನ್ನೆರಡ ಸಾವಿರದ ಗಾಜಿನ ಕಂಬಕ
ಬಂಗಾರದ ಕಿರಿಸುತ್ತ
* ಇಂತಿಂತ ಗೋಣಿಗಳ
ಜಿಗಿದ ಬಂದಿನ ತಾಯಿ
ಶ್ರೀರಾಮರ ಭಂಟ
ದೇವಕ ಸೆಮರಂತ
ನಾನೇ ಹನುಮಂತ
ಗೋವಿಂದ ಗೋವಿಂದ ನೂ
* ಐದಕ್ಕೆ ಹಾಸೋರೂ
ಐದಕ್ಕೆ ಹೋದಯರೊ
ಐದು ತಿಂಗಳಿಗೊಮ್ಮೆ
ಧರಣಿಯ ಅನ್ನೂರು
ದೈತಾರೂ ಮುನ್ನೂರು

ಹಾರುವ ಪಿರಂಗಿ
ಹನ್ನೆರಡ ಸಾವಿರದ ಗಾಜಿನ ಕಂಬಕ
ಬಂಗಾರದ ಕಿರಿಸುತ್ತ
* ಇಂತಿಂತ ಗೋಣಿಗಳ
ಜಿಗಿದ ಬಂದಿನ ತಾಯಿ
ಶ್ರೀರಾಮರ ಭಂಟ
ದೇವಕ ಸೆಮರಂತ
ನಾನೇ ಹನುಮಂತ
ಗೋವಿಂದ ಗೋವಿಂದ ನೂ

ಹೆಣ್ಣು ಮಕ್ಕಳು ಮೈನೆರೆದ ಸಂದರ್ಭದಲ್ಲಿ ಮಾದಿಗರಲ್ಲಿಯೂ ಕೂಡ ವಿಶೇಷವಾದ ಆಚರಣೆಯ ಮೂಲಕ ಕಾರ್ಯಕ್ರಮವನ್ನು ಮಾಡುತ್ತಾರೆ.

ಸಾಮಾನ್ಯವಾಗಿ ಮೈನೆರದ ಸಂದರ್ಭದಲ್ಲಿ ಆ ಹೆಣ್ಣು ಮಗಳನ್ನು ಮನೆಯ ಒಂದು ಪ್ರತ್ಯೇಕ ಕೋಣೆಯಲ್ಲಿ ಅಥವಾ ಮೂಲೆಯಲ್ಲಿ ಕೂರಿಸುತ್ತಾರೆ. ಸಾಯಂಕಾಲ ಕೇರಿಯಲ್ಲಿಯ ಎಲ್ಲರ ಮನೆಗೂ ಹೋಗಿ ಆರತಿ ಎತ್ತಲಿಕ್ಕ ಕರೆದು ಪ್ರತಿದಿನ ಆರತಿ ಎತ್ತಿಸಲು ಅವರ ಅವರವರ ಶಕ್ತನುಸಾರಕ್ಕೆ ತಕ್ಕಂತೆ ಅಂದರೆ ೭.೯.೧೧.೨೧ ದಿನಗಳ ವರೆಗೆ ಆರತಿ ಎತ್ತಿ ಕೊನೆಯ ದಿನ ಮನೆಯ ಮುಂದೆ ಮಂಟಪ ಮಾಡಿ ಅದರಲ್ಲಿ ಕುಂದಿರಿಸಿ ಆರತಿ ಎತ್ತುತ್ತಾರೆ. ಈ ಸಂದರ್ಭದಲ್ಲಿ ಪ್ರತಿದಿನ ಸೋಬಾನ ಪದಹಾಡುವವರಿಂದ ಹಾಡನ್ನು ಹಾಡಿಸುತ್ತಾರೆ.

* ಹನ್ನೆರಡ ವರಸಾದಾಕಿ ಹಾರೋರ
ಕನ್ನೆ ಸಾಲಿಗೆ ಹೋಗಿ ಹಾರೋರ
* ಕಾಲಿಮಡಿಯಲಿ ಕುಂತ
ಸೂತಾಕವನ ಕಂಡು
ಬೋರಾಡಿ ಅಳುತ್ತಿದ್ದಳು
* ಸಾಲಿಹುಡಗರು ಬಡಿದರೆಗೂ
ನನಮಗಳಾ
ಹೋದುಡಗರು ಬಡಿದರೇನೋ
ನನ ಮಗಳಾ

* ಸಾಲಿಹುಡಗರು ಬಡದಿಲ್ಲ
ಹೋದಹುಡಗರು ಬಡದಿಲ್ಲ
ಸೂತಕ ಕಂಡನೆವ್ವ
* ತುಂಬಿದ ತೋಳಿನ್ಯಾಕಿ
ನನಮಗಳಾ
ಸೋಡಾಂಗದ ಬಣ್ಣದಾರೆ
ನನ ಮಗಳಾ
ಚಲುವಿದ್ರೂಪತಿ ನಿನಗಾ
ಗಂಡಾರು ದೊರೆಯಲಿಲ್ಲ
* ಹನ್ನರಡ ವರಸದಾಕಿ ಹಾರೋರ
ಕನ್ಯೆ ಸಾಲಿಗೆ ಹೋಗಿ ಹಾರೋರ
ಕಾಲ ಮಡಿಯಲಿ ಕುಂತ
ಸೂತಾಕವನ ಕಂಡು
ಬೋರಾಡಿ ಅಳತ್ತಿದ್ದಳು.
* ಹಂಪಿಯಾಗ ಇರುವಂತ
ಪಂಪಾಪತಿ ತಾನೆ ಬಂದ
ಪಂಪಾಪತಿ ತಾನೆ ಬಂದ
ಹಂಪಮ್ಮನಿಗೆ ಹೂವ ತಂದ
ಹೂವ ಮುಡಿಸಿರಿ
ಸಣ್ಣ ಮಲ್ಲಿಗೆ ನೀಲಾಬಾಲಾಗ್
* ಹಂಪಿಯ್ಯಾಗ ಇರುವಂತ
ರಾಮಲಕ್ಷ್ಮಣ ತಾನೇ ಬಂದ
ರಾಮ ಲಕ್ಷ್ಮಣ ತಾನೇ ಬಂದ
ಸೀತಮ್ಮಗ ಹೂವ ತಂದಾ
ಹೂವ ಮುಡಿಸಿರಿ ಸಣ್ಣ ಮಲ್ಲಿಗೆ
ನೀಲಾ ಬಾಲಾಗ್

* ಗುಡ್ಡದಾಗ ಇರುವಂತ
ಇರಭದ್ರ ತಾನ ಬಂದ
ಇರಭದ್ರ ತಾನೇ ಬಂದ
ಗಾರಣ್ಣಿಗೆ ಹೂವ ತಂದ
ಹೂವ ಮುಡಿಸಿರಿಸಣ್ಣ
ಮಲ್ಲಿಗೆ ನೀಲಾ ಬಾಲಾಗ್
* ಗುಡ್ಡದಾಗ ಇರವಂತೆ
ಜಂಭುಲಿಂಗ ತಾನೆ ಬಂದ
ಜಂಭುಲಿಂಗ ತಾನೆ ಬಂದ
ಗಾಳಮ್ಮಗ ಹೂವ ತಂದ
ಹೂವ ಮುಡಿಸಿರಿ ಸಣ್ಣ
ಮಲ್ಲಿಗೆ ನೀಲಾ ಬಾಲಾಗ

ಮಾದಿಗ ಸಮುದಾಯದವರಲ್ಲಿ ಮದುವೆಗೆ ಮುಂಚೆ ಸಂಬಂಧ ಬೆಳಸಲಿಕ್ಕೆ ಬಂದ ಸಂದರ್ಭದಲ್ಲಿಯೂ ಕೂಡ ವಿಶೇಷ ರೀತಿ ರೂಢಿ ಸಂಪ್ರದಾಯಗಳನ್ನು ಬೆಳಸಿಕೊಂಡು ಬಂದಿದ್ದಾರೆ. ಈ ಸಂದರ್ಭದಲ್ಲಿ ಸೋಬಾನ ಗೀತೆ ಹಾಡುವರು.

* ಗೋಧಿಗುನ್ನೂರು ಯಾವ್ಯಾದರ
ಗೂರತಾಕುಣೊಂದು ಅರಿಯದರ
ಅವರ ನಮಗೇನ ಅತಿದವರ
ಹೆಣ್ಣ ಬೇಡಕ ಬಂದವರಾ
* ಗುಜುಗುಜು ಮಾಹಾ ಪುರುದವರು
ವಸ್ತ ಒಡವಿ ಮಾತಾಡಾ
ನಾಳೆ ನಾಡದ ಬಂದು
ಮನೆ ನೋಡಾ ನಿಮ್ಮಸ್ಸಿಗೆ ಬಂದರ
ಹೆಣ್ಣು ಕೋಡ

* ಹಂಡೆದ ಸಾಮಾನು ಗಿಂಡ್ಯೆತಿ
ಬಂಡೆದ ಸಾಮಾನು ಬಾಳ್ಯೆತಿ
ಮೂಲಿಮೂಲಿಗೆ ಒಟ್ಯೆತ್ರೆ
ಸಿರಿ ದವಲತ್ತಿನೊಳಗೊಂದಡಗ್ಯೆತ್ರೆ
* ಪಂಚಾಂಗದಣ್ಣನ ಕರಸರೆ
ಪಂಚಾಂಗ ತೆಗೆಸಿ ಕೇಳಿಸಾರ
ನಾಕು ಮಂದಿ ಹಿರಿಯರ ಕೂಡಿಸಿರಿ
ನಮ್ಮನಿಮ್ಮ ಬೆಡಗ ಹೊಂದಿಸಿರಿ.
* ಕಾಲಗಕಾಲಪಿಳ್ಳಿಲಿಟ್ಟಿರಲಿ
ಎಲ್ಲಾದ ಕೂಂಡೊಂದು ಪಾವಿರಲಿ
ಗುಂಡಚ್ಚಿದ ಭಾವಚ್ಚಿದ ಬಾವಾಲೇ
ಹಡೆದ ಹೆಣ್ಣಿನ ತಾಯರಲೇ
* ಅರಿಶಿಣ ದರಿಶಿಣ ಹಚ್ಚುವರು
ಬೀಗು ಬಣ್ಣದ ತುಂಬುವರು
ಹಣಕಾಯಿ ಉಡಲಾದ ಇಡುವವರ
ಹೆಣ್ಣು ನಿಶ್ಚಯ ಮಾಡಿಕೊಂಡು ಹೋಗುವರು
* ಅತ್ತಿ ಊರೊಂದು ಅದಿನಾರ
ಕಮಾನ ಕಟ್ಟಿತೇ ಬಲುಜೋರ
ಅಂತಿಲಿ ಮಗಳನು ಕೊಡುವಾರ
ಗರತಿ ನಿಬ್ಬಾಣ ಹೊಯ್ಯಿವರು

ಮದುವೆ ಸಂದರ್ಭದಲ್ಲಿ ಒಳಿಕಲ್ಲು ಪೂಜೆ (ಲಗ್ನಕಟ್ಟಿಸುವ) ಕಾರ್ಯಕ್ರಮದಲ್ಲಿ ಸೋಬಾನ ಗೀತೆ ಹಾಡುವರು.

* ಒಂದಾರ ಕೊಡತಿನಿ ನನ್ನ ಓಣಿಗೆ ಬಾರ
ನನಗೊಂದು ನನ್ನ ಸೊಸೆಗೊಂದ ಸುಯಿ
ನನಗೊಂದು ಹೇ ನನ್ನ ಸೊಸಗೊಂದು ಚ್ಯೆಕಿರಿಯಾ
ಗಾಳೆವ್ವ ಬಾರಾ ಐದ ತನಕ ಸುಯಿ.

* ಎರಡರಾ ಕೊಡತೀನಿ ನನ್ನಾ ಓಣಿಗೆ ಬಾರ
ನನಗೆಡರ ನನ್ನ ಸೊಸಿಗೆರಡು ಸುಯಿ
ನನಗೆರಡ ಹೇನನ್ನ ಸೊಸಿಗೆರಡು ಚೈಕಿರಿಯ
ಫಕೀರವ್ವ ಬಾರಾ ಐದ ತನಕ ಸುಯಿ
* ಮೂರರಾ ಕೊಡತೀನಿ ನನ್ನ ಓಣಿಗೆ ಬಾರ
ನನಗ್‌ಮೂರ ನನ್ನ ಸೊಸಿಗೆಮೂರ ಸುಯಿ
ನನಗೆ ಮೂರ ಹೇ ನನ್ನ ಸೊಸಿಗಮೂರ ಚೈಕಿರಿಯ
ಲಕ್ಷ್ಮವ್ವ ಬಾರಾ ಐದ ತನಕ ಸುಯಿ.
* ನಾಕಾರ ಕೊಡತೀನ ನನ್ನ ಓಣಿಗೆಬಾರ
ನನಗನಾಕ ನನ್ನ ಸೊಸಿಗೆ ನಾಕ ಸುಯಿ
ನನಗೆನಾಕ ಹೇ ನನ್ನ ಸೊಸಿಗನಾಕ ಚೈಕಿರಿಯ
ಗಂಗವ್ವ ಬಾರ ಐದ ತನಕ ಸುಯಿ
* ಐದರ ಕೊಡತಿನ ನನ್ನ ಓಣಿಗೆ ಬಾರ
ನನಗ ಐದ ನನ್ನ ಸೊಸಿಗೈದ ಸುಯಿ
ನನಗೆಐದ ಹೇ ನನ್ನ ಸೂಸಿಗೈದು ಚೈಕಿರಿಯ
ನೀಲವ್ವ ಬಾರ ಐದ ತನಕ ಸುಯಿ
* ಆ ನಾಡ ಕಲ್ಲುಟಗ ಈನಾಡ ಕಲ್ಲುಟಗ
ಗುತ್ತಿಗೆ ಮಲನಾಡ ಕಲ್ಲುಟಿಗ ಸುಯಿ
ಗುತ್ತಿಗೆ ಮಲನಾಡ ಕಲ್ಲುಟಗ ಕಲ್ಲ
ಒಪ್ಪವಾಗ್ಯಾವ್ ನಾಗತಾವ ಸುಯಿ
* ಆ ನಾಡ ಕಲ್ಲುಟಗ ಈ ನಾಡ ಕಲ್ಲುಟಗ
ಗೋಧಿಗೆ ಮಲನಾಡ ಕಲ್ಲುಟಗ ಸುಯಿ
ಗೋಧಿಗೆ ಮಲನಾಡ ಕಲ್ಲುಟಗನ ಕಲ್ಲ
ಛಾಯವಾಗ್ಯೆವ ನಗತಾವ ಸುಯಿ

* ಅಣ್ಣಯ್ಯ ಮಾಡಿದ ಬಣ್ಣದ ಬಟ್ಟಲದಾಗ

ಕೆಮ್ಮಣ್ಣೆ ಕಲಸ ಸೊಸೆ ಮುದ್ದ್ಯ ಸುಯಿ

ಅಪ್ಪಯ್ಯ ಮಾಡಿದ ಮುತ್ತಿನ ಬಟ್ಟಲಿದಾಗ

ಅಪ್ಪತ್ತ ಕಲಸ ಸೊಸೆ ಮುದ್ದಸುಯಿ

* ಬ್ಯಾಳಿಕಲ್ಲಿಟ್ಟಿಗೆ ನಾನ್ಯಾರನ ಕರೆಯಲಿ

ಮೇಲಾಮಾಳಿಗಿ ಹಿರಿಯ ಸೊಸೆಯ ಸುಯಿ

ಮೇಲೆನೆ ಮಾಳಿಗೆ ಹಿರಿ ಸೊಸಿಯ ಸುನೀತವ್ವ

ಬ್ಯಾಳಿಕಲ್ಲಿಗೆ ಸರಿಸಾರ ಸುಯಿ

* ಗೋಧಿ ಕಲ್ಲಿಟ್ಟು ಮತ್ಯಾರನ ಕರೆಯಲ್ಲಿ

ಜತ್ತಮಾಳಿಗೆ ಹಿರಿಯ ಸುಯಸಯ ಸುಯಿ

ಜತ್ತೇನೆ ಮಾಳಿಗೆ ಹಿರಿ ಸೊಸೆಯ ಗಿರಿಜವ್ವ

ಗೋಧಿ ಕಲ್ಲಿಗೆ ಕರಿಸರ ಸುಯಿ.

ಮದುವೆ ಸಂದರ್ಭದಲ್ಲಿ ತಾಳಿ ಕಟ್ಟುವ ಮುನ್ನ ಗಂಡಿನ ಕಡೆಯವರು ಮತ್ತೆ ಹೆಣ್ಣಿನ ಕಡೆಯವರು ಸುರಗಿ ನೀರು ಹಾಕುತ್ತಾರೆ. ಅಂದರೆ ಮದುವೆ ಗಂಡು ಮತ್ತು ಅವರ ಜೊತೆ ತಾಯಿ ಅವರಿಬ್ಬರನ್ನು ಹಂದರದ ಕೆಳಗೆ ನಾಲ್ಕು ಮೂಲೆಯಲ್ಲಿ ಒಂದೊಂದು ಮಣ್ಣಿನ ಬಿಂದುಗೆ ಇಟ್ಟು, ಆ ನಾಲ್ಕು ಬಿಂದುಗಿಗೆ ದಾರ (ಬಿಳಿದಾರ) ಸುತ್ತಿರುತ್ತಾರೆ. ಇದರಲ್ಲಿಯೂ ಮಾದಿಗರ ಕುಲ ಬೆಡಗು ಬೇರೆ ಬೇರೆ ಇರುವಂತೆ ಐದು ಎಳಿ ಸುರಗಿ, ಏಳು ಎಳಿ ಸುರಗಿ, ಹಾಗೂ ಒಂಭತ್ತು ಎಳಿ ಸುರಗಿ ಇರುತ್ತದೆ. ಒಂದು ಬೆಡಗು ಅಥವಾ ಎಳಿ ಸುರಂಗಿಯ ಮತ್ತೊಂದು ಬೆಡಗು ಅಥವಾ ಎಳಿ ಸುರಗಿಯವರ ಕಾರಣ ಮಾಡುವಂತಿಲ್ಲ. ಅವರವರ ಕಾರಣಗಳನ್ನು ಅವರೆ ಮಾಡಬೇಕು. ಈ ಸಂದರ್ಭದಲ್ಲಿ ಸೋಬಾನ ಹಾಡು ಈ ರೀತಿಯಾಗಿದೆ.

* ತಂಗಿಯ ನೂಲು ತಾಳ

ಕೈನೋಲು ತೊಗೊಂಡು

ನೀವ್ರ ಚಂದದಲಿ ಸುರಗಿ

ಸುತ್ತಿರಣ್ಣ ಸುರಗಿಯ ಮಾವ

* ಚಪ್ಪರ ವೇಳೆದಾಗ

ಒಪ್ಪುವ ರಾಜಯಿನ್ನಿಟ್ಟು

ಅವರಕ್ಕ ನೂಲು ತಾಳರ
ಕೈನೂಲು ಸುರಗಿಯ ವನವ
* ಅಕ್ಕನೂಲು ತಾರ
ಕೈನೂಲು ತಗೊಂದು
ನೀವ ಒಪ್ಪುದಲ್ಲಿ ಸುರಗಿ
ಸುತ್ತಿರಣ್ಣ ಸುರಗಿಯ ವನದ
* ಸುರಗಿಯ ಸುತ್ತಣ್ಣ
ಸುತ್ತ ಮುತ್ತ ನೋಡಲುಬ್ಯಾಡ
ನೀನು ಎತ್ತ ನೋಡಿದರು
ನಿನ್ನ ಬಳಗ ಸುರಗಿಯ ವನದ
* ಎತ್ತನೇ ನೋಡಿದ ರೋ
ನಿನ್ನ ಬಳಗ ನಿಂಗಣ್ಣ
ನಿನ್ನ ಮಡದಿಯ ಹೆಸರಳ್ಳಣ್ಣ
ಸುರಗಿಯ ವನವ
ಮಾವಗ ಹೆಂಡಿತಿಯ
ಹೆಸೆರಳದಿದ್ದಾರೆ ಮೇಲಿನ
ಚಾಜ ನಿಮಗಿಲ್ಲ ಸುರಗಿಯ ವನವ
* ಅಲ್ಲೆಂಬ ಅರಿವ್ಯಗ
ಗಿಲ್ಲೆಂಬ ಮಗಿನಿಟ್ಟು
ನನ್ನ ನಿಲ್ಲಿದೊಗ್ಗಣಿಯ
ಬೇರಿಸಾರ ಸುರಗಿಯ ವನದ
ನಿಲ್ಲಿದೊಗ್ಗಣಿಯ ಬೇರಸಾ
ಕಾಲನ ಪಿಳ್ಳಿ ನನ್ ಮಿಣಿಕ್ಯಾಡಿ
ಮೀಣದ ಕೆಸರಾಗಿ ಸುರಗಿಯ ವನವ

* ಅರಿವೆ ನಿನ್ನ ಹೆಸರ
ಹರಿಶ್ಚಂದ್ರರಾಯನ
ನನ ಪಡೆದ ನಿನ್ನ ಹೆಸರ
ಪರದಾಣೆ ಸುರಗಿಯ ವನವ
ಪಡೆದವನ ನಿನ ಹೆಸರ
ಪರವಾಣೆ ಮ್ಯಾಗಳ
ಮುಗಿಲಿನ ಹೆಸರ
ಗಿಳಿಯರಾಮ ಸುರಗಿಯ ವನವ

ಮಾದಿಗ ಸಮುದಾಯದವರ ಮದುವೆ ಸಂದರ್ಭದಲ್ಲಿ ತಾಳಿ ಕಟ್ಟುವದಕ್ಕೆ ಮೂರುದಿನಗಳ ಮೊದಲು ಮದುವೆ ಗಂಡಿಗೆ ಅರಿಶಿಣ ಹಚ್ಚಿ ಮದುಮಗನನ್ನು ಮಾಡುತ್ತಾರೆ. ಆ ಸಂದರ್ಭದಲ್ಲಿ ಮದುಮಗನನ್ನು ಈ ಸಮುದಾಯದ ಬೇರೆ ಬೇರೆ ಮನೆಯವರು ಊಟಕ್ಕೆ ಕರೆದುಕೊಂಡು ಹೋಗುತ್ತಾರೆ. ಅದಕ್ಕೆ (ಕೋರುಟ ಎನ್ನವರು) ಆ ಸಮಯದಲ್ಲಿ ಸೋಬಾನ ಗೀತೆ ಹಾಡುವರು.

* ಹಂದಕಾದಾಗ ಬಂದಾನ ಇಪ್ಪತ್ತು
ಬಂದಿಯ ಕೈ ಹಿರಿಯ್ಯಾಕೆ
ಬಂದಿಯ ಕೈ ಹಿರಿಯ್ಯಕೆ ಗಂಗವ್ವ
ಕಂದನ ಕೋರೂಟಕ ಕಳುಯಿರಿ
* ನಮ್ಮ ಕಂದನ ನವ್ಯಾಕ ಕಳುವೆನು
ಕಂದನ ಕಾಲೆತ್ತಿ ಅಳವದು
ದೃಷ್ಟ ಆ ರಾದಾರ ಬುತ್ತಿಲ್ಲಿ
ಮಕ್ಕಳ ಗೂಡುಉಣಿಸಿ ಕಳುಸೆವೆವು

ಮಾದಿಗ ಸಮುದಾಯದವರ ಮದುವೆ ಸಂದರ್ಭದಲ್ಲಿ ಮಾಂಗಲ್ಯ ಧಾರಣ (ತಾಳಿ ಕಟ್ಟುವಾಗ) ಸೋಬಾನ ಗೀತೆ ಈ ರೀತಿಯಾಗಿದೆ.

* ತಾಳಿಯ ಕಟ್ಟುವ ವ್ಯಾಳೆದಾಗ ಹೇಳಿದಾ ಕೇಳಬೇಕಾ
ತಾಳಿ ಕಟ್ಟಿದ ಗಳಿಗ್ಯಾಗ್
ತಾಳಿಯ ಕಟ್ಟುಗಳಿಗ್ಯಾಗ

ಗಂಡಿನವರು ಗೆದ್ದವಂದ
ಕಾಳಿ ಹಿಡಿದಾರ
* ಸೂತಾರೋ ಸೋತಾರೋ
ಸೋತಾರೆಣ್ಣನವರೂ
ಸೋತವೆಂದು ಕಾಳಿ
ಹಿಡಿದಾರ
* ಮಾಳಿಗಿ ಏರ್‍ಯಾರ್
ಯಾಳ್ಯಾವ ನೋಡ್ಯಾರ್
ಏಳೆಂಟ್‌ತರದ
ಹಿರಿಯರ
ಏಳೆಂಟ್ ಹೇ ತರದ
ಹಿರಿಯ ಕೊಡಿಕೊಂಡು
ಯಾಳೆವ ನೋಡ್ಯಾರ
ಲಗ್‌ನಾಕ
* ಉಪ್ಪರಗಿ ಏರ್‍ಯಾರ
ವಸ್ತುಗಳ ನೋಡ್ಯಾರ
ಹತ್ತೊಂಟೂ ತರದ
ಹಿರಿಯರು
ಹತ್ತೆಂಟು ಹೇ ತರದ
ಹಿರಿಯರು ಕೂಡಿಕೊಂಡು
ಹೊತ್ತ ನೋಡ್ಯಾರ್ ಲಗನಾಕ

ಸೀಮಂತ ಕಾರ್ಯಕ್ರಮದಲ್ಲಿ (ಕುಬುಸದ ಕಣ) ಸೋಬಾನ ಪದ

* ಹಪ್ಪಳ ಸಂಡಿಗೆ ಕರದ ನಾನು
ಉಪ್ಪಿನೋಳ ತುಂಬತ್ತಿದ್ದೆ
ಬಾಲನ್ ಬಾಕಿಲನಾಗ್ ಉಂಡೆನೆಂದಳು
ಕಂದನ್ ಬಾಕಿಲನಾನ್ ತಿಂದೆನಂದಳೂ

* ಹಸಕಡ್ಡಿಯ ಸೀರಿ
ತೋಪ ಸೆರಗ ಮೇಲಮಾಡಿ
ಬಾಲನ್ ಬಾಕಿಲ ನಾನ್ ಉಟ್ಟನೆಂದಳೂ
ಕಂದನ್ ಬಾಕಿಲ ನಾನ್ ತೊಟ್ಟನೆಂದಳೂ
* ಎಲಿತುಂಬ ರೊಕ್ಕತೊಗಂದು
ಬಳಿಗ್ಯಾರ್ ಮನೆಗೊದೆ
ಹರಿಶಿನ ಕಡ್ಡಿಯ ಬಳಿಯ ಇಟ್ಟನೆಂದಳೂ
ಜಂಭದ ಬಳಿಯ ತೊಟ್ಟನೆಂದಳೂ
* ಕೈ ತುಂಬಾ ರೊಕ್ಕ ತೊಗೊಂದು
ಹೂಗಾರ ಮನೆಗೊದೆ
ಮಲ್ಲಿಗೊವಿನ ದಂಡಿ ಮುಡಿದೆನೆಂದಳೂ
ಸಾವಂತಿ ಹೂವಿನ ದಂಡಿ ಮುಡಿದನೆಂದಳೂ

ಪ್ರತಿಯೊಂದು ಸಮುದಾಯದಂತೆ ಮಾದಿಗ ಸಮುದಾಯದಲ್ಲಿಯೂ ಕೂಡಾ ಮಗು ಹುಟ್ಟಿದ ೧೯, ೨೧ ದಿನಕ್ಕೆ ನಾಮಕರಣ ಮಾಡುವ ಪದ್ಧತಿ ಇದೆ. ಇದಕ್ಕೆ ಅವರು ತೊಟ್ಟಿಲು ಇಡುವುದು ಎಂದು ಕರೆಯುತ್ತಾರೆ. ಆ ಸಮಯದಲ್ಲಿ ಸೋಬಾನಾ ಗೀತೆ ಹಾಡುವರು.

* ಅಂದ ಚಂದ್ದಾದಿಂದ
ಬಾಗಿನದರು ಬಂದ
ಬಾಗಿನದರು ಬಂದ
ಜೋಗಳಾಡಿ ನೀವೆ ಎಂದು
ಜೋ ಜೋ ಜೋ ಜೋ ಕಂದ
ಜನರಿಗಾನಂದ
* ತಕ್ಕಂತ ಬರಳಿಗೆ
ಮುತ್ತಿನುಂಗರ ತಂದು
ಅತ್ತಿಸೊದಾರತ್ತಿ
ಇಡುಬಾರೆ ನೀನೆ ಎಂದು

ಜೋ ಜೋ ಜೋ ಜೋ ಕಂದ

ಜನರಿಗಾನಂದ

* ತಕ್ಕಂತ ಕೊರಳಗೆ

ಮುತ್ತಿನಾರವ ತಂದು

ಅತ್ತಿ ಸೊದಾರತ್ತಿ

ಹಾಕ ಬಾರೆ ನೀನೆ ಎಂದು

ಜೋ ಜೋ ಜೋ ಜೋ ಕಂದ

ಜನರಿಗಾನಂದ

* ಹೆಸರು ಇಟ್ಟ ಬಳಿಕ

ಸೀರಿ ತಂದಾರು ಚಂದ

ಅತ್ತಿಸೊದಾರತ್ತಿ

ಉಡುಬಾರೆ ನೀನೆ ಎಂದ

ಜೋ ಜೋ ಜೋ ಜೋ ಕಂದ

ಜನರಿಗಾನಂದ

* ಜನಕ ಹುಟ್ಟಿನಿಂದ

ಜನರಿಗಾನಂದ

ಜನರಿಗಾನಂದ

ಜೋಗಳಾಡಿ ನೀನೆ ಎಂದು

ಜೋ ಜೋ ಜೋ ಜೋ ಕಂದ

ಜನರಿಗಾನಂದ

ಗೌರಿಹುಣ್ಣಿಮೆ ಸಂದರ್ಭದಲ್ಲಿ ಕೊಪ್ಪಳ ನಗರದ ಮಾದಿಗ ಸಮುದಾಯದವರು ಗೌರಮ್ಮನ ಮೂರ್ತಿಯನ್ನು ದೇವಸ್ಥಾನ ಮುಂದೆ ಕುಳ್ಳಿರಿಸಿ ಅದಕ್ಕೆ ಅಲಂಕಾರ ಮಾಡಿರುತ್ತಾರೆ. ಸಂಜೆ ಕೇರಿಯ ಹೆಣ್ಣುಮಕ್ಕಳೆಲ್ಲಾ ಆರತಿ ಹಿಡಿದುಕೊಂಡು ದೇವಸ್ಥಾನ ಗೌರಮ್ಮನ ಮುಂದೆ ಬಂದು ಬೆಳಗಿ ಹೋಗುತ್ತಾರೆ. ಈ ಸಂದರ್ಭದಲ್ಲಿ ಸೋಬಾನ ಪದ ಹಾಡುವರು.

* ಅರಿಶಿಣ ತಂದವೇ
ನಾವೆಲ್ಲರು ಹಚ್ಚಲು
ಒಂದವೇ ಪರಮೇಶ
ಪುರಾಣ ಪಾರ್ವತಿ
ಶಿವನಲ್ಲಿ ಆರತಿ
ಬೆಳಗಿದೆವು.
* ಗಂಧವ ತಂದವೇ ನಾವೆಲ್ಲರು
ಹಚ್ಚಲು ಬಂದವೇ
ಪರಮೇಶ ಪುರಾಣ
ಪಾರ್ವತಿ ಶಿವನಲ್ಲಿ ಆರತಿ
ಬೆಳಗಿದೆವು
* ವಿಭೂತಿ ತಂದೇವೆ ನಾವೆಲ್ಲಿ
ಹಚ್ಚಲು ಬಂದೇವೆ
ಪರಮೇಶ ಪುರಾಣ
ಪಾರ್ವತಿ ಶಿವನಲ್ಲಿ
ಆರತಿ ಬೆಳಗಿದೇವೆ.
* ಕುಂಕುಮ ತಂದೇವೆ ನಾವೆಲ್ಲರೂ
ಹಚ್ಚಾಲು ಬಂದೇವೆ
ಪರಮೇಶ ಪುರಾಣ ಪಾರ್ವತಿಯ
ಶಿವನಲ್ಲಿ ಆರತಿ ಬೆಳಗಿದೇವೆ
* ದಂಡಿಯ ತಂದೇವೆ ನಾವೆಲ್ಲರೂ
ಮುಡಿಸಲು ಬಂದೇವೆ
ಪರಮೇಶ ಪುರಾಣ
ಪಾರ್ವತಿ ಶಿವನಲ್ಲಿ
ಆರತಿ ಬೆಳಗಿದೇವೆ

* ಕಳಸಾವ ತಂದೆವೇ ನಾವೆಲ್ಲರು
ಬೆಳಗಲು ಬಂದೇವೆ
ಪರಮೇಶ ಪುರಾಣ
ಪಾರ್ವತಿ ಶಿವನಲ್ಲಿ
ಆರತಿ ಬೆಳಗಿದೇವೆ
* ಸೀರೆಯ ತಂದೇವೆ ನಾವೆಲ್ಲರು
ಉಡಿಸಲು ಬಂದೇವೆ
ಪರಮೇಶ ಪುರಾಣ
ಪಾರ್ವತಿ ಶಿವನಲ್ಲಿ
ಆರತಿ ಬೆಗಿದೇವೆ
* ಇಂದು ನಮಗೌರವನ
ಗಂಡ ಕರೆಯಲು ಬಂದ
ಗೊಂಡೇವದ ಶಾಲಿ ಮುಗಿದಿಲ್ಲ
ಕೋಲಾ
* ಗೊಂಡೇವದ ಹೇ ಶಾಲಿ ಮುಗಿದಿಲ್ಲ
ಗೌರವ್ವನ ಮದುವೆ ಮಾಡಿ
ಕಳುವೆವು ಕೋಲಾ
* ನಾಳೆ ನಮ ಗೌರವನ
ಮಾವ ಕರೆಯಲು ಬಂದ
ಗೊಂಡೇವದ ಶಾಲಿ ಮುಗಿದಿಲ್ಲ ಕೋಲಾ
* ಗೊಂಡೇವದ ಹೇ ಶಾಲಿ ಮುಗಿದಿಲ್ಲ
ನಮ ಗೌರವ ಬಂದುಣ್ಣಿವಿ
ಮಾಡಿ ಕಳುವೆವಾ ಕೋಲಾ
* ಚಪ್ಪರಕ ಹಾಕಿರುವ
ಸೊಪ್ಪಳ್ಳಿರಿಕಾಯಿ

ಉಣಲಿಲ್ಲ ಮಗಳ

ತಿಣಲಿಲ್ಲ ಕೋಲಾ

* ಉಣಲಿಲ್ಲ ಹೇ ಮಗಳ

ತಿಣಲಿಲ್ಲ ಶಿವರಾಯ

ಮಿತವಾಗಿ ಬಂದ ಮಗಳಿಗೆ ಕೋಲಾ

* ಹಂದರಕ್ಕೆ ಹಾಕಿರುವ

ಚಂದಳ್ಳಿರಿಕಾಯಿ

ಉಣಲಿಲ್ಲ ಮಗಳ

ತಿಣಲಿಲ್ಲ ಕೋಲಾ

* ಉಣಲಿಲ್ಲ ಹೇ ಮಗಳ

ತಿಣಲಿಲ್ಲ ಶಿವರಾಯ

ಮಿತವಾಗಿ ಬಂದ ಮಗಳಿಗೆ ಕೋಲಾ

ಹೆಣ್ಣು ಮಕ್ಕಳು ತಾವು ಮಧುವೆಯಾಗುಲಿರುವ ಗಂಡ ಯಾವ ರೀತಿಯಾಗಿರಬೇಕೆಂದು ಮತ್ತು ತಮ್ಮ ಸಂಸಾರ ಹೇಗಿರಬೇಕೆಂಬುದರ ಬಗ್ಗೆ ಹಾಡುವರು.

* ಹೆಣ್ಣಿನ ಜನುಮ ಕೆನಿಗಬೇಕಾ

ಮುತ್ತಿನಂತ ಗಂಡಿರಬೇಕಾ

ಮುತ್ತಿನಂತ ಗಂಡಿರಬೇಕಾ

ಗಂಡ ಮಡಕಿ ಹೊಡಿತ್ತಿರಬೇಕಾ

ಗಂಡ ಮಡಕಿ ಹೊಡಿತ್ತಿರಬೇಕಾ

ನಾನ ಬುತ್ತಿ ಹೊತ್ತಿರಬೇಕಾ

ನಾನ ಬುತ್ತಿ ಹೊತ್ತಿರಬೇಕಾ

ಆನಿಯಂತ ಎಮ್ಮಿರಬೇಕಾ

ಆನಿಯಂತ ಎಮ್ಮಿರಬೇಕಾ

ಗಂಡ ಕರವ ಬಿಡತಿರಬೇಕಾ

ಗಂಡ ಕರವ ಬಿಡತಿರಬೇಕಾ

ನಾನ ಆ ಹಾಲು ಇಂಡುತ್ತಿರಬೇಕಾ
ನಾನ್ ಹಾಲ ಇಂಡುತ್ತಿರಬೇಕಾ
ರಾಮಣ್ಣ ಲಕ್ಷ್ಮಣ್ಣ ನಿಂತಿರಬೇಕಾ
ರಾಮಣ್ಣ ಲಕ್ಷ್ಮಣ ನಿಂತಿರಬೇಕಾ
ನಾನ್ ದೇವರಿಗೆ ಹೋಗುತ್ತಿರಬೇಕಾ
ಕರೆದು ಕೈಯ ಮುಗಿತಿಯಬೇಕು.

ಮಾದಿಗರ ಗಾದೆಗಳು :

'ಗಾದೆ ವೇದಕ್ಕೆ ಸಮಾನ' ಎಂಬುದೂ ಒಂದು ಗಾದೆ. ವೇದವೆಂದರೆ ತಿಳುವಳಿಕೆ ಅಥವಾ ಜ್ಞಾನ. ಗಾದೆಗಳು ಕೂಡ ಮಾನವ ತನ್ನ ಬದುಕಿನ ಅನುಭವದಿಂದ ಗಳಿಸಿಕೊಂಡ ತಿಳುವಳಿಕೆ ಅಥವಾ ಜ್ಞಾನದ ಕಿಡಿಗಳೇ ಆಗಿರುತ್ತವೆ.

ಗಾದೆಯೆಂದರೆ ಜನರ ಅನುಭವದ ಸಾರವನ್ನು ಒಳಗೊಂಡಿರುವ ಅಡಕವಾದ ಹೇಳಿಕೆ. ಥಟ್ಟನೆ ಮನಸ್ಸನ್ನು ಹೊಕ್ಕು ಅಲ್ಲಿ ನೆಲೆಯಾಗಿ ನಿಲ್ಲತಕ್ಕಂಥವು. ಅರಿವು, ಸಂಕ್ಷಿಪ್ತತೆ, ತೀಕ್ಷಣತೆ ಇವು ಮೂರು ಗಾದೆಯ ಲಕ್ಷಣಗಳು. ಗಾದೆಗಳು ಅನೇಕರ ಅನುಭವದಿಂದ ಮೂಡಿ ಒಬ್ಬನ ಮಾತಿನಲ್ಲಿ ಮೈಮರೆತು ಮತ್ತೆ ಹಲವರಿಂದ ಸಂಸ್ಕಾರವನ್ನು ಪಡೆದು ಸಮಾಜದಲ್ಲಿ ಸೇರಿಹೋಗಿರುತ್ತದೆ. ಗಾದೆಗಳು ಒಬ್ಬರ ಸೃಷ್ಟಿಯೋ? ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವುದು ತೀರಾ ಕಷ್ಟದ ಕೆಲಸ, ಏಕೆಂದರೆ ಯಾವುದೇ ಹೇಳಿಕೆ ಎಷ್ಟು ಸುಂದರವಾಗಿರಲಿ ಅದು ಗಾದೆಯಾಗುವದು ಅದಕ್ಕೆ ಜನ ಸಮ್ಮತಿಯ ಮುದ್ರೆ ಬಿದ್ದಾಗಲೇ. ಜನ ಸಮ್ಮತಿ ಪಡೆಯದ, ಅಂದರೆ ಜನರ ಬಾಯಲ್ಲಿ ನಲಿಯುವ ಪುಣ್ಯ ಪಡೆಯದೆ ಹೋದ ಯಾವ ಬುದ್ಧಿವಂತಿಕೆಯ ಮಾತಿಗೂ ಗಾದೆಯ ಪಟ್ಟಸಿಗುವುದಿಲ್ಲ. ಹೀಗಾಗಿ ಗಾದೆಗಳು ಏಕಕಾಲಕ್ಕೆ ವ್ಯಕ್ತಿ ಸೃಷ್ಟಿಯೋ ಸಮುದಾಯ ಸೃಷ್ಟಿಯೋ ಆಗಿ ಚಲಾವಣೆಗೆ ಬರುತ್ತವೆ.

ಗಾದೆಗಳ ಜನಪ್ರಿಯತೆಗೆ ಅವುಗಳಲ್ಲಿನ ಅನುಭವ ಔಚಿತ್ಯ ಹಾಗೂ ಮೋನಚುಗಳೇ ಕಾರಣವಾಗುತ್ತವೆ. ಗಾದೆಗಳಲ್ಲಿ ಜನಸಾಮಾನ್ಯರ ನಗು, ಧರ್ಮ, ಭಕ್ತಿ, ಪ್ರೀತಿ, ಸತ್ಯಶೀಲ, ಕೋಪ, ತಾಪ, ಮತ್ಸರ, ನೀತಿ, ಆದರ್ಶ, ಬದುಕಿನ ಸುಖ, ಸಂಪತ್ತ, ಅರೆಕೊರೆಗಳು ಮುಂತಾದ ವೈವಿಧ್ಯ ತುಂಬಿಕೊಂಡಿರುತ್ತವೆ. ಒಂದರ್ಥದಲ್ಲಿ ಗಾದೆಗಳು ಒಂದು ಜನಾಂಗದ ಬದುಕಿನ ಪ್ರತಿಬಿಂಬವಾಗಿರುತ್ತವೆ.

"ಯಾರದೋ ದುಡ್ಡು ಯಲ್ಲಮನ ಜಾತ್ರೆ"

"ಮೊದಲು ಅಂಗಳ ಜಿಗಿದು ನಂತರ ಆಕಾಶಕ್ಕೆ ಜಿಗಿಯಪ್ಪ"

"ಕತ್ತೆಗೆ ಜ್ವರ ಬಂದ್ರೆ, ಎತ್ತಿಗೆ ಬರೆ ಎಳೆದ್ರಂತೆ"

"ಕೋಳಿನಾ ಕೇಳಿ ಸಾಂಬಾರು ಅರ್ದ್ರೆ"

"ತಾಮ್ರದ ರೊಕ್ಕ ತಾಯಿ ಮಕ್ಕಳನ್ನು ಅಗಲಿಸುತ್ತದೆ"

" ಮನೆತುಂಬ ಮಕ್ಕಳು ಮಾದಿಗರಿಗೆ ತಿಪ್ಲು"

"ಬೆಕ್ಕಿಗೆ ಚೆಲ್ಲಾಟ, ಇಲಿಗೆ ಪ್ರಾಣ ಸಂಕಟ"

"ನೇಕಾರರ ಹೆಂಡತಿ ಬೆತ್ತಲೆ"

" ಕಳ್ಳನ ಮನಸ್ಸು ಹುಳ್ಳುಹುಳ್ಳಗೆ"

"ಕುರುಡನಿಗ್ಯಾಕೆ ಕನ್ನಡಿ ತಂಟೆ"

"ನಾಯಿ ಬಡಿಯೋಕೆ ಬಣ್ಣದ ಕೋಲೇಕೆ?"

"ಮನೆಗೆ ಮಾರಿ ಊರಿಗೆ ಉಪಕಾರಿ"

"ಅಂಗೈಯಲ್ಲಿನ ಹುಣ್ಣಿಗೆ ಕನ್ನಡಿ ಏಕೆ"

" ಮಾರಿಗೆ ಕೋಣದ ಮೇಲೆ ಕಣ್ಣು"

"ಬಲ್ಲವನಿಗೆ ಗೊತ್ತು ಬೆಲ್ಲದ ರುಚಿ"

"ನೀರಿನ್ಯಾಗ ಮೀನಿನ ಹೆಜ್ಜೆ ಗುರುತು ಹಿಡಿಯಬಹುದು ಆದರೆ ಹೆಣ್ಣಿನ ಮರ್ಮ ಗುರುತು ಹಿಡಿಯರ್‍ಯಾರು"

"ಹಸಿದು ಹಣ್ಣು ತಿನ್ನು ಉಂಡು ಕಬ್ಬು ತಿನ್ನು"

"ಮಾಡಿದ್ದುಣ್ಣೋ ಮಾರಾಯ"

"ಸಲಿಗೆ ಕೊಟ್ಟ ನಾಯಿ ಗುಳಿಗೆ ಮೂಸಿ ನೋಡಿತು"

"ನೆರೆಮನೆ ತಿಮ್ಮ ಸಾಯಲಿ ಅಂದ್ರ ನಮ್ಮ ಮನೆ ತಮ್ಮ ಸತ್ತನಂತೆ"

"ಅಕ್ಕಿ ಮೇಲೆ ಆಸೆ ಬೀಗರ ಮ್ಯಾಲೆ ಪ್ರೀತಿ"

"ಕೂಡಿಬಾಳಿದರೆ ಸ್ವರ್ಗ ಸುಖ"

"ಅಯ್ಯ ಸತ್ತರೆ ಅಮವಾಸೆ ನಿಲ್ಲುವುದಿಲ್ಲ"

"ಹೊಟ್ಟೆಗೆ ಇಟ್ಟಿಲ್ಲದಿದ್ದರೂ ಜುಟ್ಟಿಗೆ ಮಲ್ಲಿಗೆ ಹೂವು"

"ಉಪ್ಪಿಗಿಂತ ರುಚಿಇಲ್ಲ ತಾಯಿಗಿಂತ ಬಂಧುವಿಲ್ಲ"

"ಹುಟ್ಟು ಗುಣ ಸುಟ್ರು ಹೋಗಲ್ಲ"

"ಮೂರು ವರ್ಷದ ಬುದ್ಧಿ ನೂರು ವರ್ಷದ ತನಲ"

"ಭೂಮಿ ಹಚ್ಚಾಗಾದ ನಂತರ ಒಡಿಯನ ಕಣ್ಣು ಕೆಂಪಗೆ"

"ಚಟ ಬಿಡು, ಚಟ ಬಿಡು, ಚಟಗೇಡಿ ಅಂದ್ರ, ಮಾಡ್ಕೊಂಡ ಹೆಂತ್ತಿ ಬಿಟ್ಟೇನೋ, ಚಟಬಿಡಲ್ಲಾ ಅಂದನಂತೆ"

"ಸಹವಾಸದಿಂದ ಸನ್ಯಾಸಿ ಕೆಟ್ಟ"

"ಕಾಗಿ ಕೈಯಲ್ಲಿ ಹಿರಿಯನ ಕೊಟ್ರೆ ಕಛೇರಿತುಂಬ ಹೊಲಸು ಮಾಡಿತು"

"ಊರಿಗ ಬಂದೊಳು ನೀಗೆ ಬರಬೇಕು"

"ಕೆಟ್ಟಮೇಲೆ ಬುದ್ದಿ ಬಂತು"

"ಅಟ್ಟ ಹತ್ತಿದ ಮ್ಯಾಲಾ ಏಣಿ ಒದೆಯುವದು"

"ಹೊಳೆ ದಾಟಿದ ಮೇಲೆ ಅಂಬಿಗನಿಗೆ ಮಿಂಡ"

"ಪಾಪ ಅಂತ ಪಾಲು ಹಾಕಿದರೆ ಪಚ್ಚಿ ಅಂತ ಒಗಿದರು"

"ಆಸತ್ತ ಬ್ಯಾಸತ್ತ ಅಕ್ಕನ ಮನೆಗೆ ಬಂದರೆ ಅಕ್ಕನ ಗಂಡ ಬಂದು ತೆಕ್ಕಿ ಬಡಿದಾನು"

"ತುಂಬಿದ ಕೊಡ ತುಳುಕುವುದಿಲ್ಲ"

"ಬೇಲಿ ಎದ್ದು ಹೊಲ ಮೇಯ್ದಂತೆ"

"ಕಾಗೆ ಕೋಗಿಲೆಗೆ ಹೇಳುತ್ತಿತ್ತು ನೀನು ಎಷ್ಟು ಕರ್‍ರಗೆ ಇದ್ದಿಯಲ್ಲ"

"ಮಂಗನ ಕೈಲಿ ಮಾಣಿಕ್ಯ ಕೊಟ್ಟಂಗೆ"

"ಹಾಸಿಗೆ ಇದ್ದಷ್ಟು ಕಾಲು ಚಾಚು"

"ಅಡಿಕೆಗೆ ಹೋದ ಮಾನ ಆನೆ ಕೊಟ್ಟರೂ ಬಾರದು"

"ಬಿದ್ದ ಕಲ್ಲು ಅಗಸನದು ಎದ್ದ ಕಲ್ಲು ಪೂಜಾರಿಯದು"

"ಅನ್ನ ಮಸರು ಉಂಡು ಶಾಲೆಗೆ ಹೋಗು ಅಂದ್ರ ರೊಟ್ಟಿ ತಿಂದು ಹಮಾಲಿ ಮಾಡುತ್ತಿನಿ ಅಂದನಂತೆ"

"ಪಾಪಿ ಚಿರಾಯಿ"

"ನಾಯಿ ಬಾಲ ಎಷ್ಟೋತ್ತದ್ದರು ಡೊಂಕೇ"

"ನೂಲಿನಂತೆ ಸೀರೆ ತಾಯಿಯಂತೆ ಮಗಳು"

"ಹಾಳಾದ ಊರಾಗ ಹನುಮಪ್ಪ ಚಂದ"

"ದನ ತಿನ್ನೋನಿಗೆ ಕೋಳಿ ಸಾರು ಯಾವ ಲೆಕ್ಕ"

"ಸೇರಿಗೆ ಸವ್ವಸೇರು"

"ರಾತ್ರಿಯಲ್ಲಾ ರಾಮಾಯಣ ಕೇಳಿ ಬೆಳಿಗ್ಗೆ ರಾಮ ಸೀತೆಗೆ ಏನಾಗಬೇಕೆಂದ್ರಂತೆ"

"ತಾಯಿ ಬಸ್ವಿ ಮಗಳೂ ಬಸ್ವಿ ರಾಗಿ ಬೀಸುವರ್‍ಯಾರು"

"ಆರು ಹಡದಾಕಿ ಮುಂದ ಮೂರು ಹಡದಾಕಿ ಹೇಳಿದ್ದು"

ಮಾದಿಗರ ಒಡಪುಗಳು

ಒಡಪು ಜನಪದ ಸಾಹಿತ್ಯ ಪ್ರಕಾರಗಳಲ್ಲಿ ಒಂದು. ಒಡಪನ್ನು ಕೆಲವಡೆ ಜೋಡೆಸರು, ಬೆಡಗು ಒಗಟು, ತೊಡಕು ಒಡಪು ಹಾಗು ಅರ್ಥ ಹಾಕುವುದು ಎನ್ನುತಾರೆ. ಒಡಪು ಎಂದರೆ ಒಂದರ್ಥದಲ್ಲಿ ಗಂಡನ ಹೆಸರು ಹೇಳುವುದು, ಒಮ್ಮೆಲ ಗಂಡನ ಹೆಸರಿನೊಂದಿಗೆ ಮಾವನ ಅತ್ತೆಯ ಅಷ್ಟೇ ಏಕೆ ನಾದಿನಿಯರ ಹೆಸರು ಹೇಳಿದೆ, ಹೇಳುವಾಗ ಚಮತ್ಕಾರವನ್ನು ನಾವು ಕಾಣುತ್ತೇವೆ. ನೇರವಾಗಿ ಗಂಡನ ಹೆಸರನ್ನು ಹೇಳದೆ, ಹೇಳುವಾಗ ಸ್ವಲ್ಪ ಬಿನ್ನಾಣವಾಗಿ ಮೈಯಾರವಾಗಿ ವೈಭವವಾಗಿ ಸುತ್ತಿ ಬಳಸಿ, ರಂಜಿಸಿ ವಿನೋದವಾಗಿ ಅದ್ಭುತವಾಗಿ ಹೇಳುವುದಕ್ಕೆ ಒಡಪು ಎಂದು ಹೆಸರು. ಇವು ಹೆಣ್ಣು ಮಕ್ಕಳ ಆಸಕ್ತಿಯ ಸಾಹಿತ್ಯ ಸೃಷ್ಟಿ ಕೂಡಾ. ಏಕೆಂದರೆ ನೆರೆದವರ ಮುಂದೆ ತನ್ನ ಗಂಡನ ಸ್ವಭಾವ, ಇಲ್ಲವೆ ಗಂಡನ ಬಗೆಗೆ ಮೆಚ್ಚಿಗೆ ಸೂಚಿಸುವ ಅಂದರೆ ತನ್ನ ಗಂಡನ ಕುರಿತು ತನ್ನಲ್ಲಿ ಹುದುಗಿಕೊಂಡ ಭಾವನೆಗಳಿಗೆ ತನ್ನದೇ ಆದ ಅಬಿವ್ಯಕ್ತ ಕೊಡಲು ಬಳಸುವ ಮಾತು ಎಂದೇ ಅರ್ಥ.

"ಹಳಸಿದ್ದು ಮುದ್ದೆ

ಉಳ್ಳಿಗ ತಿಂದು

ಉಳ್ಳಾಡುನೆ ಕರಿಯಪ್ಪ ಮಾವ"

"ಕೇರಿ ಕೇರಿ ತಿರುಗುತ್ತಾನೆ

ಕರೆದಲ್ಲಿಗೆ ಬರ್‍ತಾನೆ

ಹರಕ್ಹಣಗಿ ಸಾಹುಕಾರ ರಾಮಣ್ಣಮಾವ"

"ಮುಚ್ಚಾಳ ತುಂಬ ಬಾನ ಉಂಡು

ಹಚ್ಚಡ ಹಾಸಿ

ಬೆಚ್ಚಗೆ ಮಲಗಿಕೊಳ್ತಾನೆ ದ್ಯಾಮಪ್ಪಮಾವ"

"ನಮ್ಮವರೆಂದರೆ
ಸೇರಿಗ ಸವಾಸೇರು
ಕಟ್ಟಾರ ಕರೀಸರ
ಕರೆದರೆ ಅವಸರ
ಸವಾರೆಪ್ಪ ಮಾವ"
"ಕಟಗಲು ರೊಟ್ಟಿ
ಖಾರದ ಚಟ್ನಿ
ಕಟಗೊಂಡು ಹೋಗಂದ್ರ
ಸೆಟಗೊಂಡು ಹೋಗ್ತಾನೆ
ಬಾಲಪ್ಪ ಗೌಡ"
"ಕಂಕಣ ಕಾಲುಂಗುರ
ಕರಿಯಾಕ ಬಂದ್ರೆ ಬರಂಗಿಲ್ಲ
ಬಾರ್ಕೋಲು ತಗೋಡ್ರೆ ನಿಲ್ಲಲ್ಲಿ ದುರುಗಿ"
"ಅಕ್ಕಿ ಬಾನ ಸೆಳೆಪಲ್ಲೆ
ಅಕ್ಕರೆಯಿಂದ ಕಲಿಸಿಕೊಡ್ತಾಳೆ
ಹನುಮಿ"

* * *

ಅಧ್ಯಾಯ : 7

ಬದಲಾಗುತ್ತಿರುವ ಜಗತ್ತಿನಲ್ಲಿ ಮಾದಿಗ ಸಮುದಾಯದವರ ಪಾತ್ರ

ಭಾರತೀಯ ಸಮಾಜವು ಸಂಪ್ರದಾಯದ ಸಮಾಜವಾಗಿರುವುದರಿಂದ ಇಲ್ಲಿ ಜಾತಿ ವರ್ಣಗಳಿಗೆ ಪ್ರಾಧಾನ್ಯತೆಗೆ ಹೆಚ್ಚು ಮಹತ್ವ ನೀಡಿದೆ. ಅದರಲ್ಲಿ ದಲಿತರನ್ನು ದ್ವಿತೀಯ ದರ್ಜೆಯ ಪ್ರಜೆಗಳೆಂದು ಪರಿಗಣಿಸುವುದರ ಜೊತೆಗೆ ದಲಿತರನ್ನು ಶೋಷಣೆಗೆ ಒಳಪಡಿಸಿದೆ. ಇನ್ನು ಸಮಾಜ ಸುಧಾರಣೆಗಳ ಗಾಳಿಯಂತು ಮುಟ್ಟಿದರೆ ಮೈಲಿಗೆಯಾದಿತೆಂಬ ಭಯದಿಂದ ಮಾರು ದೂರವೇ ಉಳಿದಿದೆ. ದಿನೇ ದಿನೇ ಸಂಕೀರ್ಣಗೊಳ್ಳುತ್ತಿರುವ ಆರ್ಥಿಕ ರಾಜಕೀಯ ಬಿಕ್ಕಟ್ಟುಗಳಿಂದಾಗಿ ಕೈಗಾರೀಕರಣ, ನಗರೀಕರಣ ಮತ್ತು ಸಂಸ್ಕೃತೀಕರಣಗಳು ಸೃಷ್ಟಿಸುತ್ತಿರುವ ಭೀಕರ ಸಮಸ್ಯೆಗಳಿಂದಾಗಿ ಸಂವಿಧಾನ ಬದ್ಧ ಸಾಮಾಜಿಕ ಬದಲಾವಣೆಯ ಪರಿಕಲ್ಪನೆಯೇ ಮೂಲೆಗೆ ಸರಿದು ಈ ಸ್ಥಾನವನ್ನು ಕೈಗಾರಿಕಾ ಅಭಿವೃದ್ಧಿ, ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಮಹಿಳಾ ವಿಮೋಚನೆ ಪರಿಸರ ಸಮತೋಲನ ಮುಂತಾದ ನವನಗರ ಸಂವೇದನೆಗಳು ಆಕ್ರಮಿಸಿಕೊಳ್ಳತೊಡಗಿವೆ. ತಮ್ಮ ಸಂಸ್ಕೃತಿ ಪರಂಪರೆಯ ಸೌಂದರ್ಯ ಸತ್ವವನ್ನು ಮನಗಾಣದೆ ಬದುಕುತ್ತಿರುವ ಈ ಸಮಯದಲ್ಲಿ ಕೊಂಚಮಟ್ಟಿಗೆ ಆತ್ಮಸ್ಥೈರ್ಯ ತಂದು ಕೊಡುವ ದಿಕ್ಕಿನಲ್ಲಿ ಸಾಗುತ್ತದೆ. ಸಾಮಾಜಿಕವಾಗಿ ಮಾದಿಗ ಸಮುದಾಯದವರಂತು ಇತರೇ ಸಮುದಾಯಗಳಂತೆ ಬದುಕಲು ಪ್ರಯತ್ನಿಸುತ್ತಿದ್ದಾರೆ.

ಮಾದಿಗ ಸಮುದಾಯದವರು ತಮ್ಮ ಹಳೆಯ ಪರಂಪರೆಯಿಂದ ಸಾಂಪ್ರದಾಯಿಕವಾಗಿ ಬೆಳೆದುಕೊಂಡು ಬಂದಿದ್ದರೂ ಸಹ ಜಾಗತಿಕ ಸಂದರ್ಭದಲ್ಲಿ ಅನಿವಾರ್ಯವಾಗಿ ಬದಲಾಗಬೇಕಾಗುತ್ತದೆ. ಹಿಂದೆ ಈ ಸಮುದಾಯವೇ ಇತರೆ ಸಮುದಾಯಗಳಿಂದ ದೂರ ಉಳಿದು ಅವರ ಹೇಳಿಕೇಳಿ ನಡೆಯಬೇಕಾಗಿತ್ತು. ಆದರೆ ಇಂದು ಬದಲಾಗಿದೆ. ಕಾಲಬದಲಾದಂತೆಲ್ಲ ತಮ್ಮ ಜೀವನ ವಿಧಾನದಲ್ಲಿ ಊಟ, ಉಪಚಾರ, ಆಹಾರ ಪದ್ಧತಿ, ಶೈಕ್ಷಣಿಕ ಹಾಗೂ ಧಾರ್ಮಿಕವಾಗಿ, ರಾಜಕೀಯವಾಗಿ ಬದಲಾಗಲೇಬೇಕಾದ ಸಂದರ್ಭ ಇದೆ. ಹಿಂದೆ ಅಲೆಮಾರಿಗಳಾಗಿದ್ದವರು ಇಂದು ತಮ್ಮ ಶಾಶ್ವತ ನೆಲೆಯನ್ನು

ಒಂದೇ ಪ್ರದೇಶದಲ್ಲಿ ಕಂಡುಕೊಂಡಿದ್ದಾರೆ. ಕೊಪ್ಪಳ ನಗರದಲ್ಲಿ ಈ ಸಮುದಾಯವು ಸಹ ಇತರೇ ಹಳ್ಳಿಗಳಿಗೆ ಹೋಲಿಕೆ ಮಾಡಿಕೊಂಡರೆ ಸಂಪೂರ್ಣವಾಗಿ ಬದಲಾಗದಿದ್ದರೂ ಸಹ ಅಲ್ಪ ಪ್ರಮಾಣದಲ್ಲಿ ಬದಲಾವಣೆಗಳನ್ನು ಕಂಡಿದೆ. ಸುಮಾರು ೧೮೦೦-೨೦೦೦ ಜನಸಂಖ್ಯೆಯನ್ನು ಹೊಂದಿರುವ ಈ ಪ್ರದೇಶದಲ್ಲಿ ೮೦೦ಮನೆಗಳಿವೆ. ಇಷ್ಟು ಜನಸಂಖ್ಯೆಯನ್ನು ಹೊಂದಿದ್ದರೂ ಸಹ ಈ ಸಮುದಾಯದವರು ಆರ್ಥಿಕ ಸಂಕಷ್ಟದ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆ. ಮುಖ್ಯವಾಗಿ ಈ ಪ್ರದೇಶದ ಜನರು ದಿನಗೂಲಿ, ಅರೆದಿನಗೂಲಿ ನೌಕರರಾಗಿ ನಗರಸಭೆ ಕಾರ್ಯಾಲಯದಲ್ಲಿ ಕೆಲಸ ಮಾಡುತ್ತಿದ್ದಾರೆ. ಅದರ ಜೊತೆಗೆ ತಮ್ಮ ತಮ್ಮ ಹಳೆಯ ವೃತ್ತಿಗಳಾದ ಚಪ್ಪಲಿ ಹೊಲಿಯುವುದು, ಚರ್ಮಹದ ಮಾಡುವುದು, ಸಣ್ಣ ಪುಟ್ಟ ಅಂಗಡಿಗಳನ್ನು ಹಾಕಿ ವ್ಯಾಪಾರ ಮಾಡುವುದು, ಕಟ್ಟಡ ಕಾರ್ಮಿಕರಾಗಿ ಕೆಲಸ ಮಾಡುವುದು ಹಾಗೂ ಹಮಾಲಿಯಂತ ಕೆಲಸಗಳನ್ನು ಈ ಜನಾಂಗದವರು ಪ್ರಮುಖವಾಗಿ ಮಾಡುತ್ತಿದ್ದಾರೆ. ಮಾಂಸಾಹಾರವು ಈ ಸಮುದಾಯದವರ ಪ್ರಮುಖ ಆಹಾರ ಆಗಿದೆ. ಕುಲ ದೇವತೆಗಳ ಆರಾಧನೆಯಲ್ಲಿ ಕೋಣವನ್ನು ಬಲಿಕೊಡುವುದು ಕಡ್ಡಾಯವಾಗಿದ್ದರಿಂದ ಮತ್ತು ಮಾದಿಗರು ಬಲಿ ನಿರ್ವಾಹಕರಾಗಿದ್ದರಿಂದ ಅವರಿಗೆ ಬಲಿಕೋಣದ ಪ್ರಧಾನ ಪಾಲು ಸಂಧಾಯವಾಗುತ್ತದೆ. ಸತ್ತ ದನದ ಮಾಂಸವು ಇವರ ಮುಖ್ಯ ಆಹಾರವಾಗಿದೆ. ಇಂದಿಗೂ ಕೂಡ ಇದು ಹೆಚ್ಚು ಪ್ರಚಲಿತವಿದೆ. ಹೀಗೆ ಯತೇಚ್ಛವಾಗಿ ದೊರೆಯುತ್ತಿದ್ದ ದನದ ಮಾಂಸದ ರುಚಿಗೆ ಒಗ್ಗಿಹೋಗಿದ್ದಾರೆ. ಬ್ರಾಹ್ಮಣರಾದಿಯಾಗಿ ಸಮಾಜದ ಉಳಿದ ಜನರು ಗೋಮಾಂಸದ ಭಕ್ಷಣೆಯನ್ನು ತೊರೆದರು. ಮಾದಿಗ ಜನಾಂಗವು ಸೇರಿದಂತೆ ಅನೇಕ ದಲಿತ ಸಮಾಜದವರು ಇದನ್ನು ಬಿಡದೆ ಉಳಿಸಿಕೊಂಡರು. ಈ ಗೋಮಾಂಸ ಭಕ್ಷಣೆ ಈ ಸಮುದಾಯವನ್ನು ಸಾಮಾಜಿಕವಾಗಿ ಕೀಳಾಗಿ ಕಾಣಲು ಒಂದು ಪ್ರಮುಖ ಅಸ್ತ್ರವಾಗಿದೆ.

ಹಿಂದೆ ಕೇರಿಗೆ ಕಾಲಿಟ್ಟರೆ ಮನೆಮನೆಯಲ್ಲೂ ಹೆಚ್ಚಾಗಿ ಮಾಂಸವನ್ನು ಬೇಯಿಸುವುದು ಸಾಮಾನ್ಯವಾದ ದೃಶ್ಯವಾಗಿತ್ತು. ಒಲೆಯ ಮೇಲ್ಭಾಗದಲ್ಲಿ ಅದಕ್ಕೆಂದೆ ಕಟ್ಟಿರುವ ಹಗ್ಗದ ಮೇಲೆ ತೋರಣದಂತೆ ಮಾಂಸವನ್ನು ತೂಗುಹಾಕುತ್ತಿದ್ದರು. ಈ ತೋರಣಗಳು ಮನೆಗೆ ಬರುವವರನ್ನು ಸ್ವಾಗತಿಸುತ್ತಿದ್ದ ದೃಶ್ಯವು ಸಾಮಾನ್ಯವಾಗಿದೆ. ಆದರೆ ಇಂದು ಈ ಸಮುದಾಯದ ಯುವ ಪೀಳಿಗೆ ಅಕ್ಷರ ಕಲಿತು ಹೊರ ಜಗತ್ತಿನ ಜೊತೆಗೆ ತಮ್ಮನ್ನು ಹೋಲಿಸಿಕೊಂಡು ಈ ಹಳೆಯ ಪದ್ಧತಿಗಳನ್ನು ಬಹುತೇಕವಾಗಿ ಕೈಬಿಟ್ಟಿದ್ದಾರೆ. ಇಂದಿನ ಕಾಲದಲ್ಲಿ ಕಸಬುಗಳನ್ನು ಕೈಬಿಟ್ಟಿರುವ ಕಾರಣ, ಸಿಗುತ್ತಿದ್ದ ಬಹುಪಾಲು ದನಗಳು ಈಗ ಅಪರೂಪ. ಹೀಗಾಗಿ ಕೇರಿಯ ಎಲ್ಲರೂ ತಲಾ ಇಂತಿಷ್ಟು ದುಡ್ಡನ್ನು ಹಾಕಿಕೊಂಡು ದನವನ್ನು ತಂದು ಕೊಯ್ದುಮೇಲೆ ಪ್ರತಿಯೊಬ್ಬರೂ ಹಂಚಿಕೊಳ್ಳುತ್ತಾರೆ. ಪ್ರಸ್ತುತ ದಿನಗಳಲ್ಲಿ ಅದೇ ಒಂದು ರೀತಿಯ ಸಾರ್ವಜನಿಕ ಮುಜುಗರದ ದೃಶ್ಯವಾಗಿರುವುದರಿಂದ ಇದನ್ನೂ ಸಹ ಕೈಬಿಟ್ಟಿದ್ದಾರೆ.

ಒಂದು ಕಾಲದಲ್ಲಿ ಅಲೆಮಾರಿಗಳೆಂದೇ ಹೆಸರು ಪಡೆದಿರುವ (ಕೊಪ್ಪಳ ನಗರದಲ್ಲಿ ವಾಸಿಸುವ ಬಹುತೇಕ ಮಾದಿಗರು ಬೇರೆಡೆಯಿಂದ ವಲಸೆ ಬಂದವರಾಗಿದ್ದಾರೆ.) ಈ ಸಮುದಾಯ ಇಂದು ಶಾಶ್ವತ ನೆಲೆಯನ್ನು ಕಂಡುಕೊಂಡು ಒಂದು ಪ್ರದೇಶದಲ್ಲಿ ವಾಸಮಾಡುತ್ತಿದ್ದಾರೆ. ಹಿಂದಿನ ಕಾಲದಲ್ಲಿ ಈ ಸಮುದಾಯದವರು ಮಣ್ಣಿನ ಮಡಿಕೆ, ಕೊಡ ಹಾಗೂ ಗಡಿಗೆಗಳನ್ನು ಬಳಸುತ್ತಿದ್ದರು. ಆದರೆ ಇಂದು ತಂತ್ರಜ್ಞಾನದ ಪ್ರಭಾವದಿಂದಾಗಿ ಹಾಗೂ ಮುಖ್ಯವಾಗಿ ಕಾಲ ಬದಲಾದಂತೆಲ್ಲ ತಮ್ಮ ಸಲಕರಣೆಗಳನ್ನು ಬದಲಾಯಿಸಿಕೊಂಡಿದ್ದಾರೆ. ಸ್ಟೀಲ್, ಪ್ಲಾಸ್ಟಿಕ್, ಅಲ್ಯುಮಿನಿಯಂನಿಂದ ತಯಾರಿಸಿದ ಪಾತ್ರೆಗಳನ್ನು ಬಳಕೆಮಾಡುತ್ತಿದ್ದಾರೆ. ಹಿಂದೆ ನೀರನ್ನು ತರಲು ಮಣ್ಣಿನ ಮಡಿಕೆಗಳನ್ನು ಬಳಸುತ್ತಿದ್ದರು. ಆದರೆ ಇಂದು ಪ್ಲಾಸ್ಟಿಕ್ ಕೊಡಗಳ ಬಳಕೆ ಹೆಚ್ಚಾಗಿವೆ. ಅದೇ ರೀತಿ ಹಿಟ್ಟಿನ ಗಿರಣಿಗಳು, ಮಿಕ್ಸರ್, ಕುಕ್ಕರ್, ಫ್ರಿಜ್ ಇನ್ನಿತರ ಆಧುನಿಕ ಸಾಮಾಗ್ರಿಗಳನ್ನು ಕಾಲ ಬದಲಾದಂತೆಲ್ಲಾ ಇವರೂ ಕೂಡಾ ಅನಿವಾರ್ಯವಾಗಿ ಬಳಸುತ್ತಿದ್ದಾರೆ. ಹಿಂದೆ ಮನೆಗಳು ಸಂಪೂರ್ಣವಾಗಿ ಗುಡಿಸಲು ಇದ್ದ ದೃಶ್ಯ ಈ ಜನಾಂಗದ ಕೇರಿಯಲ್ಲಿ ಕಂಡುಬರುವುದು ಸಾಮಾನ್ಯವಾಗಿತ್ತು. ಆದರೆ ಇಂದು ಮನೆಗಳ ರಚನೆಯಲ್ಲಿ ಬದಲಾವಣೆ ಕಂಡಿದ್ದು ಆರ್.ಸಿ.ಸಿ ಬಿಲ್ಡಿಂಗ್, ಮಾಳಿಗೆ ಮನೆಗಳು, ಹಂಚಿನ ಮನೆಗಳು ಮತ್ತು ಸರ್ಕಾರದ ವತಿಯಿಂದ ಮಂಜೂರಾದ ಆಶ್ರಯ ಮನೆಗಳನ್ನು ಕಟ್ಟಿಸಿಕೊಂಡಿದ್ದಾರೆ. ಉಡುಪು ಮತ್ತು ಆಭರಣಗಳಲ್ಲಿ ಕೂಡ ಸಂಪೂರ್ಣವಾಗಿ ಬದಲಾಗಿದೆ. ಸಾಂಪ್ರದಾಯ ಆಚರಣೆಗಳನ್ನು ಹಿಂದಿನ ಕಾಲದಲ್ಲಿ ಎರಡು ಮೂರು ದಿನಗಳವರೆಗೆ ಮಾಡುತ್ತಿದ್ದರು. ಆದರೆ ಇಂದು ಯಾವುದಾದರೂ ಕಾರ್ಯಗಳಿದ್ದರೆ ಅದನ್ನು ಒಂದೇ ದಿನದಲ್ಲಿ ಮಾಡಿಮುಗಿಸುವ ಪರಿಪಾಠವಿದೆ.

ಮದುವೆ ಮುಂಜಿಯಂತಹ ಸಂದರ್ಭದಲ್ಲಿ ಹಿಂದೆ ಮಾವಿನ ತೋರಣ, ತೆಂಗಿನ ಗರಿಗಳನ್ನು ತಂದು ಚಪ್ಪರವನ್ನು ಹಾಕುತ್ತಿದ್ದರು. ಆದರೆ ಇಂದು ಆ ಸ್ಥಾನವನ್ನು ಶಾಮಿಯಾನ್, ರೇಡಿಯೋನಂತ ಆಧುನಿಕ ಸಾಮಾಗ್ರಿಗಳನ್ನು ಬಳಸಿಕೊಂಡು ವಿಜೃಂಬಣೆಯಿಂದ ಆಚರಣೆಮಾಡುತ್ತಾರೆ. ಹಿಂದಿನವರಿಗಿಂತ ಈಗಿನ ಯುವಪೀಳಿಗೆಯನ್ನು ಹೆಚ್ಚಾಗಿ ಪ್ರಸ್ತುತ ಜಗತ್ತು ಆಕರ್ಷಿಸುತ್ತಿದೆ. ಒಂದು ಕಡೆ ಸ್ವಾಭಿಮಾನ ಹೋರಾಟಗಳ ಪ್ರತ್ಯಕ್ಷ ಹಾಗೂ ಪರೋಕ್ಷ ಹೋರಾಟಗಳಿಂದ ಗತ ಸಂಸ್ಕೃತಿಯ ಬಗ್ಗೆ ಸಹಜವಾಗಿ ಏರ್ಪಟ್ಟಿರುವ ಅಸೀಮ ಅಸಡ್ಡೆ, ಮತ್ತೊಂದು ಕಡೆ ಘನತೆಯ ಬದುಕಿನ ಪರ್ಯಾಯಗಳಿಲ್ಲದೇ ಬಹುಶಃ ಇವೆರಡರ ನಡುವಿನ ಗೊಂದಲಮಯದಲ್ಲಿದ್ದಾರೆ. ಹೀಗೆ ಯುವಪೀಳಿಗೆ ಸಂಪೂರ್ಣ ದಿಕ್ಕೆಟ್ಟಿದೆ. ಹಿಂದಿನವರಿಗಿದ್ದ ಸಾಂಸ್ಕೃತಿಕ ಎಚ್ಚರದ ಕನಿಷ್ಟ ಅಂಶವೂ ಇವರ ಪ್ರಜ್ಞೆಯ ಭಾಗವಾಗಿ ಉಳಿದಿಲ್ಲ.

ಹಿಂದಿನ ಕಾಲದಲ್ಲಿ ಧಾರ್ಮಿಕ ಕೇಂದ್ರಗಳು ಕೇವಲ ಮೇಲ್ವರ್ಗದವರಿಗೆ ಮಾತ್ರ ಸೀಮಿತವಾಗಿದ್ದವು. ಅಂತಹ ಧಾರ್ಮಿಕ ಕೇಂದ್ರಗಳಲ್ಲಿ ದಲಿತರ ಪ್ರವೇಶ ಇರುತ್ತಿರಲಿಲ್ಲ. ಆದರೆ ಇಂದು ಕಾಲಬದಲಾದಂತೆಲ್ಲಾ ಹಳೆಯ ಪದ್ಧತಿಗಳು ನಸಿಸುತ್ತಾ ಹೋಗುತ್ತಿವೆ. ದೇವಸ್ಥಾನದಲ್ಲಿ ಕನಿಷ್ಟ ದೇವರ ದರ್ಶನವನ್ನಾದರೂ ಈ ಜನಾಂಗವು ಪಡೆಯಲು ಅವಕಾಶ ಕಲ್ಪಿಸಿಕೊಡಲಾಗಿದೆ.

ಸಾಮಾಜಿಕ ಜನಜೀವನ ಬದಲಾವಣೆಯ ಜೊತೆ ಜೊತೆಗೆ ನೂರಾರು ವರ್ಷಗಳಿಂದ ರೂಢಿಸಿಕೊಂಡು ಬಂದಿರುವಂತಹ ಸಂಪ್ರದಾಯ, ನಂಬಿಕೆ, ಜನಪದ ಕತೆಗಳು ಮುಂದುವರಿಕೆಯ ಒಂದು ಭಾಗವಾಗಿ ನಡೆಯುತ್ತವೆ. ಒಟ್ಟಿನಲ್ಲಿ ಇಂದು ಆಧುನಿಕತೆಯ ಗಾಳಿ ಎಲ್ಲ ಸಮುದಾಯಗಳ ಮೇಲೆ ತನ್ನ ಪ್ರಭಾವವನ್ನು ಬೀರುತ್ತದೆ. ತೀವ್ರಗತಿಯಲ್ಲಿ ಬದಲಾಗುತ್ತಿರುವ ಈ ಸಂದರ್ಭದಲ್ಲಿ ಕೊಪ್ಪಳದ ಮಾದಿಗ ಸಮುದಾಯವು ಕೂಡ ಬದಲಾವಣೆಗೆ ಒಳಗಾಗುತ್ತಿದ್ದಾರೆ. ಆದರೆ ಈ ಸಮುದಾಯದವರಿಗೆ ಸಿಗಬೇಕಾದ ನಾಗರೀಕ ಸೌಲಭ್ಯಗಳು ಮಾತ್ರ ನ್ಯಾಯಯುತವಾಗಿ ಇನ್ನು ಸಿಗುತ್ತಿಲ್ಲ.

* * *

ಅಧ್ಯಾಯ : 8

ಉಪಸಂಹಾರ

ಭಾರತ ದೇಶವು ವೈವಿಧ್ಯತೆಯಲ್ಲಿ ಏಕತೆಯನ್ನು ಸಾಧಿಸಿರುವಂತ ರಾಷ್ಟ್ರ. ಈ ಸಮಾಜದಲ್ಲಿ ಪ್ರತಿಯೊಂದು ಸಮುದಾಯಗಳು ತಮ್ಮದೇ ಆದ ಪಾತ್ರವನ್ನು ನಿರ್ವಹಿಸುತ್ತವೆ. ಮತ್ತು ತಮ್ಮದೇ ಆದ ವೃತ್ತಿಪರ ಕೆಲಸದಿಂದ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಿಕೊಂಡು ಸ್ವಾಯತ್ತತೆ ಪಡೆದ ಸಮುದಾಯಗಳಾಗಿವೆ. ಮೂಲತಃ ಏಣಿ-ಶ್ರೇಣಿ ವ್ಯವಸ್ಥೆಯಿಂದ ಕೂಡಿರುವ ಸಮಾಜದಲ್ಲಿ ಪ್ರತಿಯೊಂದು ಜಾತಿವಾರು ಸಮುದಾಯದವರು ತಾವು ಮಾಡುವ ವೃತ್ತಿಪರ ಕೆಲಸಗಳಿಂದ ಶ್ರೇಷ್ಠ, ಮಧ್ಯಮ ಹಾಗೂ ಕನಿಷ್ಠ ಎಂದು ವಿಂಗಡಿಸಿರುವುದನ್ನು ಕಾಣಬಹುದು. ಹೀಗಾಗಿ ಅವರ ವೃತ್ತಿಬದುಕಿನ ಅನುಸಾರವಾಗಿ ಸ್ಥಾನ ಮಾನ, ಮಡಿ ಮೈಲಿಗೆ, ಜಾತಿ ಪದ್ಧತಿ, ಸ್ಪೃಶ್ಯ ಅಸ್ಪೃಶ್ಯದಂತ ಅನಿಷ್ಟ ಪದ್ಧತಿಗಳು ಆಚರಣೆ ರೂಢಿಯಾಗಿ ಬಂದವು. ಇದರಿಂದಾಗಿ ಶ್ರೇಷ್ಠ ಮತ್ತು ಕನಿಷ್ಠ ಎಂದು ಗುರುತಿಸಲ್ಪಟ್ಟು ಸಮಾಜದಲ್ಲಿ ಜಾತಿ ಜಾತಿಗಳ ಮಧ್ಯೆ ಹಾಗೂ ವ್ಯಕ್ತಿ ವ್ಯಕ್ತಿಗಳ ನಡುವೆ ಕಂದಕ ಏರ್ಪಟ್ಟಿತು. ಪರಿಣಾಮವಾಗಿ ಪ್ರಬಲವರ್ಗಗಳು ತಳಸಮುದಾಯಗಳನ್ನು ಶೋಷಣೆ ಮಾಢುವುದು ಮತ್ತುಷ್ಟು ಹೆಚ್ಚಾಯಿತು. ಪ್ರಬಲ ವರ್ಗಗಳ ತುಳಿತಕ್ಕೆ ಸಿಕ್ಕ ದಲಿತ ಸಮುದಾಯಗಳಲ್ಲಿ 'ಮಾದಿಗ' ಸಮುದಾಯವು ಒಂದು, ಈ ರೀತಿಯ ಸಮಸ್ಯೆಗಳು ಕೇವಲ ಆರ್ಥಿಕ, ರಾಜಕೀಯ, ಸಾಮಾಜಿಕವಾಗಿರದೆ ಸಾಂಸ್ಕೃತಿಕವಾಗಿಯೂ ಸಮಾನ ಸ್ಥಾನಮಾನಗಳಿಲ್ಲದೆ ಶೋಷಣೆಗೆ ಒಳಗಾಗುತ್ತಿರುವದನ್ನು ಕಾಣಬಹುದು.

ಹೈದರಾಬಾದ-ಕರ್ನಾಟಕದ ಹಿಂದುಗಳಿದ ಜಿಲ್ಲೆಯಾದ ಕೊಪ್ಪಳ ಜಿಲ್ಲೆಯ ಮಾದಿಗ ಸಮುದಾಯದ ಜೀವನ ಕ್ರಮವು ಈ ಮೇಲಿನದಕ್ಕೆ ಹೊರತಾಗಿಲ್ಲ ಈ ಪ್ರದೇಶದ ಮಾದಿಗ ಸಮುದಾಯವು ಜೀವನೋಪಾಯಕ್ಕಾಗಿ ಸತ್ತ ಪ್ರಾಣಿಗಳನ್ನು ತಂದು ಊರಾಚೆ ಹಾಕಿ ಅದರ ಚರ್ಮವನ್ನು ಬೇರೆಪಡಿಸಿ ಮಾಂಸವನ್ನು ತಿನ್ನುತ್ತಿದ್ದರು. ಆ ಚರ್ಮವನ್ನು ಹದಮಾಡಿ ಚಪ್ಪಲಿ ಹೊಲಿಯುವುದು ಹಾಗೂ ಕೃಷಿಗೆ ಬೇಕಾದಂತ ಬಾಣಿ, ಮಿಣಿ, ಜತ್ತಿಗೆ, ಬಾರಕೋಲು ಇನ್ನಿತರ ಸಲಕರಣೆಗಳನ್ನು ತಯಾರಿಸಿ ರೈತರಿಗೆ

ಕೊಡುತ್ತಿದ್ದರು. ಅವರಿಂದ ಮತ್ತು ಅವರ ಮನೆಯಲ್ಲಿ ಮನೆಮಾದಿಗರಾಗಿ ಕೆಲಸ ಮಾಡುತ್ತಿದ್ದರು. ತಮ್ಮ ಉಪಜೀವನಕ್ಕಾಗಿ ರೈತರು ಮನೆಯಲ್ಲಿ ದವಸಧಾನ್ಯಗಳು ಮತ್ತು ಇತರೇ ಕಾಳು ಕಡಿಯನ್ನು ತೆಗೆದುಕೊಳ್ಳುತ್ತಿದ್ದರು.

ಕೊಪ್ಪಳ ಪಟ್ಟಣದ ಮಾದಿಗರಿಗೆ ಕೃಷಿ ಅಥವಾ ಒಕ್ಕಲುತನ ಮಾಡಲು ಭೂಮಿ ಇಲ್ಲದ ಕಾರಣ ಹಿಂದಿನಿಂದಲೂ ಇವರು ರೈತರ ಮನೆಯಲ್ಲಿ ದುಡಿದು ಬದುಕನ್ನು ಸಾಗಿಸುತ್ತಿದ್ದದು ತಿಳಿದು ಬರುತ್ತದೆ. ಅಕ್ಷರಜ್ಞಾನದ ಪರಿಚಯವೇ ಇಲ್ಲದ ಈ ಸಮುದಾಯಗಳಿಗೆ ಭಾರತಕ್ಕೆ ಬ್ರಿಟೀಷರು ಬಂದು ತರುವಾಯ ಇವರಿಗೆ ಅಕ್ಷರ ಕಲಿಯುವ ಅವಕಾಶಗಳು ಒದಗಿ ಬಂದವು. ಆದರೆ ನಮ್ಮದು ಬಹಳಷ್ಟು ಸಂಪ್ರದಾಯಸ್ಥ ಸಮಾಜವಾದ್ದರಿಂದ ಪಟ್ಟಭದ್ರ ಹಿತಾಶಕ್ತಿಗಳು ಅಕ್ಷರಜ್ಞಾನವನ್ನು ಬ್ರಾಹ್ಮಣಶಾಹಿಗೆ ಮೀಸಲಾಗಿರಿಸಿಕೊಂಡು ತಳ ಸಮುದಾಯಗಳಿಗೆ ಶಿಕ್ಷಣ ದೊರೆಯದಂತೆ ವ್ಯವಸ್ಥಿತವಾಗಿ ಹತ್ತಿಕ್ಕಿದರು.

ಸ್ವಾತಂತ್ರದ ನಂತರ ಸಂವಿಧಾನ ರಚನೆಯಾದ ಬಳಿಕ ತಳ ಸಮುದಾಯಗಳಿಗೆ ಶೈಕ್ಷಣಿಕ ಮೀಸಲಾತಿಯನ್ನು ಒದಗಿಸಿ ಸಮಾಜದಲ್ಲಿ ಮುಂದುವರೆದ ವರ್ಗಗಳೊಂದಿಗೆ ಶೈಕ್ಷಣಿಕವಾಗಿ ಗುರುತಿಸಿಕೊಳ್ಳಲು ಈ ಸಮುದಾಯ ಯಶಸ್ವಿಯಾಯಿತು. ಇಂದು ಶಿಕ್ಷಣ ಕಲಿತು ಈ ಸಮುದಾಯದವರು ತುಸು ಜಾಗೃತಿಯಾಗುತ್ತಿದ್ದಾರೆ. ತಮ್ಮ ವಂಶಪಾರಂಪರ್ಯವಾಗಿ ರೂಢಿಸಿಕೊಂಡು ಬಂದ ವೃತ್ತಿಯನ್ನು ಕೈಬಿಟ್ಟಿದ್ದಾರೆ. ಏಕೆಂದರೆ ಸಮಾಜದಲ್ಲಿ ಈ ಸಮುದಾಯವನ್ನು ನೋಡುವ ದೃಷ್ಟಿಕೋನ ಬೇರೆಯಾಗಿತ್ತು. ಇಂತಹ ಪರಿಸ್ಥಿತಿಯಲ್ಲಿ ತಮಗೆ ಮುಜುಗರವೆನಿಸುವ ವೃತ್ತಿಯನ್ನು ತ್ಯಜಿಸಿ ಸಮಾಜದಲ್ಲಿ ಇತರೇ ಸಮುದಾಯದಂತೆ ಬದುಕಲು ಮುಂದಾಗಿದ್ದಾರೆ. ಹಳೆಯ ಸಾಂಪ್ರದಾಯ ವೃತ್ತಿಗಳಿಂದ ತಯಾರುಮಾಡಿರುವ ಸರಕುಗಳಿಗೆ ಜಾಗತಿಕ ಮಾರುಕಟ್ಟೆಯಲ್ಲಿ ಬೆಲೆ ಇಲ್ಲದಂತಾಗಿದೆ. ಯಾಕೆಂದರೆ ಇಂದು ಆಧುನಿಕ ತಂತ್ರಜ್ಞಾನದಿಂದ ದೊಡ್ಡ ದೊಡ್ಡ ಕಂಪನಿಗಳು ತಲೆಎತ್ತಿವೆ. ಅಲ್ಲದೇ ಈ ಕಂಪನಿಗಳು ಬಹುಮುಖ್ಯವಾಗಿ ಇಂದಿನ ಯುವಪೀಳಿಗೆಯು ಬಯಸುತ್ತಿರುವ ಸರಕುಗಳನ್ನು ತಯಾರುಮಾಡುತ್ತಿರುವುದರಿಂದ ಎಲ್ಲರ ಮನಸ್ಸನ್ನು ತಮ್ಮ ಕಡೆ ಸೆಳೆದುಕೊಂಡಿವೆ.

ಇಂತಹ ಒಂದು ಪರಿಸ್ಥಿತಿಯಲ್ಲಿ ಒಂದು ಕಡೆಗೆ ಸರಕುಗಳಿಗೆ ಮಾರುಕಟ್ಟೆಯಲ್ಲಿ ಬೆಲೆ ಇಲ್ಲದೇ ಮತ್ತೊಂದು ಕಡೆ ತಮ್ಮ ವೃತ್ತಿಯನ್ನು ಮುಂದುವರಿಸಲಾಗದೇ ಈ ಸಮುದಾಯವರು ಅನಿವಾರ್ಯವಾಗಿ ತಮ್ಮ ಉಪಜೀವನಕ್ಕಾಗಿ ಪರ್ಯಾಯ ವ್ಯವಸ್ಥೆಯನ್ನು ಮಾಡಿಕೊಳ್ಳಲೇಬೇಕಾಯಿತು.

ಸಮಾಜದಲ್ಲಿ ಈ ಸಮುದಾಯಕ್ಕಿಂತ ಬಹಳಷ್ಟು ಅಭಿವೃದ್ಧಿ ಹೊಂದಿದ ಸಮುದಾಯಗಳ ಜೊತೆ ಈ ಸಾಮಾಜಿಕ ವ್ಯವಸ್ಥೆಯಲ್ಲಿ ಇವರು ಜೀವನೋಪಾಯ ಮಾಡುವುದು ಬಹಳಷ್ಟು ಕಠಿಣವಾದ ವಾತವರಣ ಸೃಷ್ಠಿಯಾಯಿತು. ಆದಕಾರಣ ಇವರು ಉಪಜೀವನಕ್ಕಾಗಿ ಯಾವುದಾದರೂ ಕೆಲಸ

ಮಾಡಲೇಬೇಕಾಯಿತು. ಕೃಷಿ ಕೂಲಿಕಾರರಾಗಿ ಕಟ್ಟಡ ಕಾರ್ಮಿಕರಾಗಿ, ಹಮಾಲಿಗರಾಗಿ, ಪೌರಕಾರ್ಮಿಕರಾಗಿ, ಇನ್ನೂ ಮುಂತಾದ ಕೆಲಸಗಳನ್ನು ಮಾಡಿ ಜೀವನ ಸಾಗಿಸುತ್ತಿದ್ದಾರೆ.

ಆಧುನಿಕ ಸಂದರ್ಭದಲ್ಲಿ ಬಹಳಷ್ಟು ವಿಶಾಲವಾಗಿ ತೆರೆದುಕೊಂಡಿರುವ ಜಾಗತೀಕರಣದ ಬಾಹುಗಳ ತೆಕ್ಕೆಗೆ ಈ ಸಮುದಾಯವರು ಒಳಗಾಗಲಿಲ್ಲ. ಯಾಕೆಂದರೆ ಈ ಸಮುದಾಯದವರಿಗೆ ಇನ್ನೂ ಕೂಡ ಗುಣಮಟ್ಟದ ಶಿಕ್ಷಣದ ಕೊರತೆಇದ್ದು ಇವರಿಗೆ ಸಿಗುತ್ತಿರುವ ಶಿಕ್ಷಣ ಕೇವಲ ಅಕ್ಷರಜ್ಞಾನ ಅಷ್ಟೇ ಆಗಿದೆ. ಇಂತಹ ಶಿಕ್ಷಣವನ್ನು ಪಡೆದ ಈ ಸಮುದಾಯದವರು ಸ್ವತಂತ್ರ ಜೀವನ ನಡೆಸುವ ಭರವಸೆ ಕೂಡ ಇನ್ನೂ ಬಂದಿಲ್ಲ.

ಒಂದೇ ಕೇರಿಯಲ್ಲಿ ವಾಸಿಸುವ ಈ ಸಮುದಾಯದವರಲ್ಲಿ ಶಿಕ್ಷಣಪಡೆದ ಕುಟುಂಬ ಹಾಗೂ ಅಕ್ಷರಜ್ಞಾನದಿಂದ ದೂರ ಉಳಿದ ಕುಟುಂಬಗಳಲ್ಲಿ ಅಜಗಜಾಂತರ ವ್ಯತ್ಯಾಸವಿರುವುದು ಕಂಡುಬರುತ್ತದೆ. ಶಿಕ್ಷಣಪಡೆದು ತುಸು ಆರ್ಥಿಕ ಪರಿಸ್ಥಿತಿ ಉತ್ತಮವಾಗಿರುವ ಕುಟುಂಬದಲ್ಲಿರುವವರ ಊಟೋಪಚಾರ, ಉಡುಗೆ-ತೊಡುಗೆಳು, ಅವರ ನಿರೀಕ್ಷೆಗಳು, ಸಾಧ್ಯತೆಗಳು, ಇನ್ನಿತರ ಅಂಶಗಳೂ ಕೂಡ ಅನಕ್ಷರಸ್ಥ ಕುಟುಂಬಗಳಿಗಿಂತ ಸಂಪೂರ್ಣವಾಗಿ ಭಿನ್ನವಾಗಿವೆ. ಆರ್ಥಿಕತೆ ಮತ್ತು ಶಿಕ್ಷಣ ಕ್ಷೇತ್ರಗಳು ಈ ಸಮುದಾಯದವರ ಕೆಲವು ಅಂಶಗಳನ್ನು ನಿರ್ಧರಿಸಿದರೆ ಭೌಗೋಳಿಕ ಪರಿಸರವೂ ಕೂಡ ಹಲವು ಅಂಶಗಳನ್ನು ನಿರ್ಧರಿಸುತ್ತದೆ. ಭೌಗೋಳಿಕವಾಗಿ ಕೊಪ್ಪಳವು ಬಯಲು ಸೀಮೆಯಾಗಿರುವುದರಿಂದ ಇಲ್ಲಿ ಉದ್ಯೋಗದ ಕೊರತೆ ಕಂಡುಬರುತ್ತದೆ. ಕೆಲವು ಸಾರಿ ಉದ್ಯೊಗ ಸಿಕ್ಕರೂ ಸಹ ಕನಿಷ್ಟ ಕೂಲಿಯೂ ದೊರೆಯುವುದಿಲ್ಲ.

ಇನ್ನು ರಾಜಕಾರಣದಲ್ಲಿ ಈ ಸಮುದಾಯದವರ ಪ್ರತಿನಿಧೀಕರಣವಂತು ಬೇರೆ ಜಾತಿ, ಮೇಲ್ವರ್ಗದ ಸಮುದಾಯಗಳಿಗೆ ಹೋಲಿಸಿದರೆ ಬಹಳಷ್ಟು ಕಡಿಮೆ ಇದೆ. ಕೊಪ್ಪಳದಲ್ಲಿ ಈ ಸಮುದಾಯದ ಜನಸಂಖ್ಯೆ ೧೫೦೦ ರಿಂದ ೧೮೦೦ರ ವರಗೆ ಇದ್ದು ಇಡೀ ಜಿಲ್ಲೆಯ ಪ್ರತಿಯೊಂದು ಗ್ರಾಮ ಕುಗ್ರಾಮದಲ್ಲಿಯೂ ಈ ಸಮುದಾಯದವರು ಇದ್ದಾರೆ. ಆದರೆ ಈ ಸಮುದಾಯದಲ್ಲಿ ಯಾರೂ ಕೂಡ ಇನ್ನು ಪ್ರಭಾವಿ ನಾಯಕರಿಲ್ಲ. ಯಾರಾದರೂ ಒಬ್ಬರು ಇದ್ದರೂ ಸಹ ಅವರಿಗೆ ಸರಿಯಾದ ರೀತಿಯಲ್ಲಿ ಮಾರ್ಗದರ್ಶನವಿಲ್ಲದೆ, ರಾಜಕಾರಣದ ಬಗ್ಗೆ ಸರಿಯಾದ ಜ್ಞಾನವಿಲ್ಲದೇ, ಸರ್ಕಾರದ ವತಿಯಿಂದ ಬರುತ್ತಿರುವ ಸೌಲಭ್ಯಗಳನ್ನು ಸರಿಯಾಗಿ ಕೇಳಿ ಪಡೆಯುವ ಧೈರ್ಯ ಇಲ್ಲದೆ ತಮ್ಮ ಮಟ್ಟಿನ ರಾಜಕಾರಣವನ್ನು ಮಾಡುತ್ತಾರೆ. ಇಂತಹ ಶೋಚನೀಯ ಸ್ಥಿತಿಯಲ್ಲಿ ಈ ಸಮುದಾಯಕಷ್ಟೇ ಅಲ್ಲದೆ ಇತರೆ ಎಲ್ಲ ತಳಸಮುದಾಯಗಳಿಗೆ ಅನ್ಯಾಯವಾಗುತ್ತಿದೆ. ಆದ್ದರಿಂದ ಇಂತಹ ಸಮುದಾಯಗಳಿಗೆ ಸಾಮಾಜಿಕ ನ್ಯಾಯ ಒದಗಿಸಿಕೊಡಬಹುದಾಗಿದೆ. ಜೊತೆಗೆ ಸರ್ಕಾರ ಇತರೆ ಮೇಲ್ವರ್ಗದ ಸಮುದಾಯಗಳಂತೆ ಈ

ಸಮುದಾಯಗಳ ಅಭಿವೃದ್ಧಿಗೂ ಸಹಕಾರ ನೀಡಿ ಹಲವಾರು ಸೌಲಭ್ಯಗಳನ್ನು ಒದಗಿಸಿದರೆ ಖಂಡಿತಾ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆ. ಇಂತಹ ಪರಿಹಾರ ಸಿಕ್ಕರೆ ಈ ಸಮುದಾಯಗಳು ಸಹ ಮುಂದುವರೆಯಲು ಸಾಧ್ಯವೆಂದು ಹೇಳಲು ಇಷ್ಟಪಡುತ್ತೇನೆ.

ಸಲಹೆಗಳು :

೧. ಗುಣಮಟ್ಟದ ಮತ್ತು ಪರಿಣಾಮಕಾರಿ ಶಿಕ್ಷಣ ಈ ಸಮುದಾಯದ ಮಕ್ಕಳಿಗೆ ಸಿಗುವಂತಾಗಬೇಕು.

೨. ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಇರುವ ದುಬಾರಿ ಡೊನೇಷನ್ ಕೊಡುವುದನ್ನು ನಿಯಂತ್ರಿಸಿ ಅಂತಹ ಸಂಸ್ಥೆಗಳಲ್ಲಿ ಈ ಸಮುದಾಯದ ಮಕ್ಕಳು ಶಿಕ್ಷಣ ಪಡೆಯುವಂತೆ ವ್ಯವಸ್ಥೆ ಕಲ್ಪಿಸಿ ಕೊಡಬೇಕು.

೩. ಈ ಸಮುದಾಯದ ಮಕ್ಕಳು ಅಪಾಯಕಾರಿ ಕೆಲಸಗಳಲ್ಲಿ ಬಾಲಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಅವರನ್ನು ಗುರುತಿಸಿ ವಸತಿ ಶಾಲೆಗಳ ಮುಖಾಂತರ ಶಿಕ್ಷಣ ಕೊಡುವಂತಾಗಬೇಕು.

೪. ಈ ಸಮುದಾಯದ ವಯಸ್ಕರರು ಹೆಚ್ಚು ಅನಕ್ಷರಸ್ಥರಾಗಿದ್ದಾರೆ. ಅವರಿಗೆ ಪರಿಣಾಮಕಾರಿಯಾದ ವಯಸ್ಕ ಶಿಕ್ಷಣ ಕೊಡುವಂತಾಗಬೇಕು.

೫. ನಿರುದ್ಯೋಗಿ ಯುವಕರಿಗೆ, ಯುವತಿಯರಿಗೆ ಕಂಪ್ಯೂಟರ್ ತರಬೇತಿ, ಬಟ್ಟೆತಯಾರಿಕೆ ತರಬೇತಿ ಇನ್ನಿತರ ಸ್ವಯಂ ಉದ್ಯೋಗ ಕೈಗೊಳ್ಳಲು ತರಬೇತಿ ಕೊಡುವುದರ ಜೊತೆಗೆ ಸುಲಭ ಸಾಲ ಸೌಲಭ್ಯಗಳ ವ್ಯವಸ್ಥೆ ಮಾಡಬೇಕು.

೬. ತಮ್ಮ ಕುಲಕಸಬು ಮಾಡಲು (ಮುಂದುವರೆಸಲು) ತಯಾರಿದ್ದವರಿಗೆ ಚಪ್ಪಲಿ ಅಂಗಡಿ ತೆರೆಯಲು ಸರ್ಕಾರದಿಂದ ಸಾಲಸೌಲಭ್ಯಗಳು ಸುಲಭವಾಗಿ ಸಿಗುವಂತೆ ಆಗಬೇಕು.

೭. ಈ ಸಮುದಾಯದವರು ಮಾಡುತ್ತಿದ್ದ ಸಾಂಪ್ರದಾಯಕ ವೃತ್ತಿಗಳಾದ ಚರ್ಮ ಹದಮಾಡುವುದು, ಚಪ್ಪಲಿ ಹೊಲಿಯುವದು ಇತರೆ ವೃತ್ತಿಗಳು ಮರೆಯಾಗುತ್ತಿದ್ದು ಸರ್ಕಾರ ಈ ಸಂಬಂಧ ಚರ್ಮಗಾರಿಕೆಯಲ್ಲಿರುವ ಹೊಸ ಹೊಸ ತಂತ್ರಜ್ಞಾನ, ವ್ಯಾಪಾರದ ಬಗೆಗೆ ತರಬೇತಿ ಕೊಡಬೇಕು.

೮. ಸರ್ಕಾರ ಈ ಸಮುದಾಯಗಳಿಗೆ ಮುಖ್ಯವಾಗಿ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು.

೯. ಜೀವನೋಪಾಯಕ್ಕಾಗಿ ಇವರು ಮಾಡುತ್ತಿರುವ ಸಮಾನ ಕೆಲಸಕ್ಕೆ ಸಮಾನ ವೇತನ ಸಿಗುವಂತಾಗಬೇಕು.

೧೦. ಈ ಸಮುದಾಯದವರು ಮಾಡುವ ಕೆಲಸಗಳಿಂದ ಇತರ ಜಾತಿ, ಸಮುದಾಯದವರು ಇವರನ್ನು ನೋಡುವ ದೃಷ್ಟಿಕೋನ ಬದಲಾಗಬೇಕು.

೧೧. ಆಧುನಿಕತೆಯ ದಾರಿಯಲ್ಲಿ ಸಾಗುತ್ತಿರುವ ಪ್ರಸ್ತುತ ಸಮಾಜದಲ್ಲಿಯೂ ಕೂಡ ಅಲ್ಲಲ್ಲಿ ಸ್ಪೃಶ್ಯ ಅಸ್ಪೃಶ್ಯ ಎಂಬ ಆಚರಣೆಗಳು ಕಂಡು ಬರುತ್ತಿವೆ. ಇವುಗಳನ್ನು ಹೋಗಲಾಡಿಸಲು ಕ್ರಮ ಕೈಗೊಳ್ಳಬೇಕು.

೧೨. ಈ ಸಮುದಾಯದವರು ಮಾಡುವ ಕೆಲಸ, ಕಾರ್ಯಗಳಿಂದ ಉದಾ : ಜಾಡಿಮಾಲಿ, ಹಮಾಲಿ, ಕಟ್ಟಡ ಕಾರ್ಮಿಕರು ಇನ್ನಿತರ ಕೆಲಸಗಳಿಂದ ಇವರ ಆರೋಗ್ಯ ಹದಗೆಡುವುದು ಸಾಮಾನ್ಯ. ಸೂಕ್ತ ಚಿಕಿತ್ಸೆ ಪದ್ಧತಿ, ವೈದ್ಯಕೀಯ ಸೌಕರ್ಯಗಳನ್ನು ಒದಗಿಸಬೇಕು.

೧೩. ರಾಜಕೀಯದಲ್ಲಿ ಗುರುತಿಸಿಕೊಂಡ ಈ ಸಮುದಾಯದವರಿಗೆ ಎಲ್ಲಾ ರಾಜಕೀಯ ಪಕ್ಷಗಳು ಸೂಕ್ತ ಪ್ರಾತಿನಿಧಿತ್ವ ಕೊಡಬೇಕು.

೧೪. ಈ ಸಮುದಾಯದವರ ಕಲೆ, ಸಾಹಿತ್ಯವನ್ನು ಪೋಷಿಸಿಕೊಂಡು ಹೋಗುವ ವಾತಾವರಣ ನಿರ್ಮಾಣ ಮಾಡಬೇಕು.

೧೫. ಸರ್ಕಾರ ಜಾರಿಗೆ ತಂದ ಅನೇಕ ಯೋಜನೆಗಳು ಈ ಸಮುದಾಯವನ್ನು ತಲುಪುವುದೇ ಇಲ್ಲ. ಇಂತಹ ಸರ್ಕಾರಿ ಯೋಜನೆಗಳನ್ನು ಸದುಪಯೋಗ ಪಡಿಸಿಕೊಳ್ಳಲು ಸಂಬಂಧಿಸಿದ ಇಲಾಖೆಗಳು ಶಿಬಿರ, ಕಾರ್ಯಗಾರವನ್ನು ಏರ್ಪಡಿಸಬೇಕು.

ಪ್ರಬಂಧದ ಅಧ್ಯಾಯಗಳು

ಮಾದಿಗ ಸಮುದಾಯದವರ ಒಂದು ಅಧ್ಯಯನ ಎಂಬ ಶೀರ್ಷಿಕೆಯಡಿಯಲ್ಲಿ ಸಿದ್ಧಪಡಿಸಿದ ಈ ಪ್ರಬಂಧದಲ್ಲಿ ಎಂಟು ಅಧ್ಯಾಯಗಳನ್ನು ಚರ್ಚಿಸಲಾಗಿದೆ. ಮೊದಲಿನ ಅಧ್ಯಯದಲ್ಲಿ 'ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿಯನ್ನು, ಅಧ್ಯಯನಕ್ಕಾಗಿ ತೆಗೆದುಕೊಂಡ ವಿಧಾನವನ್ನು ಹಾಗೂ ಅಧ್ಯಯನದ ರೂಪುರೇಷೆಗಳು, ಮಹತ್ವವನ್ನು ಚರ್ಚಿಸಲಾಗಿದೆ.

ಎರಡನೇಯ ಅಧ್ಯಾಯದಲ್ಲಿ 'ಮಾದಿಗ' ಸಮುದಾಯದವರ ಹಿನ್ನೆಲೆ, ಮಾದಿಗ ಪದನಿಷ್ಪತ್ತಿಯ ಬಗ್ಗೆ ಚರ್ಚಿಸಲಾಗಿದೆ. ಈ ಸಮುದಾಯ ಯಾವ ರೀತಿಯಲ್ಲಿ ಹುಟ್ಟಬಂದಿತು, ಪೌರಾಣಿಕ ಕಥೆಗಳು, ಇವರು ಎಲ್ಲಿಂದ ಬಂದರು ಈ ಹೆಸರು ಬರಲು ಕಾರಣಗಳನ್ನು ಚರ್ಚಿಸಲಾಗಿದೆ.

ಮೂರನೇಯ ಅಧ್ಯಾಯದಲ್ಲಿ ಮಾದಿಗ ಸಮುದಾಯದ ಸಾಮಾಜಿಕ ಜೀವನವನ್ನು ಕುರಿತದ್ದಾಗಿದೆ. ಈ ಅಧ್ಯಾಯದಲ್ಲಿ ಮಾದಿಗ ಸಮುದಾಯದವರ ಸಾಮಾಜಿಕ ಸ್ಥಿತಿಗತಿ, ಕೌಟುಂಬಿಕ ಜೀವನ, ಆಹಾರ ಪದ್ಧತಿ, ವಸತಿ ವ್ಯವಸ್ಥೆ, ಉಡುಗೆ ತೊಡುಗೆ, ನ್ಯಾಯ ಪದ್ಧತಿ, ಕಸಬು, ರಕ್ತಸಂಬಂಧ, ನಂಬಿಕೆ, ವಿಧಿ, ನಿಷೇದಗಳು ಕುರಿತು ಚರ್ಚಿಸಲಾಗಿದೆ.

ನಾಲ್ಕನೇಯ ಅಧ್ಯಯವು ಮಾದಿಗ ಸಮುದಾಯದ ಆಚರಣೆಗಳು ಎಂದಿದ್ದು ಈ ಸಮುದಾಯದವರು ಜೀವನಾವರ್ತನದಲ್ಲಿ ಕೈಗೊಳ್ಳುವ ಪ್ರತಿಯೊಂದು ಆಚರಣೆಗಳು, ಆ ಆಚರಣೆಯ ರೀತಿ ನೀತಿಗಳು ಅವುಗಳ ಬಗೆಗೆ ಇರುವ ನಂಬಿಕೆ, ವಿಧಿ–ವಿಧಾನಗಳು ಮುಂತಾದ ಅಂಶಗಳನ್ನು ಕುರಿತು ಚರ್ಚಿಸಲಾಗಿದೆ ಮತ್ತು ವಾರ್ಷಿಕಾವರ್ತನದಲ್ಲಿ ನಡೆಸುವ ಆಚರಣೆಗಳಾದ ಯುಗಾದಿ, ದಸರಾ, ದೀಪಾವಳಿ, ಹೋಳಿ, ನಾಗರ ಪಂಚಮಿ, ಮೊಹರಂ, ಇನ್ನಿತರ ಹಬ್ಬಗಳನ್ನು ಹಾಗೂ ವಿಶೇಷ ಆಚರಣೆಗಳಾದ ಹುಲಿಗೆಮ್ಮನ ಜಾತ್ರೆ, ಗಾಳೆಮ್ಮನ ಜಾತ್ರೆ, ವಾರಹಿಡಿಯುವುದು, ಹಿರೇರ ಹಬ್ಬದಂತಹ ಆಚರಣೆಗಳ ಬಗ್ಗೆ ಚರ್ಚಿಸಲಾಗಿದೆ.

ಐದನೇಯ ಅಧ್ಯಾಯ ಮಾದಿಗ ಸಮುದಾಯದವರ ಸಾಂಸ್ಕೃತಿಕ ಜೀವನ. ಇದರಲ್ಲಿ ಆರ್ಥಿಕ ಸ್ಥಿತಿ–ಗತಿ, ಶೈಕ್ಷಣಿಕ ಸ್ಥಿತಿ–ಗತಿ ಹಾಗೂ ರಾಜಕೀಯ ಸ್ಥಿತಿ–ಗತಿಗಳ ಬಗ್ಗೆ ಚರ್ಚಿಸಲಾಗಿದೆ. ಮುಖ್ಯವಾಗಿ ಈ ಅಧ್ಯಾಯದಲ್ಲಿ ಈ ಸಮುದಾಯದವರು ಆರ್ಥಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ ಹಿಂದುಳಿಯಲು ಕಾರಣಗಳೇನು ಎಂಬುವುದನ್ನು ಕಂಡುಕೊಳ್ಳಲಾಗಿದೆ. ಆರ್ಥಿಕ ಸಂಕಷ್ಟಗಳಿಂದ ಈ ಸಮುದಾಯದ ಮಕ್ಕಳು ಶಿಕ್ಷಣದಿಂದ ಹೇಗೆ ವಂಚಿತರಾಗುತ್ತಿದ್ದಾರೆ ಎಂಬುವುದನ್ನು ಸಹ ಇಲ್ಲಿ ಚರ್ಚಿಸಲಾಗಿದೆ.

ಆರನೇಯ ಅಧ್ಯಾಯದಲ್ಲಿ ಮಾದಿಗರ ಸಾಹಿತ್ಯ ಎಂದಿದ್ದು ಇದರಲ್ಲಿ ಸೋಬಾನೆ ಪದಗಳು, ವಡಪು, ಒಗಟು, ಮುಂತಾದವುಗಳ ಬಗ್ಗೆ ಚರ್ಚಿಸಲಾಗಿದೆ.

ಏಳನೇಯ ಅಧ್ಯಾಯವು ಬದಲಾಗುತ್ತಿರುವ ಜಗತ್ತಿನಲ್ಲಿ ಮಾದಿಗ ಸಮುದಾಯ ಎಂದಿದ್ದು ಈ ಅಧ್ಯಾಯದಲ್ಲಿ ಮಾದಿಗ ಸಮುದಾಯದವರು ಹಿಂದೆ ಯಾವ ರೀತಿಯ ಜೀವನ ಶೈಲಿಯಲ್ಲಿ ರೂಢಿಸಿಕೊಂಡಿದ್ದರು ಎಂಬುದರ ಬಗೆಗೆ ಹೇಳಲಾಗಿದೆ. ಪ್ರಸ್ತುತ ಜಾಗತೀಕರಣದ ಪ್ರಭಾವ, ಆಧುನಿಕತೆಯ ಗಾಢ ಪರಿಣಾಮದಿಂದ ಯಾವ ರೀತಿಯಲ್ಲಿ ಬದಲಾವಣೆಗೆ ಒಳಗಾಗುತ್ತಿದ್ದಾರೆ, ಅವರ ಕುಲ ಕಸಬುಗಳಲ್ಲಿ ಬದಲಾವಣೆ, ವಸತಿ ವ್ಯವಸ್ಥೆಯಲ್ಲಿ ಬದಲಾವಣೆ, ಆಹಾರ ಪದ್ಧತಿಯಲ್ಲಿ ಬದಲಾವಣೆ, ಕೌಟುಂಬಿಕ ಜೀವನದಲ್ಲಿ ಬದಲಾವಣೆ, ಉಡುಗೆ ತೊಡುಗೆಗಳಲ್ಲಿ ಆದ ಬದಲಾವಣೆಗಳನ್ನು ಚರ್ಚಿಸಲಾಗಿದೆ ಮತ್ತು ಆಧುನಿಕತೆಗೆ ಈ ಸಮುದಾಯದವರು ಯಾವ ರೀತಿ ಹೊಂದಿಕೊಳ್ಳುತ್ತಿದ್ದಾರೆ ಎಂಬ ವಿಷಯವನ್ನು ಕುರಿತು ಹೋಲಿಕೆ ರೀತಿಯಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ ಎಂಟು ಸಮಾರೋಪವಾಗಿದ್ದು, ಈ ಅಧ್ಯಾಯದಲ್ಲಿ ಕ್ಷೇತ್ರಕಾರ್ಯದಲ್ಲಿ ಗಮನಿಸಿದ ವಿಷಯಗಳ ಬಗ್ಗೆ ಚರ್ಚಿಸಿ ಕಂಡುಕೊಂಡ ಫಲಿತಗಳನ್ನು ಕುರಿತು ಚರ್ಚಿಸಲಾಗಿದೆ.

* * *

ವಕ್ತೃ ವಿವರ

ಕ್ರಸಂ	ಹೆಸರು	ವಯಸ್ಸು	ವೃತ್ತಿ	ಊರು
೦೧.	ದಾವಣಗೇರಪ್ಪ	೭೦	ಕುಲಕಸಬು	ಕೊಪ್ಪಳನಗರ
೦೨.	ಸಣ್ಣಮೈಲಾರಪ್ಪ	೬೫	ಕಟಿಗಿಹೊಡೆಯುವುದು	ಕೊಪ್ಪಳ ನಗರ
೦೩	ದುರಗಪ್ಪಕಿಡದಳ	೬೦	ಚರ್ಮಗಾರಿಕೆ	ಕೊಪ್ಪಳ ನಗರ
೦೪.	ಶೆಬ್ಬೆಪ್ಪ ಮಾದಿಗ	೬೫	ಕುಲಕಸಬು	ಕೊಪ್ಪಳನಗರ
೦೫.	ರಗಡಪ್ಪ ದೊಡ್ಡಮನಿ	೬೫	ನಿವೃತ್ತ ಪೌರಕಾರ್ಮಿಕ	ಕೊಪ್ಪಳನಗರ
೦೬.	ಹನುಮಂತಪ್ಪ ಗಿಣಿಗೇರಿ	೬೬	ನಿವೃತ್ತ ಪೌರಕಾರ್ಮಿಕ	ಕೊಪ್ಪಳನಗರ
೦೭.	ಹನುಮಂತಪ್ಪ ದೊಡ್ಡಮನಿ	೬೫	ಶ್ರೀಗವಿಮಠದಲ್ಲಿ ಸೇವೆ	ಕೊಪ್ಪಳ ನಗರ
೦೮.	ಹನುಮಂತಪ್ಪ ಕಂದಾರಿ	೬೦	ಕೃಷಿ	ಕೊಪ್ಪಳ ನಗರ
೦೯.	ದೊಡ್ಡಮೈಲಾರಪ್ಪ ಭಾವಿಮನಿ೬೯		ಚರ್ಮಗಾರಿಕೆ	ಕೊಪ್ಪಳ ನಗರ
೧೦.	ರಾಮಪ್ಪ ಅಕಲಕುಂಪಿ	೬೫	ಹಮಾಲಿ	ಕೊಪ್ಪಳ ನಗರ
೧೧.	ಗುಡದಪ್ಪ ದೊಡ್ಡಮನಿ	೫೫	ಚರ್ಮಗಾರಿಕೆ	ಕೊಪ್ಪಳ ನಗರ
೧೨.	ಗವಿಸಿದ್ದಪ್ಪ ಕಂದಾರಿ	೫೮	ವ್ಯಾಪಾರ,ರಾಜಕೀಯ	ಕೊಪ್ಪಳ ನಗರ
೧೩.	ಹನುಮಂತಪ್ಪ ಬಳ್ಳಾರಿ	೬೦	ನಿವೃತ್ತ ಶಿಕ್ಷಕರು	ಕೊಪ್ಪಳ ನಗರ
೧೪.	ದುರಗಪ್ಪ ಮಾದರ	೬೫	ನಿವೃತ್ತ ಪೌರಕಾರ್ಮಿಕ	ಕೊಪ್ಪಳ ನಗರ
೧೬.	ಸಿದ್ದಪ್ಪ ಕಂದಾರಿ	೫೫	ಹಮಾಲಿ	ಕೊಪ್ಪಳ ನಗರ

೧೭. ಸಣ್ಣಮಲ್ಲಪ್ಪ ಕುಣಕೇರಿ	೫೦	ಕೃಷಿಕಾರ್ಮಿಕ	ಕೊಪ್ಪಳ ನಗರ
೧೮. ಗಾಳೆಪ್ಪ ಮಾದರ	೪೯	ಪೌರಕಾರ್ಮಿಕ	ಕೊಪ್ಪಳ ನಗರ
೧೯. ರಂಗಪ್ಪ ಭಾವಿಮನಿ	೪೫	ಪೌರಕಾರ್ಮಿಕ	ಕೊಪ್ಪಳ ನಗರ
೨೦. ರಾಜಶೇಖರ ದೊಡ್ಡಮನಿ	೪೫	ಬ್ಯಾಂಕ್‌ನೌಕರ	ಕೊಪ್ಪಳ ನಗರ
೨೧ ದೇವಪ್ಪ ಗಿಣಿಗೇರಿ	೪೮	ಶಿಕ್ಷಕ	ಕೊಪ್ಪಳ ನಗರ
೨೨.ಚನ್ನಬಸಪ್ಪ ಹೊಳೆಯಪ್ಪನವರ	೫೦	ವಾಹನ ಚಾಲಕರು	ಕೊಪ್ಪಳ ನಗರ
೨೩. ಹನುಮಂತಪ್ಪ ಕಿಡಿದಾಳ	೫೦	ಪೌರಕಾರ್ಮಿಕ	ಕೊಪ್ಪಳ ನಗರ
೨೪. ಮಂಜುನಾಥ ಕಿರುಬಂಡಿ	೩೨	ರಾಜಕಾರಣಿ	ಕೊಪ್ಪಳ ನಗರ
೨೫ ಗಂಗವ್ವ ಗಿಣಿಗೇರಿ	೬೦	ನಿವೃತ್ತ ಪೌರಕಾರ್ಮಿಕಳು	ಕೊಪ್ಪಳ ನಗರ
೨೬. ಗಾಳೆವ್ವ ಕಿಡಿದಾಳ	೫೫	ಪೌರಕಾರ್ಮಿಕಳು	ಕೊಪ್ಪಳ ನಗರ
೨೭. ಲಕ್ಷ್ಮವ್ವ ದೊಡ್ಡಮನಿ	೫೦	ಪೌರಕಾರ್ಮಿಕಳು	ಕೊಪ್ಪಳ ನಗರ
೨೮. ಫಕೀರವ್ವ ಕುಲಕೇರಿ	೫೨	ಮನೆಗೆಲಸ	ಕೊಪ್ಪಳ ನಗರ
೨೯. ರುದ್ರವ್ವ ಟಪಾಲು	೬೦	ನಿವೃತ್ತ ಪೌರಕಾರ್ಮಿಕಳು	ಕೊಪ್ಪಳ ನಗರ
೩೦. ರೇಣುಕವ್ವ ಕಿಡದಾಳ	೫೨	ಪೌರಕಾರ್ಮಿಕಳು	ಕೊಪ್ಪಳ ನಗರ

ಗ್ರಂಥಸೂಚಿ

೦೧. ಡಾ.ಯು.ಆರ್. ಅನಂತಮೂರ್ತಿ; **'ಬೆತ್ತಲೆ ಪೂಜೆ ಯಾಕೆ ಸಲ್ಲದು'** ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ.

೦೨. ಡಾ.ಯು.ಆರ್. ಅನಂತಮೂರ್ತಿ; **'ಐದು ದಶಕದ ಕಥೆಗಳು'** ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ.

೦೩. ಡಾ.ಯು.ಆರ್. ಅನಂತಮೂರ್ತಿ; **'ಸಂಸ್ಕಾರ'** ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ.

೦೪. ಡಾ.ಯು.ಆರ್. ಅನಂತಮೂರ್ತಿ; **'ಭಾರತೀಪುರ'** ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ.

೦೫. ಡಾ.ಯು.ಆರ್. ಅನಂತಮೂರ್ತಿ; **'ದಿವ್ಯ'** ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ.

೦೬. ಡಾ.ಯು.ಆರ್. ಅನಂತಮೂರ್ತಿ; **'ಯುಗಪಲ್ಲಟ'** ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ.

೦೭. ಡಿ.ಆರ್. ನಾಗರಾಜ; **'ಶಕ್ತಿಶಾರದೆ ಮೇಳ'** ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ.

೦೮. ಡಿ.ಆರ್. ನಾಗರಾಜ; **'ಅಲ್ಲಮಪ್ರಭು ಮತ್ತು ಶೈವಪ್ರತಿಭೆ'** ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ.

೦೯. ಡಿ.ಆರ್. ನಾಗರಾಜ; **'ಸಾಂಸ್ಕೃತಿಕ ಕಥನ'** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೧೦. ಲಕ್ಷ್ಮೀಪತಿ; **'ಮಾಸ್ತಿಕರ ಸಂಸ್ಕೃತಿ'** ಕರ್ನಾಟಕ ಸಾಹಿತ್ಯ ಅಕಾಡಮಿ, ಬೆಂಗಳೂರು.

೧೧. ಡಿ.ಆರ್ ನಾಗರಾಜ; **'ಸಾಂಸ್ಕೃತಿಕ ಕಥನ'** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೧೨. ಜೆ. ಸೋಮಶೇಖರ; **'ಅಭಿಮುಖ'** ಪ್ರಸಾರಾಂಗ, ಮೈಸೂರು ಕನ್ನಡ ವಿಶ್ವವಿದ್ಯಾಲಯ, ಮೈಸೂರು.

೧೩. ಡಾ. ಅರವಿಂದ ಮಾಲಗಿತ್ತಿ; **'ದಲಿತ ಮಾರ್ಗ'** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೧೪. ಅರ್ಜುನ ಗೊಳಸಂಗಿ; **'ದಲಿತಜ್ಞೆ'** ದಲಿತ ಸಾಹಿತ್ಯ ಪರಿಷತ್ತು ರಾಜ್ಯಘಟಕ, ಗದಗ.

೧೫. ಡಾ.ಟಿ.ಆರ್. ಚಂದ್ರಶೇಖರ; **'ದಲಿತ ಅಧ್ಯಯನ'** ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೬. ಡಾ. ವಿರೂಪಾಕ್ಷ ಪೂಜಾರಳ್ಳಿ; **'ದಲಿತರು ಮತ್ತು ಚರಿತ್ರೆ'** ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೭. ರಹಮತ್ ತರೀಕೆರೆ; **'ಸಾಂಸ್ಕೃತಿಕ ಅಧ್ಯಯನ'** ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೧೮. ಡಾ.ಪಿ. ಮಹಾದೇವಯ್ಯ; **'ದಲಿತರು, ಭಾಷೆ ಮತ್ತು ಸಮಾಜ'** ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೯. (ಸಂ) ಮಂಗಳೂರು ವಿಜಯ; **'ಸಂಘರ್ಷ ಅಂಬೇಡ್ಕರ್ ಜೀವನ ಸಾಧನೆ'** ಸಂಬುದ್ಧ ಪ್ರಕಾಶನ, ಬೆಂಗಳೂರು.

೨೦. ರಹಮತ್ ತರಿಕೇರಿ; **'ಪ್ರತಿ ಸಾಂಸ್ಕೃತಿ'** ಕನ್ನಡ ಸಂಘ ಕ್ರೈಸ್ಟ್ ಕಾಲೇಜ್, ಬೆಂಗಳೂರು.

೨೧. ರಹಮತ್ ತರಿಕೇರಿ; **'ಕರ್ನಾಟಕ ಸೂಫಿಗಳು'** ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೨. ಡಾ. ಮಂಜುನಾಥ ಬೇವಿನಕಟ್ಟಿ; **'ಜನಪದ ಸಂಸ್ಕೃತಿ'** ತೇಜಸ್ವಿ ಪ್ರಕಾಶನ, ಹ್ಯಾರಡ. ೧೯೯೪

೨೩. ಬೋರಲಿಂಗಯ್ಯ ಹಿ.ಚಿ.; **'ಕಾಡು ಕಾಂಕ್ರೀಟ್ ಮತ್ತು ಜಾನಪದ'** ಅಕ್ಷರ ಪ್ರಕಾಶನ ಹೆಗ್ಗೋಡು, ಸಾಗರ. ೧೯೯೬

೨೪. ಡಾ. ಮೊಗಳ್ಳಿ ಗಣೇಶ; **'ದಲಿತರು ಮತ್ತು ಜಾಗತೀಕರಣ'** ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ. ೧೯೯೯

೨೫. ಚಲುವರಾಜು; **'ಹಂಪಿಯ ಸ್ಮಾರಕಗಳಲ್ಲಿ ಜಾನಪದೀಯ ಅಂಶಗಳು'** ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೦

೨೬. ಗಂಗಾಧರ ದೈವಜ್ಞ; **'ಬುಡಕಟ್ಟು ಸಮಾಜ ಹುಟ್ಟು ಸಾವಿನ ನಡುವೆ'** ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೦.

೨೭. ಸಂದ್ಯಾರೆಡ್ಡಿ ಕೆ.ಆರ್; **'ಜನಪದ ಸಾಹಿತ್ಯ'** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೦

೨೮. ಡಾ. ಅರ್ಜುನ್ ಗೊಳಸಂಗಿ; **'ದಲಿತರ ಬದುಕು ಮತ್ತು ಸಂಸ್ಕೃತಿ'** ವಿಮೋಚನಾ ಪ್ರಕಾಶನ ಅಥಣಿ, ಬೆಳಗಾಂ.

೨೯. (ಸಂ) ಕೆ. ರಾಮಯ್ಯ **'ಸಿಂಧ್ ಮಾದಿಗರ ಸಂಸ್ಕೃತಿ'** ಕರ್ನಾಟಕ ಸಾಹಿತ್ಯ ಅಕಾಡಮಿ, ಬೆಂಗಳೂರು.

೩೦. ಲಕ್ಷ್ಮಿಪತಿ **'ಮಾಷ್ಟಿಕರ ಸಂಸ್ಕೃತಿ'** ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೩೧. ಡಾ.ಎಂ.ಎಂ. ಕಲಬುರ್ಗಿ; **'ಜನಪದ ಸಾಹಿತ್ಯ ದರ್ಶನ'**

೩೨. ಚನ್ನಣ್ಣ ವಾಲಿಕಾರ; **'ಕರ್ನಾಟಕದ ದೇವದಾಸಿಯರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಸಮಸ್ಯೆಗಳ ಸಮಗ್ರ ಅಧ್ಯಯನ'**

೩೩. (ಸಂ) ಡಾ.ಹಿ.ಚೀ. ಬೋರಲಿಂಗಯ್ಯ ಮತ್ತು ಎ.ಎಸ್. ಪ್ರಭಾಕರ್; **'ಬುಡಕಟ್ಟು ಅಧ್ಯಯನ ಸಂ.೧ ಸಂ.೧'** ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೩

೩೪. ಡಾ. ಮೊಗಳ್ಳಿ ಗಣೇಶ; **'ದಲಿತ ಕಥನ'** ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೬

೩೫. ಡಾ.ಕೆ.ಎಂ. ಮೈತ್ರಿ; **'ಬುಡಕಟ್ಟು ಕುಲಕಸಬುಗಳು'** ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೬

೩೬. ತೀ.ನಂ. ಶಂಕರನಾರಾಯಣ; **'ಕಾಡುಗೊಲ್ಲರ ನಂಬಿಕೆ ಮತ್ತು ಸಂಪ್ರದಾಯಗಳು'** ಪ್ರಸಾರಾಂಗ ಮೈಸೂರು, ವಿ.ವಿ. ೧೯೮೨.

೩೭. ಎಸ್.ಎಸ್. ಹಿರೇಮಠ (ಸಂ) **'ಕರ್ನಾಟಕ ದಲಿತ ಸಂಸ್ಕೃತಿ, ಪರಂಪರೆ ಜಾತ್ರೆಗಳು ಭಾಗ ೨'** ಸಮತಾ ಪ್ರಕಾಶನ ಹೊಸಪೇಟೆ. ೧೯೯೩

೩೮. ಡಾ. ಮಂಜುನಾಥ ಬೇವಿನಕಟ್ಟಿ; **'ಜನಜಾನಪದ'** ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೬

೩೯. ಎ.ಎಸ್. ಪ್ರಭಾಕರ್; **'ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು'** ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೦

೪೦. ಡಾ. ಮಂಜುನಾಥ ಬೇವಿನಕಟ್ಟಿ; **'ಮಲಿಯಮ್ಮ ನಿನ್ನಾಲ್ಕುದೋ...ಉಧೋ...'** ಅಂಬಿಕಾ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್ ಹೊಸಪೇಟೆ.

೪೧. ಡಾ. ಎಲ್ಲಪ್ಪ ಕೆಕೆಪುರ; **'ದೊಕ್ಕಲು ಮಕ್ಕಳು'** ಶ್ರೀ ದುರ್ಗಾ ಪ್ರಕಾಶನ, ರಾಂಪುರ, ಚಿತ್ರದುರ್ಗ. ೧೯೯೭

೪೨. ಡಾ. ಅರ್ಜುನ್ ಗೊಳಸಂಗಿ; **'ದಲಿತರ ಬದುಕು ಮತ್ತು ಸಂಸ್ಕೃತಿ'** ವಿಮೋಚನಾ ಪ್ರಕಾಶನ, ಅಥಣಿ. ಬೆಳಗಾವಿ. ೨೦೦೦



ಕ್ರೈಸ್ತೀಕರಣ ಮಾದಿಗರ ಕೇರಿಯ ನೋಟ



ಕ್ರೈಸ್ತೀಕರಣ ಮಾದಿಗರ ಕೇರಿಯ ನೋಟ.



ಮನೆಗಳ ಸಾಲು



ಪಾಠಶಾಲೆ.



ಸರ್ಕಾರಿ ಶಾಲಾ ಆವರಣ



ಅಂಬೇಡ್ಕರ್ ರಂಗ ಮಂಟಪ.



ಕುಲಕಸುಬಿನ ಪರಿಕರಗಳು.



ಚರ್ಮ ಹದಮಾಡುವುದು.



ವೃತ್ತಿಯಲ್ಲಿ ತೊಡಗಿರು ವೃದ್ಧ.



ಗಂಗಮ್ಮನ ಬಾವಿ.



ಬಳೆಶಾಸ್ತ್ರ



ಮದುವೆ.



ಸೀಮಂತ



ಸತ್ತ ಮುತೈದವಿ ಎರಡೆ

ಬಯಲಾಟದ
ಚಿತ್ರ
ಕ್ಷಣಗಳು





ಆಂಜನೇಯ ದೇವಸ್ಥಾನ.



ಆಂಜನೇಯ
ದೇವಸ್ಥಾನದ
ಗರ್ಭಗುಡಿ.



ಬಾಣಂತಿ ಕಟ್ಟೆ



ಸ್ವಾಮಿಯು ದೇವಸ್ಥಾನ



ಸ್ತ್ರೀರಿಯು ದೇವತೆ.



ಪ್ರಿಶಮ್ಮ ದೇವಸ್ಥಾನದ ಗರ್ಭಗುಡಿ



ಪಾರಿಂಯರ್ಕ್ಯ ಪೇಟಿ.



ನಾಗದೇವತೆ



ನಾಗದೇವತೆಯ ಕಟ್ಟೆ.